ಅಕ್ಟೋಬರ್ 2025



# ಶಾರದಾ
# SHARADA

**QUARTERLY E-JOURNAL IN KANNADA, ENGLISH AND SANSKRIT**



**ಶ್ರೀ ಶಾರದಾನಿಕೇತನ ಅಸೋಸಿಯೇಷನ್ (ನೋಂ) 1972**

Shree Sharada Niketana Association (R) 1972

# 2/1, 'Sevaniketana',Mount Joy Extension,
Hanumanthanagar,Bengaluru-560019.

sharadaniketana@gmail.com

# ಸಂಸ್ಥಾಪಕರು



ಡಿ. ಕೃಷ್ಣಮೂರ್ತಿ
1910 - 1994



ವೆಂಕಟಸುಬ್ಬಯ್ಯ ಎಂ. ಎನ್.
1922 - 2004



ಶ್ರೀ ವಿ ಕೆ ರಾಮಣ್ಣ
1933 - 2025

# ಶ್ರೀಶಾರದಾನಿಕೇತನ ಅಸೋಸಿಯೇಷನ್ (ರಿ)

# 2/1, 'ಸೇವಾನಿಕೇತನ', 1ನೇ ಮುಖ್ಯರಸ್ತೆ, ಮೌಂಟ್ ಜಾಯ್ ಬಡಾವಣೆ
ಹನುಮಂತನಗರ, ಬೆಂಗಳೂರು-560019
Phone: +91-9886739491 & +91-9481782060 E-mail: sharadaniketana@gmail.com

## ಸಂಸ್ಥೆಯ ಧ್ಯೇಯೋದ್ದೇಶಗಳು

1. 1 ರಿಂದ 10 ನೇ ತರಗತಿಯ ಅರ್ಹವಿದ್ಯಾರ್ಥಿಗಳಿಗೆ ಉಚಿತವಾಗಿ ಅಶನವಸನಾದಿಗಳನ್ನು ಕೊಟ್ಟು ವಿದ್ಯಾಭ್ಯಾಸಕ್ಕೆ ಅನುಕೂಲಮಾಡಿಕೊಡುವುದು.

2. ಅರ್ಹ ವಟುಗಳಿಗೆ ಇಂದಿನ ಶಾಲಾವ್ಯಾಸಂಗದ ಜೊತೆಗೆ ಸಾಂಪ್ರದಾಯಿಕವಾಗಿ ವೇದ ಹಾಗೂ ಶಾಸ್ತ್ರಪಾಠಗಳ ಅಧ್ಯಯನವನ್ನು ಮಾಡಿಸುವುದು ಹಾಗೂ ಸರಳ ಪ್ರಯೋಗಗಳ ಪ್ರಾತ್ಯಕ್ಷಿಕತೆ.

3. ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಹಾಗೂ ಸಮಾಜಕ್ಕೆ ಪೂರಕವಾಗಿ ಶಾಸ್ತ್ರ ಹಾಗೂ ಸಾಮಾಜಿಕ ವಿಷಯಗಳ ಬಗ್ಗೆ ಸ್ಪರ್ಧೆ, ಪ್ರವಚನ, ವಿಚಾರಸಂಕಿರಣ ಮುಂತಾದುವುಗಳನ್ನು ಏರ್ಪಡಿಸುವುದು.

4. ವಿವಿಧ ಕ್ಷೇತ್ರಗಳ ಪ್ರತಿಭಾವಂತರುಗಳನ್ನು ಗುರುತಿಸಿ ಈ ಸಂಸ್ಥೆಗೆ ಆಹ್ವಾನಿಸಿ ಅವರ ಮಾರ್ಗದರ್ಶನಗಳ ಮೂಲಕ ಹೆಚ್ಚಿನ ಪ್ರಯೋಜನವನ್ನು ಪಡೆಯುವುದು ಹಾಗೂ ಅವರುಗಳನ್ನು ಶ್ರೀಶಾರದಾನಿಕೇತನ ಅಸೋಸಿಯೇಷನ್ ವತಿಯಿಂದ ಅಭಿನಂದಿಸುವುದು.

5. ಈ ಎಲ್ಲ ಚಟುವಟಿಕೆಗಳನ್ನೂ ನಮ್ಮ ಜಾಲತಾಣದಲ್ಲಿ ತ್ರೈಮಾಸಿಕ ಎಲೆಕ್ಟ್ರಾನಿಕ್ ಜರ್ನಲ್ ಮೂಲಕ ಸಮರ್ಪಕವಾಗಿ ಪ್ರಸಾರಮಾಡಿ ಮಹಾಜನಗಳಿಗೆ ಕಾಲಕಾಲಕ್ಕೆ ತಲುಪುವಂತೆ ಮಾಡುವುದು.

ಇವೆಲ್ಲವನ್ನೂ ಸಾಕಾರಗೊಳಿಸುವುದಕ್ಕಾಗಿ ತಮ್ಮೆಲ್ಲರ ಸಹಕಾರ ಪ್ರೋತ್ಸಾಹ ಅತ್ಯಗತ್ಯ
ತಮ್ಮ ಉದಾರವಾದ ಧನಸಹಾಯವನ್ನು ಸಂಸ್ಥೆಯು ಕೃತಜ್ಞತೆಯಿಂದ ಸ್ವೀಕರಿಸುತ್ತದೆ.

Scan for payment of donations

**Details of our Bank Account**

Sree Sharadaniketana Association
State Bank of India,
Hanumanthanagar Branch,
Bengaluru-560019.
Account No. 43438083378
IFS Code- SBIN0040159

ಶ್ರೀಶಾರದಾನಿಕೇತನ ಅಸೋಸಿಯೇಷನ್
ಬೆಂಗಳೂರು-560 019

ಶಾರದಾ ಅಕ್ಟೋಬರ್ 2025

# ವಿಷಯಾನುಕ್ರಮಣಿಕೆ


| | | | |
|---|---|---|---|
| 1. | ಚಿನ್ತನ | ಚಿನ್ತಕ | 1 |
| 2. | ಗಣೇಶ-ಶಾರದಾ-ಸದ್ಗುರುದೇವತಾಸ್ತುತಿ | ಎಸ್. ಆರ್. ಅನಂತಮೂರ್ತಿ | 3 |
| 3. | ಉತ್ತರಕಾಂಡ-ಶ್ರೀಮದ್ವಾಲ್ಮೀಕಿರಾಮಾಯಣ | ಡಾ|| ಟಿ.ವಿ. ಸತ್ಯನಾರಾಯಣ ತಲಕಾಡು | 6 |
| 4. | ಮಾತೃದೇವೋ ಭವ | ನಂ.ನಾಗಲಕ್ಷ್ಮಿ | 13 |
| 5. | ವೃದ್ಧಾವಸ್ಥೆಯಲ್ಲಿ ಬಾಲ್ಯಾವಸ್ಥೆಯ ನೆನಪುಗಳು | ಪ್ರೊ|| ಕೆ.ಜಿ. ಪ್ರಭಾಕರ | 16 |
| 6. | ಶ್ರೀಮಚ್ಛಂಕರಭಗವತ್ಪಾದರು | ಎಸ್. ಆರ್. ಅನಂತಮೂರ್ತಿ | 18 |
| 7. | ನ್ಯಾಯಾಂಗವ್ಯವಸ್ಥೆಯ ಸ್ಥೂಲಪರಿಚಯ | ಸ.ರ. ಮಾಣಿಕ್ಯ | 22 |
| 8. | सम्स्कृतभाषायाः महत्त्वम् | एस्.आर्. अनन्तमूर्ति | 27 |
| 9. | ಪುಣ್ಯಸ್ಮರಣೆ | ಅಭಿಮಾನಿ | 30 |
| 10. | ಶ್ರೀಶಾರದಾನಿಕೇತನ ಅಸೋಸಿಯೇಷನ್ ನಡೆದುಬಂದ ದಾರಿ | ದೃಷ್ಟ ಶ್ರುತ | 32 |
| 11. | ಸಂಸ್ಥಾವಾರ್ತೆಗಳು | | 39 |


## ಮಹಾಜನಗಳಲ್ಲಿ ವಿನಂತಿ

ನಮ್ಮ ಸಂಸ್ಥೆಯಿಂದ ಪ್ರಕಟವಾಗುತ್ತಿರುವ

**’ಶಾರದಾ’ ತ್ರೈಮಾಸಿಕ ವಿದ್ಯುನ್ಮಾನ ಪತ್ರಿಕೆಯಲ್ಲಿ ಪ್ರಕಟಿಸುವುದಕ್ಕಾಗಿ**

ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಕನ್ನಡ, ಸಂಸ್ಕೃತ ಹಾಗೂ ಆಂಗ್ಲ ಭಾಷೆಗಳಲ್ಲಿ

**ಲೇಖನಗಳನ್ನು ಆಹ್ವಾನಿಸಲಾಗಿದೆ.**

ವೇದಾನ್ತ, ಸಾಹಿತ್ಯ, ವ್ಯಕ್ತಿಪರಿಚಯ, ಕಲೆ, ಭಾಷೆ, ಸಂಸ್ಕೃತಿ, ಇತಿಹಾಸ, ಹಾಸ್ಯಲೇಖನ

**ಮುಂತಾದ ವಿಷಯಗಳ ಬಗ್ಗೆ ಲೇಖನಗಳಿಗೆ ಸ್ವಾಗತ.**

ಲೇಖನಗಳು ಎ-4 ಅಳತೆಯಲ್ಲಿ 3 ಪುಟಗಳಿಗೆ ಮೀರದಂತಿರಬೇಕು.

**ಲೇಖನಗಳ ಸ್ವೀಕೃತಿಯು ಸಂಪಾದಕ ಮಂಡಳಿಯ ವಿವೇಚನೆಗೆ ಬದ್ಧವಾಗಿರುತ್ತದೆ.**

# ಚಿನ್ತನ

## ಜ್ಞಾನಾರ್ಜನೆಗೆ ಸಾಧನಗಳು

. ಅವರಲ್ಲಿ ಕೆಲವರು ಪಾಠದ ಸಮಯವಾದಮೇಲೆಯೂ ಆಟಪಾಟಗಳಲ್ಲಿ ಆಸಕ್ತಿವಹಿಸದೆ ಬಹುಪಾಲು ಅದೊಂದು ಪಾಠಶಾಲೆ. ಸುಮಾರು ಇಪ್ಪತ್ತೈದು ವಿದ್ಯಾರ್ಥಿ-ವಿದ್ಯಾರ್ಥಿನಿಯರುಗಳಿರುವ ಒಂದು ತರಗತಿ. ಉಪಾಧ್ಯಾಯರುಗಳೆಲ್ಲರೂ ಅತ್ಯನ್ತ ಶ್ರದ್ಧೆಯಿಂದ ಪಾಠಗಳನ್ನು ಶಿಷ್ಯರಿಗೆ ಬೋಧಿಸುತ್ತಾರೆ. ಶಿಷ್ಯರೂ ಅಷ್ಟೇ ಶ್ರದ್ಧೆಯಿಂದ ಪಾಠವನ್ನು ಕೇಳುತ್ತಾರೆ ಅಧ್ಯಯನದಲ್ಲಿಯೇ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಮತ್ತೆ ಕೆಲವರು ಶಾಲೆಯ ಸಮಯವಾದಮೇಲೆ ಆಟಪಾಟಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ಯಾವ ಒತ್ತಡಕ್ಕೂ ಒಳಗಾಗದೆ ಆರಾಮವಾಗಿದ್ದು ಊಟ ನಿದ್ರೆ ಮೊದಲಾದ ದೈನಂದಿನ ಎಲ್ಲ ಕಾರ್ಯಗಳನ್ನೂ ಯಥಾರೀತಿಯಲ್ಲೇ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಎಲ್ಲರೂ ಪರೀಕ್ಷೆಯನ್ನು ಎದುರಿಸಿದ್ದಾಯಿತು. ಫಲಿತಾಂಶದ ದಿನ ಬಂದೇಬಿಟ್ಟಿತು. ಉಪಾಧ್ಯಾಯರಿಂದ ಮೊದಲಾಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪಾಲಕರವರೆಗೂ ಎಲ್ಲರಿಗೂ ಏನೋ ದುಗುಡ. ಏನೋ ಚಿಂತೆ. ಆದರೂ, ಯಾವಾಗಲೂ ಅಧ್ಯಯನದಲ್ಲಿಯೇ ತೊಡಗಿಕೊಂಡಿರುತ್ತಿದ್ದ ವಿದ್ಯಾರ್ಥಿ ವಿದ್ಯಾರ್ಥಿನಿಯರ ವಿಷಯದಲ್ಲಿ ಒಂದು ಭರವಸೆ. ಶೇಕಡ ನೂರರಷ್ಟು ಅಂಕಗಳನ್ನು ಪಡೆದು ಶಾಲೆಗೂ ಪೋಷಕರಿಗೂ ಕೀರ್ತಿಯನ್ನು ತರುತ್ತಾರೆಂಬ ನಿಶ್ಚಯ. ಎರಡನೆಯ ಪಂಗಡದವರೂ ಸಾಮಾನ್ಯ ಶ್ರೇಣಿಯಲ್ಲಿ ಉತ್ತೀರ್ಣರಾಗಬಹುದೆಂಬ ಆಶಯ. ಆದರೆ ಹಾಗಾಗಲಿಲ್ಲ. ಎರಡನೆಯ ಪಂಗಡದವರಲ್ಲಿ ಬಹಳಷ್ಟು ವಿದ್ಯಾರ್ಥಿಗಳು ಪ್ರಥಮಶ್ರೇಣಿಯಲ್ಲಿ ಅದರಲ್ಲೂ ವಿಶೇಷದರ್ಜೆಯಲ್ಲಿ ಉತ್ತೀರ್ಣರಾಗುತ್ತಾರೆ. ಒಬ್ಬ ವಿದ್ಯಾರ್ಥಿಯಂತೂ ಎಲ್ಲ ವಿಷಯಗಳಲ್ಲೂ ಶೇಕಡ ನೂರರಷ್ಟು ಅಂಕಗಳನ್ನು ಪಡೆದು ಶಾಲೆಗೂ ಪೋಷಕರಿಗೂ ಕೀರ್ತಿಯನ್ನು ತರುತ್ತಾನೆ. ಯಾವ ಒತ್ತಡಕ್ಕೂ ಒಳಗಾಗದೆ, ತರಗತಿಯಲ್ಲಿ ಕೇವಲ ಉಪಾಧ್ಯಾಯರು ಮಾಡುವ ಪಾಠಗಳ ಶ್ರವಣಮಾತ್ರದಿಂದ ಈ ಸಾಧನೆಯಾದರೂ ಅವನಿಗೆ ಹೇಗೆ ಸಾಧ್ಯವಾಯಿತು? ಉಳಿದವರಲ್ಲಿ ಕೆಲವರು ವಿಶೇಷಪರಿಶ್ರಮದ ಹೊರತಾಗಿಯೂ ಸಾಮಾನ್ಯಶ್ರೇಣಿಯಲ್ಲಿ ಉತ್ತೀರ್ಣರಾಗುವುದಕ್ಕೆ ಏನು ಕಾರಣ?

ಜ್ಞಾನಾರ್ಜನೆಗೆ ಮೂರು ಸಾಧನಗಳನ್ನು ಶಾಸ್ತ್ರದಲ್ಲಿ ವಿಧಾನಮಾಡಿದ್ದಾರೆ. ಶ್ರವಣ, ಮನನ ಮತ್ತು ನಿದಿಧ್ಯಾಸನಗಳೇ ಆ ಸಾಧನಗಳು. 1. ಶ್ರವಣವೆಂದರೆ ಶಿಕ್ಷಕರು ಬೋಧಿಸುವ ವಿಷಯವನ್ನು ಅನನ್ಯಮನಸ್ಕನಾಗಿ ಬೇರೆ ಯಾವ ವಿಷಯವನ್ನೂ ಮನಸ್ಸಿನಲ್ಲಿ ಧ್ಯಾನಿಸದೆ, ಕಿವಿಯಿಂದ ಕೇಳಿ

ಅದನ್ನು ಗ್ರಹಿಸಿ ಬುದ್ಧಿಯಲ್ಲಿ ಸಂರಕ್ಷಿಸಿಕೊಳ್ಳುವುದು. ಇಷ್ಟುಮಾತ್ರದಿಂದ ಅವರಿಗೆ ವಿಷಯದ ಜ್ಞಾನವು ಪೂರ್ಣವಾಗಿ ಆಗಿಬಿಡುತ್ತದೆ. 'ಶ್ರವಣಂ ನಾಮ ವಿಷಯತಾತ್ಪರ್ಯಾವಧಾರಣಾನುಕೂಲಾ ಮಾನಸೀ ಕ್ರಿಯಾ'. ಇವರು ಉತ್ತಮಾಧಿಕಾರಿಗಳು.

2. ಮನನವೆಂದರೆ ಶಿಕ್ಷಕರು ಬೋಧಿಸುವ ವಿಷಯವನ್ನು ಶ್ರವಣಮಾಡುವುದರಿಂದ ಮಾತ್ರ ಅದನ್ನು ಯಥಾವತ್ತಾಗಿ ಗ್ರಹಿಸಿ ಬುದ್ಧಿಯಲ್ಲಿ ಸಂರಕ್ಷಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಅದರ ವಿಷಯದಲ್ಲಿ ಬರಬಹುದಾದ ಅತಿವ್ಯಾಪ್ತಿ ಮೊದಲಾದ ಅನೇಕ ಸಂಶಯಗಳನ್ನು ಮತ್ತೆ ಮತ್ತೆ ತರ್ಕಿಸಿ ನಿವಾರಿಸಿಕೊಂಡ ನಂತರವೇ ವಿಷಯದ ಯಥಾವತ್ತಾದ ಜ್ಞಾನವು ಉಂಟಾಗುತ್ತದೆ. ಇವರು ಮಧ್ಯಮಾಧಿಕಾರಿಗಳು. 'ಮನನಂ ನಾಮ ಶಬ್ದಾವಧಾರಿತೇ ಅರ್ಥೇ ಮಾನಾನ್ತರವಿರೋಧಶಙ್ಕಾಯಾಂ ತನ್ನಿರ್ಧಾರಣಾನುಕೂಲತರ್ಕಾತ್ಮಕಜ್ಞಾನವತೋ ಮಾನಸೋ ವ್ಯಾಪಾರಃ.' ಇವರು ಮಧ್ಯಮಾಧಿಕಾರಿಗಳು.

3. ನಿದಿಧ್ಯಾಸನವೆಂದರೆ- ದೀರ್ಘಕಾಲದಿಂದಲೂ ಶೇಖರಣೆಯಾಗಿರುವ ಅನೇಕಾನೇಕ ವಿಷಯಾಂತರಗಳ ವಾಸನೆಯಿಂದ ವಾಸಿತವಾಗಿರುವ ಮನಸ್ಸನ್ನು ಆ ವಿಷಯಾನ್ತರದಿಂದ ಒಳಕ್ಕೆಳೆದುಕೊಂಡು ಪ್ರಕೃತವಿಷಯವು ಮಾತ್ರ ಮನಸ್ಸಿನಲ್ಲಿ ಸ್ಥಿರವಾಗಿ ಕೇನ್ದ್ರೀಕೃತವಾಗುವ ಹಾಗೆ ಮಾಡಿಕೊಳ್ಳುವ ಒಂದು ವಿಶೇಷ ಮಾನಸಿಕವ್ಯಾಪಾರ. 'ನಿದಿಧ್ಯಾಸನಂ ನಾಮ ಅನಾದಿದುರ್ವಾಸನಯಾ ವಿಷಯೇಷು ಆಕೃಷ್ಯಮಾಣಸ್ಯ ಚಿತ್ತಸ್ಯ ವಿಷಯೇಭ್ಯ ಅವಕೃಷ್ಯ ಪ್ರಕೃತವಿಷಯಕಸ್ಥೈರ್ಯಾನುಕೂಲೋ ಮಾನಸೋ ವ್ಯಾಪಾರಃ'. ಇವರು ಸಾಮಾನ್ಯಾಧಿಕಾರಿಗಳು.

ಈ ಅಧಿಕಾರಭೇದಕ್ಕೆ ಏನು ಕಾರಣ? ಇದಕ್ಕೆ ಅವರವರಲ್ಲಿರುವ ಧಾರಣಸಾಮರ್ಥ್ಯವೇ ಕಾರಣ. ವಿದ್ಯಾರ್ಥಿಗಳಲ್ಲಿ ಈ ಧಾರಣಸಾಮರ್ಥ್ಯವು ತೀವ್ರವಾಗಿದ್ದರೆ ಅವರಿಗೆ ಕೇವಲ ಶ್ರವಣಮಾತ್ರದಿಂದ ವಿಷಯದ ಪರಿಪೂರ್ಣಜ್ಞಾನವಾಗಿಬಿಡುತ್ತದೆ. ಮತ್ತೆ ಕೆಲವರಿಗೆ ಈ ಧಾರಣಸಾಮರ್ಥ್ಯವು ಅಷ್ಟು ತೀವ್ರವಾಗಿರದಿದ್ದರೆ ಅಂಥವರಿಗೆ ಕೇವಲ ಶ್ರವಣವು ಸಾಕಾಗುವುದಿಲ್ಲ. ಮನನವೂ ಬೇಕಾಗುತ್ತದೆ. ಇವರು ಮಧ್ಯಮಾಧಿಕಾರಿಗಳು. ಈ ಧಾರಣಸಾಮರ್ಥ್ಯವು ಸಾಧಾರಣವಾಗಿರುವ ಉಳಿದವರಿಗೆ ಶ್ರವಣ ಮನನಗಳ ಜೊತೆಗೆ ನಿದಿಧ್ಯಾಸನವೂ ಬೇಕಾಗುತ್ತದೆ. ಇವರು ಸಾಮಾನ್ಯಾಧಿಕಾರಿಗಳು. ಇನ್ನು ಈ ಧಾರಣಸಾಮರ್ಥ್ಯವು ತೀವ್ರವಾಗಬೇಕಾದರೆ ಅನುಸರಿಸಬೇಕಾಗಿರುವ ಸಾಧನಗಳನ್ನು ಯೋಗಶಾಸ್ತ್ರದಲ್ಲಿ ಹೇಳಿದೆ. ಅದನ್ನು ಮುಂದೆ ವಿಚಾರಮಾಡೋಣ



# ಗಣೇಶ-ಶಾರದಾ-ಸದ್ಗುರುದೇವತಾಸ್ತುತಿ

ಎಸ್.ಆರ್. ಅನಂತಮೂರ್ತಿ
ಬೆಂಗಳೂರು-560061

**ಗಣೇಶಸ್ತುತಿ-**

ಆನಂದಮಾತ್ರಮಕರಂದಮನಂತಗನ್ಧಂ
ಯೋಗೀನ್ದ್ರಸುಸ್ಥಿರಮಿಲಿಂದಮಪಾಸ್ತಬನ್ಧಮ್ ।
ವೇದಾನ್ತಸೂರ್ಯಕಿರಣೈಕವಿಕಾಸಶೀಲಂ
ಹೇರಂಬಪಾದಶರದಂಬುಜಮಾನತೋಽಸ್ಮಿ ॥

ಶಬ್ದಾಲಂಕಾರ, ಅರ್ಥಾಲಂಕಾರ, ಪ್ರಾಸಾನುಪ್ರಾಸಗಳಿಂದ ಕೂಡಿ ಆ ಬಾಲವೃದ್ಧರಾದಿಯಾಗಿ ಸರ್ವರೂ ಸುಲಭವಾಗಿ ಪಠಿಸಬಹುದಾದ ಪ್ರಥಮಪೂಜ್ಯನಾದ ಗಣಪತಿಯ ಸ್ತೋತ್ರವಿದು. ಕೇವಲ ಪಠನಮಾತ್ರದಿಂದಲೇ ಮನಸ್ಸಿಗೆ ಮುದವನ್ನೂ ಭಕ್ತಿಭಾವವನ್ನೂ ತಂದುಕೊಡುವ ಈ ಶ್ಲೋಕವನ್ನು ಅರ್ಥಪೂರ್ಣವಾಗಿ ಪಠಿಸಿದರಂತೂ ಮುಕ್ತಿಯೇ ಲಭಿಸುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಕವಿಯು ಇದನ್ನು ಕಂಠೋಕ್ತವಾಗಿ ಹೇಳಿದ್ದಾನೆ. ಶಕ್ವರೀ ಛಂದಸ್ಸಿಗೆ ಸೇರಿದ ಈ ಶ್ಲೋಕವು ವಸಂತತಿಲಕಾ ವೃತ್ತದಲ್ಲಿ ಉಪನಿಬದ್ಧವಾಗಿದೆ. ಒಂದೊಂದು ಪಾದದಲ್ಲಿಯೂ ೧೪ ಅಕ್ಷರಗಳಿದ್ದು ಇದಕ್ಕೆ ಲಕ್ಷಣವನ್ನು ಅಲಂಕಾರಶಾಸ್ತ್ರದಲ್ಲಿ ಹೀಗೆ ಹೇಳಿದೆ 'ಉಕ್ತಂ ವಸಂತತಿಲಕಂ ತಭಜಾಜಗೌಗಃ' ಇದು 'ವಸಂತತಿಲಕಾ' ಎಂಬುದಾಗಿ ಸ್ತ್ರೀಲಿಂಗರೂಪದಲ್ಲೂ ಪ್ರಯೋಗವಾಗುತ್ತದೆ.

ಈಗ ಈ ಶ್ಲೋಕದ ಅರ್ಥವನ್ನು ನೋಡೋಣ- ಕವಿಯು ಪ್ರಥಮಪೂಜ್ಯನಾದ ಗಣಪತಿಯ ಪರಮಪವಿತ್ರಪಾದಗಳನ್ನು ಶರತ್ಕಾಲದಲ್ಲಿ ವಿಕಸಿತವಾಗಿರುವ ಕಮಲಗಳಿಗೆ ಹೋಲಿಸಿರುತ್ತಾನೆ. ಪ್ರಕೃತ ಗಣಪತಿಯ ಪವಿತ್ರಪಾದಗಳೆಂಬ ಕಮಲಕ್ಕೆ ಕೇವಲ ಆನಂದವೇ ಮಕರಂದವಾಗಿದೆ. ಇದರ ಗಂಧವಾದರೋ ಅನಂತ. ಇಷ್ಟು ಜಾಗಕ್ಕೆ ಇಷ್ಟು ಕಾಲಕ್ಕೆ ಮಾತ್ರ ಮೀಸಲು ಎಂಬುದಿಲ್ಲ. ಭೌತಿಕವಾದ ಪುಷ್ಪಗಳ ಗಂಧಕ್ಕೆ ಎಲ್ಲೆಯುಂಟು. ಆದರೆ ಗಣಾಧಿಪನ ಪಾದಗಳೆಂಬ ಕಮಲಕ್ಕೆ ಇಂತಹ ಯಾವ ಮಿತಿಯಾಗಲೀ ಕಟ್ಟುಪಾಡಾಗಲೀ ಇರುವುದಿಲ್ಲ. ಇದನ್ನೇ ವಿಷಯಾನಂದಕ್ಕಿಂತಲೂ ಭಿನ್ನವಾಗಿರುವ ಸ್ವರೂಪಾನಂದವೆಂಬುದಾಗಿ ವೇದಾನ್ತಗಳಲ್ಲಿ ಹೇಳಿದೆ. ಇನ್ನು ಈ ಆನಂದಮಾತ್ರವಾಗಿರುವ ಮಕರಂದವನ್ನು ಆಸ್ವಾದಿಸುವವರಾದರೂ ಯಾರು? ತಮ್ಮ ಸ್ವರೂಪದಲ್ಲಿ ನೆಲೆನಿಂತಿರುವಂತಹ ಯೋಗಿವರೇಣ್ಯರುಗಳೆಂಬ ದುಂಬಿಗಳು. ಭಗವಾನ್ ಗಣಪತಿಯ ಪಾದಗಳೆಂಬ ಈ ಕಮಲದ ಮಕರಂದವನ್ನು ಆಸ್ವಾದಿಸಿದ

ಮಾತ್ರದಿಂದ ಎಲ್ಲ ಸಂಸಾರಬಂಧನಗಳಿಂದಲೂ ಬಿಡುಗಡೆಯನ್ನು ಹೊಂದಿ ತಮ್ಮ ಪರಮಾರ್ಥಸ್ವರೂಪದಲ್ಲಿ ನೆಲೆನಿಂತಿರುವ ಯೋಗಿವರೇಣ್ಯರೆಂಬ ದುಂಬಿಗಳು. ಇಷ್ಟೆಲ್ಲ ಮಹಿಮೆಯಿಂದ ಕೂಡಿರುವ ಈ ಕಮಲವು ಅರಳಿರುವುದಾದರೂ ಯಾವುದರಿಂದ? ಸಾಮಾನ್ಯವಾಗಿ ಪುಷ್ಪಗಳು ವಿಕಸಿತವಾಗುವುದಕ್ಕೆ ಬೇಕಾಗಿರುವುದು ಸೂರ್ಯಕಿರಣ. ಈ ಅಲೌಕಿಕವಾದ ಕಮಲವು ವಿಕಸಿತವಾಗುವುದಕ್ಕೆ ಅವಶ್ಯಕವಾದ ಸೂರ್ಯಕಿರಣವೂ ಅಲೌಕಿಕವಾಗಿಯೇ ಇರಬೇಕಲ್ಲವೇ ! ಹೌದು ಅದೇ, ಬ್ರಹ್ಮಾನುಭವಕ್ಕೆ ಕಾರಣವಾದ ವೇದಾನ್ತವಾಕ್ಯಗಳೆಂಬ ಸೂರ್ಯಕಿರಣ !! ಈ ವೇದಾನ್ತಸೂರ್ಯಕಿರಣಗಳಿಂದ ಮಾತ್ರವೇ ಬ್ರಹಾನುಭವವು ವಿಕಾಸವಾಗಬಹುದಾಗಿದೆ. ಬೇರೆ ಯಾವ ಸಾಧನಗಳಿಂದಲೂ ಸಾಧ್ಯವಿಲ್ಲ ಎಂಬ ಅಂಶವೇ ಇಲ್ಲಿ ವಿವಕ್ಷಿತವಾಗಿದೆ ಭಗವಾನ್ ಶಂಕರರು ತಮ್ಮ ಬ್ರಹ್ಮಸೂತ್ರಭಾಷ್ಯದಲ್ಲಿ ಇದನ್ನು ಸ್ಪಷ್ಟವಾಗಿ ತಿಳಿಸಿಕೊಟ್ಟಿರುತ್ತಾರೆ. ***'ವೇದಾನ್ತವಾಕ್ಯಾರ್ಥವಿಚಾರಣಾಧ್ಯವಸಾನನಿರ್ವೃತ್ತಾ ಹಿ ಬ್ರಹ್ಮಾವಗತಿಃ'*** (೧-೧-೨) । ಇಂತಹ ಅಸಾಧಾರಣಮಹಿಮಾನ್ವಿತವಾದ ಶರತ್ಕಾಲದ ಕಮಲದಂತಿರುವ ಹೇರಂಬನ ಪಾದಯುಗಲಗಳನ್ನು ತಲೆಬಾಗಿ ನಮಸ್ಕರಿಸುತ್ತೇನೆ.

ಶಾರದಾಸ್ತುತಿ–

**ಶರಣಂ ಕರವಾಣಿ ಶರ್ಮದಂ ತೇ**
**ಚರಣಂ ವಾಣಿ ಚರಾಚರೋಪಜೀವ್ಯಮ್ ।**
**ಕರುಣಾಮಸೃಣೈಃ ಕಟಾಕ್ಷಪಾತೈಃ**
**ಕುರು ಮಾಮಂಬ ಕೃತಾರ್ಥಸಾರ್ಥವಾಹಮ್ ॥**

ಇದು ವಾಗ್ದೇವಿಯಾದ ಶಾರದೆಯನ್ನು ಕುರಿತಾದ ಒಂದು ಸ್ತೋತ್ರ. ಸರಳವಾದ ಪದಪುಞ್ಜಗಳಿಂದ ಕೂಡಿ ಪಾರಾಯಣಕ್ಕೆ ಯೋಗ್ಯವಾಗಿರುವ ಒಂದು ಮನೋಹರವಾದ ಪದ್ಯ. ಸಕಲ ಚರಾಚರಜೀವಿಗಳಿಗೂ ಜೀವನಾಧಾರವಾಗಿ ಅಭ್ಯುದಯ ನಿಃಶ್ರೇಯಸಗಳಿಗೆ ಕಾರಣವಾಗಿರುವ, ಆನನ್ದಪ್ರದವಾದ ನಿನ್ನ ಚರಣಗಳನ್ನು ಎಲೈ ವಾಣಿಯೇ! ನಾನು ಶರಣು ಹೋಗುತ್ತೇನೆ. ***'ಹೇ ವಾಣಿ! ತೇ ಚರಣಂ ಶರಣಂ ಕರವಾಣಿ'*** ಎಂತಹ ಸುಂದರವಾದ ನುಡಿಗಟ್ಟು! ದೇವಿಯ ಚರಣಗಳಿಗೆ ಇಲ್ಲಿ 'ಶರ್ಮದಮ್' ಮತ್ತು 'ಚರಾಚರೋಪಜೀವ್ಯಮ್' ಎಂಬ ಎರಡು ವಿಶೇಷಣಗಳನ್ನು ಕೊಟ್ಟಿದೆ. ಶರ್ಮ ಎಂದರೆ ಸುಖ ಆನನ್ದ ಎಂದರ್ಥ. ಶರ್ಮದ ಎಂದರೆ ಸುಖವನ್ನು ಕೊಡುವ ಎಂದರ್ಥ. ಇಲ್ಲಿ ಸುಖ ಎಂದರೆ ವಿಷಯೇಂದ್ರಿಯಗಳ ಸಂಯೋಗದಿಂದ ಉಂಟಾಗುವ ತಾತ್ಕಾಲಿಕವಾದ ಸುಖವಲ್ಲ. ವಿಷಯೇಂದ್ರಿಯಗಳ ಸಂಪರ್ಕವನ್ನು ಬಯಸದ ಸಹಜವಾದ ಸ್ವರೂಪಾನನ್ದ. ಎಲ್ಲ ಸಂಸಾರಿಜೀವಿಗಳೂ ಈ ಸ್ವರೂಪಾನನ್ದದ ಒಂದು ಮಾತ್ರೆಯಿಂದ ಭಾಗದಿಂದ ಮಾತ್ರ ಉಪಜೀವ್ಯರಾಗಿದ್ದಾರೆ. ***ಏಷೋಽಸ್ಯ ಪರಮ ಆನನ್ದಃ ಏತಸ್ಯೈವ ಆನನ್ದಸ್ಯ ಅನ್ಯಾನಿ ಭೂತಾನಿ ಮಾತ್ರಾಮುಪಜೀವನ್ತಿ*** (ಬೃ.ಉ. ೪-೩-೩೨). ಈ ಸಹಜವಾದ ಆನನ್ದವು ಇಲ್ಲದೇ ಹೋಗಿಬಿಟ್ಟಿದ್ದಿದ್ದರೆ ಯಾರು ತಾನೇ ಉಸಿರಾಡುವುದಕ್ಕೆ ಸಾಧ್ಯವಾಗುತ್ತದೆ? ಯಾರು ತಾನೇ ಕ್ರಿಯೆಗಳಲ್ಲಿ ಪ್ರವೃತ್ತರಾಗುತ್ತಾರೆ? ಇದನ್ನೇ ತೈತ್ತಿರಿಯೋಪನಿಷತ್ತಿನಲ್ಲಿ ಸ್ಪಷ್ಟವಾಗಿ ಹೇಳಿದೆ. ***ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ । ಯದೇಷ ಆಕಾಶ ಆನನ್ದೋ ನ ಸ್ಯಾತ್*** (ತೈ.ಉ. ೨-೭-೩).

ಎಲ್ಲ ಲೌಕಿಕವಾದ ಆನನ್ದಗಳೂ ಇದನ್ನೇ ಉಪಜೀವಿಸಿಕೊಂಡು ಪ್ರಕಟವಾಗುತ್ತವೆ ಎಂದು ಹೇಳಿರುವುದರಿಂದ ದೇವಿಯ ಪಾದಗಳಿಗೆ 'ಚರಾಚರೋಪಜೀವ್ಯಮ್' ಸಕಲ ಚರಾಚರಪ್ರಾಣಿಗಳಿಗೂ ಉಪಜೀವ್ಯವಾಗಿದೆ ಎಂಬ ವಿಶೇಷಣವನ್ನು ಕೊಟ್ಟಿರುವುದು ಅರ್ಥಪೂರ್ಣವಾಗಿದೆ. ಇಂತಹ ನಿನ್ನ ಪವಿತ್ರಪಾದಗಳನ್ನು ಶರಣುಹೋಗುತ್ತೇನೆ. ಕರುಣಾಮಸೃಣೈಃ ಕರುಣಾಪೂರಿತವೂ ಪ್ರೇಮಪೂರ್ಣವೂ ಆಗಿರುವ ನಿನ್ನ ಕಟಾಕ್ಷವನ್ನು ಬೀರುವುದರ ಮೂಲಕ ಹೇ ತಾಯೇ! ನನ್ನನ್ನು ಕೃತಾರ್ಥನನ್ನಾಗಿ ಮಾಡು.

ಶ್ರೀಶಂಕರಾಚಾರ್ಯಸ್ತುತಿ–

ಸಂಸಾರಸರ್ಪಪರಿದಷ್ಟವಿನಷ್ಟಜನ್ತು–
ಸಞ್ಜೀವನಾಯ ಪರಯಾ ಕೃಪಯೋಪಪನ್ನಃ ।
ಬ್ರಹ್ಮಾವಬೋಧಪರಮೌಷಧಮುದ್ವಹನ್ ಯ–
ಸ್ತಂ ಶಂಕರಂ ಪರತರಂ ಭಿಷಜಾಂ ನಮಾಮಿ ॥

ಆಚಾರ್ಯ ಶ್ರೀಮಚ್ಛಙ್ಕರಭಗವತ್ಪಾದರನ್ನು ಕುರಿತಾದ ಒಂದು ಪ್ರಶಸ್ತಿಶ್ಲೋಕವಿದು. ಶಂಕರರು ಸರ್ವಜ್ಞರು, ಅದ್ವಿತೀಯರು. ಐದನೆಯ ವರ್ಷದಲ್ಲಿ ಉಪನಯನ, ಎಂಟನೆಯ ವರ್ಷಕ್ಕೆ ನಾಲ್ಕುವೇದಗಳ ಪರಿಪೂರ್ಣ ಅಧ್ಯಯನ, ಹನ್ನೆರಡನೆಯ ವರ್ಷಕ್ಕೆ ಸಕಲಶಾಸ್ತ್ರಗಳ ಪ್ರಮಾಣಭೂತವಾದ ಪಾಂಡಿತ್ಯ, ಹದಿನಾರನೆಯ ವರ್ಷದಲ್ಲಿ ಹತ್ತು ಉಪನಿಷತ್ತುಗಳು, ಭಗವದ್ಗೀತೆ ಮತ್ತು ಭಗವಾನ್ ಬಾದರಾಯಣರ ವೇದಾನ್ತಸೂತ್ರಗಳು ಇವುಗಳಿಗೆ ಇಡೀ ವಿಶ್ವವೇ ಬೆರಗಾಗುವಂತಹ ಪ್ರಸನ್ನಗಂಭೀರವಾದ ಭಾಷ್ಯರಚನೆ, ಮೂವತ್ತೆರಡನೆಯ ವರ್ಷದಲ್ಲಿ ಅನ್ತರ್ಧಾನ. ***ಅಷ್ಟವರ್ಷೇ ಚತುರ್ವೇದೀ ದ್ವಾದಶೇ ಸರ್ವಶಾಸ್ತ್ರವಿತ್ । ಷೋಡಶೇ ಕೃತವಾನ್ ಭಾಷ್ಯಂ ದ್ವಾತ್ರಿಂಶೇ ಮುನಿರಭ್ಯಗಾತ್ ॥*** ಇಂತಹ ಪರಮಪೂಜ್ಯ ಯತಿವರೇಣ್ಯರೂ, ಏಕಮೇವಾದ್ವಿತೀಯರೂ, ಸರ್ವಜ್ಞರೂ ಆಗಿರುವ ಶ್ರೀಮಚ್ಛಙ್ಕರಭಗವತ್ಪೂಜ್ಯಪಾದರನ್ನು ಈ ಶ್ಲೋಕದಿಂದ ಭಕ್ತಿಪೂರ್ವಕವಾಗಿ ನಮಸ್ಕರಿಸೋಣ.

ಸಂಸಾರವೆಂದರೆ, ಪುಣ್ಯ–ಪಾಪ, ಲಾಭ–ನಷ್ಟ, ಶೋಕ–ಮೋಹ, ಜನ್ಮ–ಮರಣ ಮುಂತಾಗಿ ದ್ವೈತಾತ್ಮಕವಾಗಿ ಅತ್ಯಂತ ಭಯಾನ್ವಿತವಾಗಿರುವುದೇ ಆಗಿದೆ. ಇದನ್ನು ಇಲ್ಲಿ ಭಯಂಕರವಾದ ಕಾಳಿಂಗಸರ್ಪಕ್ಕೆ ಹೋಲಿಸಿದೆ. ಇಂತಹ ಸಂಸಾರವೆಂಬ ಭಯಂಕರ ಸರ್ಪದ ಕಡಿತದಿಂದ ವಿಷವೇರಿ ಎಲ್ಲ ಜೀವಿಗಳೂ ಭ್ರಷ್ಟನಷ್ಟರಾಗಿ ನಲುಗಿಹೋಗಿದ್ದಾರೆ. ಘನಘೋರವಾದ ವಿಷದ ಭಯದಿಂದ ತತ್ತರಿಸುತ್ತಿರುವ ಈ ಜೀವಿಗಳನ್ನು ಕಂಡು ಅತ್ಯಂತ ಹೆಚ್ಚಿನ ಕರುಣೆಯಿಂದಲೂ, ಹೇಗಾದರೂ ಮಾಡಿ ಇವರನ್ನು ಉದ್ಧರಿಸಲೇಬೇಕೆಂಬ ದೃಢಸಂಕಲ್ಪದಿಂದಲೂ, ಯಾವ ಮಹಾತ್ಮನು ದಿವ್ಯವಾದ ಬ್ರಹ್ಮಜ್ಞಾನವೆಂಬ ಸಂಜೀವಿನೀ ಔಷಧಿಯನ್ನು ತಂದುಕೊಟ್ಟು ಎಲ್ಲ ಜೀವಿಗಳನ್ನೂ ಉದ್ಧರಿಸಿದನೋ ಆ ವೈದ್ಯರಿಗೂ ವೈದ್ಯನಾದ ಪರಮವೈದ್ಯ ಶಂಕರನನ್ನು ನಾನು ನಮಸ್ಕರಿಸುತ್ತೇನೆ.

ಬೆಂಗಳೂರು–560 019



ಶ್ರೀವಾಲ್ಮೀಕಿಮುನಿವಿರಚಿತ ಶ್ರೀಮದ್ರಾಮಾಯಣಮಹಾಕಾವ್ಯದಲ್ಲಿ

# ಉತ್ತರಕಾಂಡದ ಕಥೆಗಳು

ವಿದ್ವಾನ್ ಡಾ॥ ಸತ್ಯನಾರಾಯಣ ತಲಕಾಡು M.A. P.hd.,
ನಿವೃತ್ತ ಉಪನಿರ್ದೇಶಕರು ಹಾಗೂ ಗೌರವ ಸಲಹಾಗಾರರು
ಪ್ರಾಚ್ಯವಿದ್ಯಾಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

ಪರಿಚಯ– ವಿದ್ವಾನ್ ಡಾ. ಟಿ.ವಿ. ಸತ್ಯನಾರಾಯಣ ಇವರು ನಮ್ಮ ನಾಡಿನ ಒಬ್ಬ ಶ್ರೇಷ್ಠ ಸಂಸ್ಕೃತವಿದ್ವಾಂಸರು. ಮೈಸೂರಿನ ಪ್ರತಿಷ್ಠಿತ ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಸಂಪ್ರದಾಯಕ್ರಮದಂತೆ ಪ್ರಾಚೀನ ವಿದ್ಯಾಭ್ಯಾಸ. ಅಲಂಕಾರ, ವ್ಯಾಕರಣಶಾಸ್ತ್ರಗಳಲ್ಲಿ ಪ್ರಥಮ ರ್‍ಯಾಂಕಿನಲ್ಲಿ ಉತ್ತೀರ್ಣರಾಗಿ ಚಿನ್ನದ ಪದಕ ಹಾಗೂ ಸರ್ವಪ್ರಾವೀಣ್ಯ ಬಹುಮಾನಗಳನ್ನು ಪಡೆದಿದ್ದಾರೆ. ಮಹಾರಾಜಕಾಲೇಜು ಮಾನಸಗಂಗೋತ್ರಿಯ ಸಂಸ್ಕೃತವಿಭಾಗಗಳಲ್ಲಿ ಉನ್ನತಾಧ್ಯಯನ. ಸಂಸ್ಕೃತದಲ್ಲಿ ಎಂ.ಎ., ಪಿ.ಹೆಚ್‌ಡಿ., ಪದವೀಧರರು. ಎರಡರಲ್ಲೂ ಪ್ರಥಮ ರ್‍ಯಾಂಕ್ ಗಳಿಸಿ ಚಿನ್ನದಪದಕಗಳನ್ನು ಪಡೆದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿ ಸಂಶೋಧಕರಾಗಿ ನಂತರ ಉಪನಿರ್ದೇಶಕರಾಗಿ ಬಳಿಕ ಗೌರವ ಸಲಹಾಗಾರರಾಗಿ 35 ವರ್ಷಗಳು ಕಾರ್ಯನಿರ್ವಹಿಸಿ ಈಗ ನಿವೃತ್ತರಾಗಿದ್ದಾರೆ. ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿ ಇವರು 5 ಶ್ರೇಷ್ಠ ಸಂಸ್ಕೃತಕೃತಿಗಳನ್ನು ಸಂಪಾದಿಸಿ ಪ್ರಕಟಿಸಿರುತ್ತಾರೆ. ಅನೇಕ ಸಂಸ್ಕೃತ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿರುತ್ತಾರೆ. ಸ್ವತಂತ್ರವಾಗಿ ಕನ್ನಡದಲ್ಲಿ 6 ಕೃತಿಗಳನ್ನು ರಚಿಸಿ ಪ್ರಕಟಿಸಿರುತ್ತಾರೆ. ವಿಶ್ವವಿದ್ಯಾನಿಲಯದ ಪಠ್ಯಪುಸ್ತಕರಚನಾಸಮಿತಿಯಲ್ಲೂ ಕಾರ್ಯನಿರ್ವಹಿಸಿರುತ್ತಾರೆ. ಎರಡು ವರ್ಷಗಳ ಎಂ.ಎ., ತರಗತಿಗೆ ಸಂಸ್ಕೃತವ್ಯಾಕರಣ ಪಾಠ್ಯಭಾಗವನ್ನು ಬರೆದಿದ್ದಾರೆ. ಇವರು ಸಂಸ್ಕೃತ ಹಾಗೂ ಕನ್ನಡಭಾಷೆಯಲ್ಲಿ ಉತ್ತಮ ವಾಗ್ಮಿಗಳು. ಶೃಂಗೇರಿ, ಕಂಚಿಕಾಮಕೋಟಿ, ಉಡುಪಿ, ಸುತ್ತೂರು, ಆದಿಚುಂಚನಗಿರಿ, ಗಣಪತಿಸಚ್ಚಿದಾನಂದ ಮೊದಲಾದ ಮಠಾಧಿಪತಿಗಳಿಂದ ಪ್ರಶಸ್ತಿ, ಸಂಮಾನ, ಗೌರವಗಳನ್ನು ಪಡೆದಿದ್ದಾರೆ. ಪ್ರತಿಭಾಪಟು, ವೇದಸೂಕ್ತವಿದ್ಯಾಸಾಗರ ಮುಂತಾದ ಹತ್ತು ಹಲವಾರು ಬಿರುದುಗಳನ್ನು ಗಳಿಸಿರುತ್ತಾರೆ. ಸುಧರ್ಮಾ ಸಂಸ್ಕೃತ ದಿನಪತ್ರಿಕೆಯಲ್ಲಿ ಗೌರವಸಂಪಾದಕರಾಗಿ ಸಂಸ್ಕೃತಪ್ರಚಾರಕಾರ್ಯಗಳನ್ನು ನಿರಂತರವಾಗಿ ಮಾಡುತ್ತಿದ್ದಾರೆ.

## ಮೊದಲನೆಯ ಸರ್ಗ

*[ಪಟ್ಟಾಭಿಷಿಕ್ತನಾಗಿ ಅಯೋಧ್ಯೆಯ ರಾಜಸಿಂಹಾಸನದಲ್ಲಿ ಕುಳಿತು ರಾಜ್ಯಶಾಸನವನ್ನು ಮಾಡುತ್ತಿರುವ ಶ್ರೀರಾಮನನ್ನು ಗೌರವಿಸಿ ಅಭಿನಂದಿಸಲು ಮಹರ್ಷಿಗಳು ಬಂದುದು – ಅವರೊಡನೆ ಶ್ರೀರಾಮನ ಕುಶಲಪ್ರಶ್ನೆ ಹಾಗೂ ಅಮೂಲ್ಯಪ್ರಶ್ನೆಗಳು]*

**ಪ್ರಾಪ್ತರಾಜ್ಯಸ್ಯ ರಾಮಸ್ಯ ರಾಕ್ಷಸಾನಾಂ ವಧೇ ಕೃತೇ ।**
**ಆಜಗ್ಮುಃ ಋಷಯಃ ಸರ್ವೇ ರಾಘವಂ ಪ್ರತಿನನ್ದಿತುಮ್ ॥**

(ವಾ.ರಾ. ಉ.ಕಾಂ. 1-1)

ಅಯೋಧ್ಯೆಯ ರಾಜಸಿಂಹಾಸನದಲ್ಲಿ ದಶರಥನ ಮಗ ಶ್ರೀರಾಮನು ಪಟ್ಟಾಭಿಷಿಕ್ತನಾಗಿ ಧರ್ಮದಿಂದ ರಾಜ್ಯಭಾರವನ್ನು ಮಾಡಲು ತೊಡಗಿದನು. ಧರ್ಮಶಾಸಕನಾದ ಶ್ರೀರಾಮನನ್ನು ಗೌರವಿಸಿ ಅಭಿನಂದಿಸಬೇಕೆಂಬ ಆಸೆಯಿಂದ ಬೇರೆಬೇರೆ ಕಡೆಗಳ ಋಷ್ಯಾಶ್ರಮಗಳಲ್ಲಿ ವಾಸಮಾಡುತ್ತಿದ್ದ ಎಲ್ಲ ಮುನಿಗಳು ಅಯೋಧ್ಯಾಪಟ್ಟಣಕ್ಕೆ ಬಂದರು. ಅವರಲ್ಲಿ ಪ್ರಮುಖವಾಗಿ ಪೂರ್ವದಿಕ್ಕಿನ ತಪೋವನಗಳಲ್ಲಿ ವಾಸಿಸುತ್ತಿದ್ದ ಕೌಶಿಕ, ಯವಕ್ರೀತ, ಗಾರ್ಗ್ಯ, ಗಾಲವ, ಮೇಧಾತಿಥಿಯ ಮಗ ಕಣ್ವರು. ದಕ್ಷಿಣದ ಕಡೆಯಲ್ಲಿದ್ದ ಸ್ವಸ್ತ್ಯಾತ್ರೇಯ, ನಮುಚಿ, ಪ್ರಮುಚಿ, ಅಗಸ್ತ್ಯ, ಅತ್ರಿ, ಸುಮುಖ, ವಿಮುಖರು. ಪಶ್ಚಿಮದಿಕ್ಕಿನ ಋಷ್ಯಾಶ್ರಮಗಳಿಂದ, ನೃಷದ್ಗು, ಕವಷ, ಧೌಮ್ಯ, ಕೌಶೇಯರು ಹಾಗೆಯೇ ಇನ್ನೂ ಅನೇಕಜನ ಮುನಿಗಳು ಅಯೋಧ್ಯಾನಗರಕ್ಕೆ

ಬಂದರು. ಉತ್ತರದಿಕ್ಕಿನ ಅನೇಕಕಡೆ ಋಷ್ಯಾಶ್ರಮಗಳಲ್ಲಿ ನೆಲೆಸಿದ್ದ ವಸಿಷ್ಠ, ಕಶ್ಯಪ, ಅತ್ರಿ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ಭರದ್ವಾಜರೆಂಬ ಸಪ್ತರ್ಷಿಗಳು ಬಂದರು. ಈ ಋಷಿಗಳ ಸಮಸ್ತಗುಂಪುಗಳಲ್ಲಿ ಒಂದೇ ಹೆಸರಿನ ಅನೇಕ ಋಷಿಗಳಿದ್ದರೆನ್ನುವುದು ಗಮನಾರ್ಹ. ಇವರೆಲ್ಲರೂ ಹೊಳೆಯುವ ಅಗ್ನಿಗೆ ಸಮಾನರಾಗಿ ಪ್ರಖರತೇಜಸ್ಸಿನಿಂದ ಬೆಳಗುತ್ತಿದ್ದರು. ನಾಲ್ಕು ವೇದಗಳಲ್ಲಿ, ಆರು ವೇದಾಂಗಗಳಲ್ಲಿ, ಆರು ಶಾಸ್ತ್ರಗಳಲ್ಲಿ, ದರ್ಶನಗಳಲ್ಲಿ ಹಾಗೂ ಇತರ ಎಲ್ಲ ಬಗೆಯ ಶಾಸ್ತ್ರಗಳಲ್ಲಿ ಇವರೆಲ್ಲರೂ

ಬಲ್ಲಿದರಾಗಿದ್ದರು. ಜ್ಞಾನನಿಧಿಗಳಾದ ಮರ್ಷಿಗಳೆಲ್ಲರೂ ಒಟ್ಟಾಗಿ ಒಂದೆಡೆ ಸೇರುವುದೇ ಒಂದು ಪುಣ್ಯವಿಶೇಷ. ಮಹಿಮಾನ್ವಿತರಾದ ಈ ಮುನಿಗಳೆಲ್ಲರೂ ಶ್ರೀರಾಮನ ಅರಮನೆಯ ಒಳಗೆ ಬಂದು, ತಾವು ಬಂದಿರುವ ವಿಷಯವನ್ನು ತಿಳಿಸುವುದಕ್ಕಾಗಿ ಅರಮನೆಯ ರಾಜದ್ವಾರದ ಬಳಿಗೆ ಬಂದರು. ಮುನಿಗಳಲ್ಲಿ ಸರ್ವಮಾನ್ಯರಾಗಿದ್ದ ಅಗಸ್ತ್ಯರು ರಾಜದ್ವಾರದಲ್ಲಿ ದ್ವಾರಪಾಲಕನಿಗೆ "ಎಲೈ ದ್ವಾರಪಾಲಕನೇ! ಅಯೋಧ್ಯಾಪತಿ ಶ್ರೀರಾಮನನ್ನು ನೋಡಿ ಅವನೊಡನೆ ಮಾತನಾಡಿಕೊಂಡು ಹೋಗಲು ನಾವೆಲ್ಲರೂ ಬಂದಿದ್ದೇವೆ. ಈ ವಿಷಯವನ್ನು ರಾಜನಾದ ಶ್ರೀರಾಮನಿಗೆ ನೀನು ಅರಿಕೆಮಾಡು" ಎಂದು ಹೇಳಿದರು. ರಾಜನೀತಿಜ್ಞನಾಗಿದ್ದ, ನೋಡಿದಕೂಡಲೇ ಬೇರೆಯವರ ಮನೋಗತಅಭಿಪ್ರಾಯವನ್ನು ಅರಿಯುವುದರಲ್ಲಿ ಚತುರನಾದ, ಸದಾಚಾರಿಯಾದ, ಧೈರ್ಯವಂತನಾದ ಆ ದ್ವಾರಪಾಲಕನು ಹುಣ್ಣಿಮೆಯ ಚಂದ್ರನ ಕಾಂತಿಯಂತೆ ಬೆಳಗುತ್ತಿದ್ದ ಶ್ರೀರಾಮನ ಬಳಿಗೆ ಹೋಗಿ ನಮಸ್ಕರಿಸಿ, ಮಹರ್ಷಿಗಳು ಬಂದಿರುವ ವಿಷಯವನ್ನು ಅವನಿಗೆ ಹೇಳಿದನು. ಅವನ ಮಾತುಗಳನ್ನು ಕೇಳಿದಕೂಡಲೇ ಶ್ರೀರಾಮನು ತುಂಬಾ ಸಂತೋಷಪಟ್ಟು ಅವರೆಲ್ಲರನ್ನೂ ಒಳಗೆ ಕರೆತರಲು ಹೇಳಿದನು. ದ್ವಾರಪಾಲಕನು ಕೂಡಲೇ ಎಲ್ಲ ಪೂಜ್ಯಮಹರ್ಷಿಗಳನ್ನು ಶ್ರೀರಾಮನ ಬಳಿಗೆ ಕರೆತಂದನು.

ತನ್ನ ಬಳಿ ಬಂದ ಮಹರ್ಷಿಗಳೆಲ್ಲರನ್ನೂ ಕಂಡ ಶ್ರೀರಾಮನು ಕೂಡಲೇ ಸಿಂಹಾಸನದಿಂದ ಮೇಲೆದ್ದು, ಕೆಳಗಿಳಿದು ಬಂದು ಕೈಮುಗಿದುಕೊಂಡು ಅವರೆಲ್ಲರನ್ನೂ ನಮಸ್ಕರಿಸಿ, ಅವರನ್ನು ಬನ್ನಿರೆಂದು ಹೃದಯಪೂರ್ವಕವಾಗಿ ಆಹ್ವಾನಿಸಿ, ಅವರಿಗೆ ಪಾದ್ಯ, ಅರ್ಘ್ಯ, ಆಚಮನೀಯ, ಮಧುಪರ್ಕಗಳನ್ನು ನೀಡಿ ಗೌರವಿಸಿ ಪವಿತ್ರವಾದ ಹಸುಗಳನ್ನು ನೀಡಿ ಸತ್ಕಾರಮಾಡಿದನು.

**ತಾನ್ ಸಂಪ್ರಾಪ್ತಾನ್ ಮುನೀನ್ ದೃಷ್ಟ್ವಾ ಪ್ರತ್ಯುತ್ಥಾಯ ಕೃತಾಞ್ಜಲಿಃ ।**
**ಪಾದ್ಯಾರ್ಘ್ಯಾದಿಭಿರಾನರ್ಚ್ಯ ಗಾಂ ನಿವೇದ್ಯ ಚ ಸಾದರಮ್ ॥**

(ವಾ.ರಾ. ಉ.ಕಾಂ. 1–11)

ನಂತರ ಅವರೆಲ್ಲರಿಗೂ ಕುಳಿತುಕೊಳ್ಳಲು ಉಚಿತವಾದ ಆಸನಗಳನ್ನು ನೀಡಿದನು. ಆ ಆಸನಗಳೆಲ್ಲವೂ ಸುವರ್ಣಮಯ ಆಸನಗಳಾಗಿದ್ದುವು. ಕುಸುರಿಕೆತ್ತನೆಯ ಕೆಲಸಗಳನ್ನು ಅವುಗಳಿಗೆ ಮಾಡಿದ್ದರು. ಅವು ವಿಶಾಲವಾಗಿಯೂ, ಎತ್ತರವಾಗಿಯೂ, ಮನೋಹರವಾಗಿಯೂ ಇದ್ದು ಕುಳಿತುಕೊಳ್ಳಲು ತುಂಬಾ ಅನುಕೂಲವಾಗಿದ್ದವು. ಆಸನಗಳಮೇಲೆ ದರ್ಭೆಗಳನ್ನು ಹರಡಿ ಜಿಂಕೆಯ ಚರ್ಮಗಳನ್ನು ಹಾಕಿದ್ದರು. ಅಂತಹ

ಸುಖಾಸನಗಳಲ್ಲಿ ಋಷಿಗಳೆಲ್ಲರೂ ಕುಳಿತುಕೊಂಡು ಒಟ್ಟಾಗಿ ಶ್ರೀರಾಮನಿಗೆ ಈ ರೀತಿ ಹೇಳಲು ಪ್ರಾರಂಭಿಸಿದರು.

**ರಾಮೇಣ ಕುಶಲಂ ಪೃಷ್ಟಾಃ ಸಶಿಷ್ಯಾಃ ಸುಪುರೋಗಮಾಃ ।**
**ಮಹರ್ಷಯೋ ವೇದವಿದೋ ರಾಮಂ ವಚನಮಬ್ರುವನ್ ॥**

**(ವಾ.ರಾ. ಉ.ಕಾಂ. 1–13)**

"ಧರ್ಮಾತ್ಮನಾದ ರಘುಕುಲತಿಲಕ ಶ್ರೀರಾಮನೇ! ನಿನಗೆ ಮಂಗಳವಾಗಲಿ. ನಾವೆಲ್ಲರೂ ಕ್ಷೇಮದಿಂದ ಇದ್ದೇವೆ. ನೀನು ಮತ್ತು ನಿನ್ನವರೆಲ್ಲರೂ ಕುಶಲವಾಗಿದ್ದೀರೆಂದು ಭಾವಿಸಿದ್ದೇವೆ. ಅದೃಷ್ಟವಶಾತ್ ನಾವೆಲ್ಲರೂ, ಲೋಕಕಂಟಕರಾಗಿದ್ದ ಎಲ್ಲ ಶತ್ರುಗಳನ್ನೂ ಕೊಂದು ಸುಖದಿಂದಿರುವ ನಿನ್ನನ್ನು ನೋಡುತ್ತಿದ್ದೇವೆ ಎಂದರೆ ನಾವೆಲ್ಲರೂ ಭಾಗ್ಯಶಾಲಿಗಳೆಂದೇ ತಿಳಿಯುತ್ತೇವೆ. ವಿಶೇಷವಾಗಿ ಲೋಕದ ಜನರೆಲ್ಲರ ಪೀಡಕನಾಗಿದ್ದ ದಶಮುಖರಾವಣನನ್ನು ಅವನ ಮಕ್ಕಳು, ಮೊಮ್ಮಕ್ಕಳು ಸೇನಾಪತಿಗಳ ಸಹಿತವಾಗಿ ಕೊಲ್ಲುವುದು ನಿನಗೇನೂ ದೊಡ್ಡಕೆಲಸವಾಗಿರಲಿಲ್ಲ. ಏಕೆಂದರೆ ನೀನು ಮಹಾನ್ ಬಲಶಾಲಿ. ಬಿಲ್ಲು ಬಾಣಗಳನ್ನು ಹಿಡಿದು ನೀನು ಮೂರು ಲೋಕಗಳನ್ನೂ ಒಬ್ಬಂಟಿಯಾಗಿ ಹೋರಾಡಿ ಗೆಲ್ಲಬಲ್ಲೆ. ಅಂತಹ ವೀರ ನೀನು. ಅಜೇಯ ನೀನು. ಎಲ್ಲರ ಪುಣ್ಯದಿಂದ ನೀನು ಲಂಕಾಧಿಪತಿ ರಾವಣನನ್ನು ಸಮೂಲವಾಗಿ ಸಂಹರಿಸಿ, ಪತಿವ್ರತಾ ಶಿರೋಮಣಿಯಾದ ನಿನ್ನ ಹೆಂಡತಿ ಸೀತೆಯನ್ನು ಪಡೆದು ಈಗ ಇಲ್ಲಿ ಪಟ್ಟಾಭಿಷಿಕ್ತನಾಗಿರುವುದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಇದು ನಮ್ಮ ಭಾಗ್ಯವಿಶೇಷವಾಗಿದೆ. ಎಲೈ ಶ್ರೀರಾಮ! ನಿನ್ನ ತಮ್ಮಂದಿರಾದ ಲಕ್ಷ್ಮಣ, ಭರತ, ಶತ್ರುಘ್ನರು ಸದಾ ನಿನ್ನ ಜೊತೆಯಲ್ಲಿದ್ದು ನಿನ್ನ ಹಿತವನ್ನು, ಲೋಕದ ಹಿತವನ್ನು ಬಯಸತಕ್ಕವರಾಗಿ, ನಿನಗೆ ಸಹಕಾರಿಗಳಾಗಿ ನಿನಗೆ ಬಲವನ್ನು ತುಂಬಿದ್ದಾರೆ. ಕೌಸಲ್ಯಾ, ಸುಮಿತ್ರಾ ಕೈಕೇಯೀ ಮೊದಲಾದ ತಾಯಂದಿರೊಡನೆ, ಆಪ್ತರೊಡನೆ, ಗೆಳೆಯರೊಡನೆ, ನಿಷ್ಠಾವಂತಪರಿವಾರದವರೊಡನೆ ಸುಖಸಂತೋಷದಿಂದಿರುವ ನಿನ್ನನ್ನು ನೋಡಿ ನಮಗೆ ತುಂಬಾ ಸಂತೋಷವಾಗಿದೆ. ಪ್ರಜಾಹಿತಕಾರಿಯಾದ ನಿನ್ನ ದರ್ಶನವು ನಮಗಾಗಿರುವುದು ನಮ್ಮ ಪುಣ್ಯವಾಗಿದೆ.

ಎಲೈ ಶ್ರೀರಾಮ! ಬಲಿಷ್ಠರಾದ ಪ್ರಹಸ್ತ, ವಿಕಟ, ವಿರೂಪಾಕ್ಷ, ಮಹೋದರ, ದುರ್ಧರ್ಷ, ಅಕಂಪನ ಇನ್ನೂ ಮೊದಲಾದ ಅನೇಕ ರಾಕ್ಷಸರನ್ನು ನೀನು ಕೊಂದೆ. ಲೋಕದಲ್ಲಿ ಯಾವ ವ್ಯಕ್ತಿಗೂ ಇಲ್ಲದ ಬೃಹತ್ತಾದ ಶರೀರವನ್ನು ಹೊಂದಿದ್ದ, ಪರ್ವತದಂತೆ ಅಧೃಶ್ಯನಾಗಿದ್ದ ರಾಕ್ಷಸ ಕುಂಭಕರ್ಣನನ್ನು ನೀನು ಸಂಹರಿಸಿದೆ. ತ್ರಿಶಿರಸ್, ಅತಿಕಾಯ, ದೇವಾಂತಕ, ನರಾಂತಕ ಮುಂತಾದ ಅತಿಬಲರಾದ ರಾಕ್ಷಸರನ್ನು ನೀನು ಕೊಂದುಹಾಕಿದೆ. ಕುಂಭಕರ್ಣನ ಮಕ್ಕಳಾದ ಮಹಾಭಯಂಕರರಾಗಿದ್ದ ಕುಂಭ, ನಿಕುಂಭರನ್ನೂ, ಪ್ರಲಯಕಾಲದ ಯಮನಂತೆ ಇದ್ದ ಯುದ್ಧೋನ್ಮತ್ತ, ಮತ್ತ ಎಂಬಿಬ್ಬರನ್ನು, ಯಜ್ಞಕೋಪ, ಧೂಮ್ರಾಕ್ಷ– ಮೊದಲಾದ ಅನೇಕ ಮಹಾನ್ ಬಲಿಷ್ಠರಾದ ರಾಕ್ಷಸರನ್ನು, ಅವರು ಮೇಲೆಸೆದ ಶಸ್ತ್ರಾಸ್ತ್ರಗಳನ್ನೆಲ್ಲಾ ನಾಶಮಾಡಿ ಅವರೆಲ್ಲರನ್ನೂ ನಿರ್ದಾಕ್ಷಿಣ್ಯವಾಗಿ ಕೊಂದುಹಾಕಿದೆ. ಇವೆಲ್ಲ ಸಾಮಾನ್ಯಕಾರ್ಯಗಳಲ್ಲ.

ದೇವಾಧಿದೇವತೆಗಳನ್ನೆಲ್ಲಾ ಗೆದ್ದು ಸ್ವರ್ಗ-ಮರ್ತ್ಯ-ಪಾತಾಳಲೋಕಗಳನ್ನೆಲ್ಲವನ್ನೂ ತನ್ನ ಅಧೀನದಲ್ಲಿಟ್ಟುಕೊಂಡು ತ್ರಿಲೋಕಾಧಿಪತಿಯಾಗಿದ್ದ ದಶಕಂಠರಾವಣನ ಜೊತೆ ನೀನು ಬಾಹುಯುದ್ಧವನ್ನು ಮಾಡಿದೆ. ದ್ವಂದ್ವಯುದ್ಧಮಾಡಿದೆ. ಅವನು ಪ್ರಯೋಗಿಸಿದ ಅನುಪಮವಾದ ಶಸ್ತ್ರಾಸ್ತ್ರಗಳನ್ನೆಲ್ಲ ನೀನು ನಿನ್ನ ಪ್ರಖರವಾದ ಶಸ್ತ್ರಾಸ್ತ್ರಗಳಿಂದ ನಾಶಮಾಡಿ ಕೊಂದುಹಾಕಿದ್ದಂತೂ ಅದ್ಭುತವಾದ ಕಾರ್ಯವೇ ಆಗಿದೆ. ಕಾಲಪುರುಷನಂತೆ ಹೋರಾಡಲು ಬಂದು ಮರೆಯಾಗಿ ಎಲ್ಲಕಡೆ ಓಡಾಡುತ್ತಾ, ನಿಮ್ಮೊಡನೆ ಯುದ್ಧಮಾಡುತ್ತಾ ಅಜೇಯರಾಗಿದ್ದ, ದೇವತೆಗಳ ಶತ್ರುವಾದ ರಾವಣನ ಮಗ ಇಂದ್ರಜಿತ್ತುವು ನಿಮ್ಮೆಲ್ಲರನ್ನೂ ನಾಗಪಾಶದಿಂದ ಬಂಧಿಸಿಬಿಟ್ಟನು. ಆಗ ನೀವೆಲ್ಲರೂ ಚತುರತೆಯಿಂದ ನಾಗಪಾಶದಿಂದ ಬಿಡಿಸಿಕೊಂಡು ಮತ್ತೆ ಅವನೊಡನೆ ಹೋರಾಡಿದಿರಿ. ವಿಶೇಷವಾಗಿ ಇಂತಹ ಶತ್ರುಭಯಂಕರನಾಗಿದ್ದ, ಅಪ್ರತಿಹತಶೂರನಾಗಿದ್ದ ಇಂದ್ರಜಿತ್‌ನನ್ನು ನಿನ್ನ ತಮ್ಮನಾದ ಸುಮಿತ್ರಾಸುತಲಕ್ಷ್ಮಣನು ಕೊಂದುಹಾಕಿದನು ಎಂಬುದು ಸಾಮಾನ್ಯವಾದ ವಿಷಯವೇನಲ್ಲ. ಏಕೆಂದರೆ ಇಂದ್ರಜಿತ್ತುವನ್ನು ಕೊಲ್ಲಲು ಯಾರಿಂದಲೂ ಸಾಧ್ಯವಿರಲಿಲ್ಲ. ಅವನು ಯುದ್ಧಕುಶಲಿಯಾಗಿದ್ದನು. ಮಾಯಾಯುದ್ಧವನ್ನು ಮಾಡುವುದರಲ್ಲಿ ಅತಿನಿಪುಣನಾಗಿದ್ದನು. ಯುದ್ಧತಂತ್ರಗಳನ್ನೆಲ್ಲವನ್ನೂ ಬಲ್ಲ ರಣವೀರನಾಗಿದ್ದನು ಇಂದ್ರಜಿತ್ತು. ಅಂತಹ ಶಕ್ತಿಶಾಲಿಯಾದ ಇಂದ್ರಜಿತ್ತುವನ್ನು ಕೊಲ್ಲುವುದು ಸಾಮಾನ್ಯಸಂಗತಿಯೇನಲ್ಲ. ನಿನ್ನ ತಮ್ಮನಾದ ಲಕ್ಷ್ಮಣನು ರಾವಣನ ಮಗ ಇಂದ್ರಜಿತ್ತುವನ್ನು ಕೊಂದುಹಾಕಿದನೆಂಬ ಅದ್ಭುತವಾದ ವಿಚಾರವನ್ನು ಕೇಳಿದಾಗ ನಾವೆಲ್ಲರೂ ಸ್ತಂಭೀಭೂತರಾದೆವು, ಆಶ್ಚರ್ಯಪಟ್ಟೆವು. ಮೇಘನಾದ ಇಂದ್ರಜಿತ್ತುವನ್ನು ಲಕ್ಷ್ಮಣನು ಕೊಂದುದು ಮಹದದ್ಭುತವಾದ ಕಾರ್ಯವೇ ಸರಿ. ದುಷ್ಟರಾಕ್ಷಸರಾದ ರಾವಣ, ಕುಂಭಕರ್ಣ, ಇಂದ್ರಜಿತ್ ಮೊದಲಾದ ಮಹಾದೈತ್ಯರಾದ ಶತ್ರುಗಳನ್ನು ಕೊಂದು ಲೋಕಕ್ಕೆ ಉಪಕಾರಮಾಡಿದ ನಿನ್ನನ್ನು, ನಿನ್ನ ತಮ್ಮನಾದ ಲಕ್ಷ್ಮಣನನ್ನು, ನಿನ್ನ ಜೊತೆ ಇದ್ದು ರಾಕ್ಷಸರೊಡನೆ ಹೋರಾಡಿದ ಸುಗ್ರೀವ, ಹನುಮಂತ, ಅಂಗದ, ಸುಷೇಣ ಮೊದಲಾದ ಕಪಿವೀರರನ್ನು ಹಾಗೂ ನಿನ್ನ ಜೊತೆ ಸೇರಿ ನಿನಗೆ ಸದಾಕಾಲ ಒತ್ತಾಸೆಯಾಗಿದ್ದು ರಾವಣಾದಿಗಳನ್ನು ಕೊಲ್ಲಲು ಸಹಕರಿಸಿದ ವಿಭೀಷಣ ಮೊದಲಾದ ರಾಕ್ಷಸವೀರರನ್ನು ನಾವೆಲ್ಲರೂ ಅಭಿನಂದಿಸುತ್ತೇವೆ, ಪ್ರಶಂಸಿಸುತ್ತೇವೆ, ಗೌರವಿಸುತ್ತೇವೆ.

ಎಲೈ ರಘುವಂಶದಿನಮಣಿಯಾದ ರಾಮಚಂದ್ರನೇ! ರಾವಣಾದಿರಾಕ್ಷಸರ ಜೊತೆಜೊತೆಯಲ್ಲಿಯೇ ದಂಡಕಾರಣ್ಯ ಮೊದಲಾದೆಡೆ ನೆಲೆಸಿದ್ದು ಲೋಕಕಂಟಕರಾಗಿದ್ದ ಖರದೂಷಣ, ತ್ರಿಶಿರಸ್ಸು ಮೊದಲಾದ ಕಾಮರೂಪಿಗಳಾಗಿದ್ದ ಅನೇಕ ರಾಕ್ಷಸರನ್ನು ನೀನು ಕೊಂದು ಲೋಕದ ಪ್ರಜಾಸಮುದಾಯವನ್ನು ಕಾಪಾಡಿದ್ದೀಯೆ. ಲಕ್ಷ್ಮಣನಿಂದ ಆದ ಇಂದ್ರಜಿತ್ತುವಿನ ವಧೆಯಂತೂ ನೀನು ಲೋಕಕ್ಕೆ ನೀಡಿದ ಅಭಯದಾನ. ಶತ್ರುಹಂತಕನಾದ ನಿನ್ನನ್ನೂ, ನಿನ್ನ ತಮ್ಮ ಲಕ್ಷ್ಮಣನನ್ನೂ ನಾವು ಅಭಿನಂದಿಸುತ್ತೇವೆ, ಆಶೀರ್ವದಿಸುತ್ತೇವೆ. ನೀನು ಜಯಶಾಲಿಯಾಗು. ನಿನಗೆ ಸಕಲಮಂಗಳಗಳೂ ಉಂಟಾಗಲಿ. ಶುಭವಾಗಲಿ" ಎಂದು ಮಹರ್ಷಿಗಳೆಲ್ಲರೂ ಮುಕ್ತಕಂಠದಿಂದ ಹೊಗಳಿ, ಅಭಿನಂದಿಸಿ ಆಶೀರ್ವದಿಸಿದರು.

**ದತ್ತ್ವಾ ಪುಣ್ಯಮಿಮಾಂ ವೀರ ಸೌಮ್ಯಾಮಭಯದಕ್ಷಿಣಾಮ್ ।**
**ದಿಷ್ಟ್ಯಾ ವರ್ಧಸಿ ಕಾಕುತ್ಸ್ಥ ಜಯೇನಾಮಿತ್ರಕರ್ಶನ ॥**

(ವಾ.ರಾ. ಉ.ಕಾಂ. 1-33)

ಪವಿತ್ರಾತ್ಮರಾದ ಮಹರ್ಷಿಗಳೆಲ್ಲರ ವಿಶ್ವಾಸಪೂರ್ವಕವಾದ ಮಾತುಗಳನ್ನು ಕೇಳಿದ ಶ್ರೀರಾಮನು ತುಂಬಾ ಸಂತೋಷಗೊಂಡನು. ನಿರೀಹರೂ ತಪೋನಿಧಿಗಳೂ ಆದ ಮುನಿಗಳು ತನ್ನನ್ನು ಪ್ರಶಂಸಿಸಿ, ಅಭಿನಂದಿಸಿ ಆಶೀರ್ವದಿಸಿದುದು ಶ್ರೀರಾಮನಿಗೆ ಧನ್ಯತೆಯನ್ನು ಉಂಟುಮಾಡಿತು. ಶ್ರೀರಾಮನು ತನ್ನನ್ನು ಆಶೀರ್ವದಿಸಿದ ಮಹರ್ಷಿಗಳೆಲ್ಲರಿಗೂ ನಮಸ್ಕಾರಮಾಡಿ ಈ ರೀತಿ ಹೇಳತೊಡಗಿದನು–

**ಶ್ರುತ್ವಾ ತು ವಚನಂ ತೇಷಾಂ ಮುನೀನಾಂ ಭಾವಿತಾತ್ಮನಾಮ್ ।**
**ವಿಸ್ಮಯಂ ಪರಮಂ ಗತ್ವಾ ರಾಮಃ ಪ್ರಾಞ್ಜಲಿರಬ್ರವೀತ್ ॥**

(ವಾ.ರಾ. ಉ.ಕಾಂ. 1–37)

"ಪೂಜ್ಯರೂ ಮಹಿಮಾನ್ವಿತರೂ ಆಗಿರುವ ಮಹರ್ಷಿಗಳೇ! ನೀವೆಲ್ಲರೂ ತುಂಬು ಹೃದಯದಿಂದ ನನ್ನನ್ನು ಹೊಗಳಿ, ಗೌರವಿಸಿ, ಆಶೀರ್ವದಿಸಿದುದು ನನಗೆ ಬಹಳ ಆನಂದವನ್ನು ಕೊಟ್ಟಿದೆ. ನಾನು ಧನ್ಯನಾದೆ, ಕೃತಾರ್ಥನಾದೆ. ಪೂಜ್ಯರಾದ ಮುನಿಗಳೇ! ಕುಂಭಕರ್ಣ, ರಾವಣ ಈ ಇಬ್ಬರು ರಾಕ್ಷಸಸಹೋದರರು ದೊಡ್ಡವೀರರೇ, ಆದರೂ ನೀವೆಲ್ಲರೂ ರಾವಣನ ಮಗ ಇಂದ್ರಜಿತ್ತುವನ್ನು ನಾನು ಕೊಂದದ್ದು ಕುಂಭಕರ್ಣ ರಾವಣರನ್ನು ಕೊಂದದ್ದಕ್ಕಿಂತಲೂ ದೊಡ್ಡಕಾರ್ಯವೆಂದು ಹೇಳುತ್ತಿದ್ದೀರಿ. ಕುಂಭಕರ್ಣರಾವಣರನ್ನು ಕಡೆಗಣಿಸಿ ಇಂದ್ರಜಿತ್ತುವನ್ನೇಕೆ ನೀವೆಲ್ಲರೂ ಇಷ್ಟುಬಗೆಯಲ್ಲಿ ಹೊಗಳುತ್ತಿದ್ದೀರಿ? ಒಂದುವೇಳೆ ರಾವಣನಿಗಿಂತಲೂ ಅವನ ಮಗ ಇಂದ್ರಜಿತ್ತುವೇ ಹೆಚ್ಚು ಪರಾಕ್ರಮಿಯೆಂದು ನಿಮ್ಮೆಲ್ಲರ ಅಭಿಮತವಾಗಿದ್ದರೆ, ಅದರ ಕಾರಣವನ್ನು ನೀವು ನನಗೆ ತಿಳಿಸಿ. ಅವನ ಪ್ರಭಾವ ಎಂತಹುದು? ಅವನ ಬಲಪರಾಕ್ರಮಗಳು ಎಷ್ಟು? ರಾವಣನಿಗಿಂತಲೂ ಅವನ ಮಗನೇ ಹೆಚ್ಚು ಬಲಶಾಲಿ ಎಂದು ಹೇಳುವುದಕ್ಕೆ ಪ್ರಬಲವಾದ ಕಾರಣವಾದರೂ ಏನು? ಈ ವಿಷಯವು ರಹಸ್ಯವಾದುದಲ್ಲ ಎಂದಾಗಿದ್ದರೆ, ನಾನು ಕೇಳಬಹುದಾದ ವಿಷಯ ಎಂದು ನಿಮಗೆ ಅನಿಸಿದರೆ, ದಯಮಾಡಿ ಈ ರಹಸ್ಯವನ್ನು ನನಗೆ ಹೇಳಿ. ಈ ವಿಷಯದಲ್ಲಿ ನಾನು ನಿಮಗೆ ಅಪ್ಪಣೆ ಮಾಡುತ್ತಿಲ್ಲ, ಬದಲಾಗಿ ಹೇಳಿರೆಂದು ಬೇಡಿಕೊಳ್ಳುತ್ತಿದ್ದೇನೆ. ರಾವಣನ ಮಗ ಇಂದ್ರಜಿತ್ತುವು ಸ್ವರ್ಗಾಧಿಪತಿ ಇಂದ್ರನನ್ನು ಗೆದ್ದು "ಇಂದ್ರಜಿತ್" ಎಂಬ ಹೆಸರನ್ನು ಹೇಗೆ ಪಡೆದನು? ಅವನು ಯಾರಿಂದ ವರವನ್ನು ಪಡೆದನು? ಹೇಗೆ ಪಡೆದನು? ಅವನು ಇಷ್ಟು ಬಲಿಷ್ಠನಾದುದು ಹೇಗೆ? ರಾವಣನು ತನ್ನ ಮಗ ಇಂದ್ರಜಿತ್ತುವಿಗಿಂತ ಹೆಚ್ಚು ಬಲಿಷ್ಠನಾಗಿ ಏಕೆ ಆಗಲಿಲ್ಲ? ಎಲೈ ಋಷಿಪುಂಗವರೇ! ಯುದ್ಧರಂಗದಲ್ಲಿ ಇಂದ್ರಜಿತ್ತುವು ತನ್ನ ತಂದೆ ರಾವಣನಿಗಿಂತಲೂ ಹೆಚ್ಚು ಬಲಿಷ್ಠನಾಗಿ ಯುದ್ಧಮಾಡಲು ಹೇಗೆ ಸಾಧ್ಯವಾಯಿತು? ಅವನು ಇಂದ್ರನನ್ನು ಹೇಗೆ ಗೆದ್ದನು?

**ಕಥಂ ಪಿತುಸ್ತಾಪ್ಯಧಿಕೋ ಮಹಾಹವೇ**
**ಶಕ್ರಸ್ಯ ಜೇತಾ ಹಿ ಕಥಂ ಸರಾಕ್ಷಸಃ ।**
**ವರಾಶ್ಚ ಲಬ್ಧಾಃ ಕಥಯಸ್ವ ಮೇಽದ್ಯ**
**ಪ್ರಾಪೃಚ್ಛತಾಸ್ಯ ಮುನೀಂದ್ರ ಸರ್ವಮ್ ॥**

(ವಾ.ರಾ. ಉ.ಕಾಂ. 1–41)

ತಂದೆಗಿಂತಲೂ ಅಧಿಕಬಲಶಾಲಿಯಾಗಿ ದೇವೇಂದ್ರನನ್ನು ಗೆದ್ದುದು ಹೇಗೆ? ಅನೇಕರೀತಿಯ ವರಗಳನ್ನು ಪಡೆಯಲು ಅವನಿಗೆ ಹೇಗೆ ಸಾಧ್ಯವಾಯಿತು? ಈ ಎಲ್ಲ ನನ್ನ ಪ್ರಶ್ನೆಗಳಿಗೂ, ಸಂದೇಹಗಳಿಗೂ ಸರಿಯಾದ ಉತ್ತರಗಳನ್ನು ಕೃಪೆಮಾಡಿ ನನಗೆ ತಿಳಿಸಿ. ಇಂದ್ರಜಿತ್ತುವಿಗೆ ಸಂಬಂಧಪಟ್ಟ ಎಲ್ಲ ಇತಿವೃತ್ತಗಳನ್ನೂ ನನಗೆ ತಿಳಿಸುವ ಕೃಪೆಮಾಡಿ ಎಂದು ಶ್ರೀರಾಮನು ಆ ಮುನಿಗಳನ್ನು ವಿನಯಪೂರ್ವಕವಾಗಿ ಪ್ರಾರ್ಥಿಸಿದನು.

**ಇಲ್ಲಿಗೆ ವಾಲ್ಮೀಕಿರಾಮಾಯಣದ ಉತ್ತರಕಾಂಡದಲ್ಲಿ**
**ಮೊದಲನೆಯ ಸರ್ಗದ ಕಥೆಯು ಮುಗಿಯಿತು.**

.. .. ಮುಂದಿನ ಸಂಚಿಕೆಯಲ್ಲಿ ಮುಂದುವರೆಯುತ್ತದೆ

ಶ್ರೀಶಾರದಾನಿಕೇತನ ಅಸೋಸಿಯೇಷನ್ (ರಿ)
ಬೆಂಗಳೂರು-560 019

## ಶಾರದಾ ತ್ರೈಮಾಸಿಕ ಪತ್ರಿಕೆಯು ಲೇಖನಗಳನ್ನು ಸ್ವಾಗತಿಸುತ್ತದೆ.

ಲೇಖನಗಳು ಈ ಕೆಳಗಿನ ವಿಷಯಗಳಿಗೆ ಸಂಬಂಧಪಟ್ಟು ಎ-4 ಅಳತೆಯಲ್ಲಿ 3 ಪುಟಗಳಿಗೆ ಮೀರದಂತೆ ಇರಬೇಕು.

- ವೇದಾನ್ತ ವಿಷಯಗಳು
  - ಸಂಪ್ರದಾಯ ಸಂಸ್ಕೃತಿಗಳಿಗೆ ಸಂಬಂಧಪಟ್ಟ ವಿಷಯಗಳು
    - ಸಾಮಾಜಿಕ ಉನ್ನತಿಗೆ ಸಂಬಂಧಪಟ್ಟ ವಿಷಯಗಳು
      - ಮಹನೀಯರ ಚರಿತ್ರೆಗಳು
      - ಮೇಲಿನ ವಿಷಯಗಳಿಗೆ ಸಂಬಂಧಪಟ್ಟ ವೈಯಕ್ತಿಕ ಅನುಭವಗಳು
    - ಮಕ್ಕಳ ನೀತಿಬೋಧಕ ಕಥೆಗಳು
    - ಸ್ವರಚಿತ ಕವನಗಳು
    - ಸಮಾಜದ ಉನ್ನತಿಗೆ ಕಾರಣವಾಗುವ ಇತರ ವಿಷಯಗಳು

ಲೇಖನಗಳು ಕನ್ನಡ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿರಬಹುದು

ಲೇಖನಗಳನ್ನು UNICODE FONT ನಲ್ಲಿ TYPE ಮಾಡಿ ಕಳುಹಿಸಬೇಕು

ಶ್ರೀಶಾರದಾನಿಕೇತನ ಅಸೋಸಿಯೇಷನ್ (ರಿ)
ಬೆಂಗಳೂರು-560 019



# ಮಾತೃದೇವೋ ಭವ

ನಂ.ನಾಗಲಕ್ಷ್ಮಿ

ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ನಿವೃತ್ತರು. ಹವ್ಯಾಸೀ ಪತ್ರಕರ್ತೆ. ಅಪರೂಪದ ವ್ಯಕ್ತಿಗಳ ವ್ಯಕ್ತಿಚಿತ್ರ. ಜೀವನಚರಿತ್ರೆ, ಪ್ರವಾಸಸಾಹಿತ್ಯ, ಅನುವಾದ, ಈ ಪ್ರಕಾರಗಳಲ್ಲಿ 35 ಪುಸ್ತಕಗಳು ಪ್ರಕಟ. 6 ವಿಶಿಷ್ಟ ವ್ಯಕ್ತಿಗಳ ಅಭಿನಂದನಗ್ರಂಥಗಳ ಸಂಪಾದಕತ್ವ. ನೂರಕ್ಕೂ ಹೆಚ್ಚು ಲೇಖನಗಳು ಕನ್ನಡದ ದೈನಿಕ, ಸಾಪ್ತಾಹಿಕ, ಮಾಸಿಕ, ವಾರ್ಷಿಕ ಮತ್ತು ವಿಶೇಷಸಂಚಿಕೆಗಳಲ್ಲಿ ಪ್ರಕಟ. ಪತ್ರಿಕೆಗಳ ಸಂಪಾದಕಮಂಡಳಿಯಲ್ಲಿ ಮತ್ತು ಅಂಕಣಕಾರರಾಗಿ 15 ವರ್ಷಗಳಿಂದ ಕಾರ್ಯ ನಿರ್ವಹಣೆ. ಹವ್ಯಾಸವಾಗಿ ಕಾವ್ಯವಾಚನದಲ್ಲಿ ವ್ಯಾಖ್ಯಾನಕಾರರು. ಪ್ರಸ್ತುತ ವಿವೇಕಾನಂದ ಕೇಂದ್ರದ ಕರ್ನಾಟಕ ರಾಜ್ಯದ ಸಾಹಿತ್ಯ ವಿಭಾಗದ ಇ-ಪತ್ರಿಕೆಯ ಸಂಪಾದಕಮಂಡಳಿಯಲ್ಲಿ ಕಾರ್ಯನಿರ್ವಹಣೆ.

‘ಕೆರೆಯಂ ಕಟ್ಟಿಸು,ಬಾವಿಯಂ ಸವೆಸು, ದೇವಾಗಾರಮಂ ಮಾಡಿಸಜ್ಜರೆಯೊಳ್ ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗಿಂಬುಕೆಯ್ ನಂಬಿದರ್ಗೆರೆವಟ್ಟಾಗಿರು, ಶಿಷ್ಟರಂ ಪೊರೆ ಎನುತ್ತಿಂತೆಲ್ಲಮಂ ಪಿಂತೆ ತಾನೆರೆದಳ್ ಪಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ‘

ಇದು ಕ್ರಿ.ಶ.ಸುಮಾರು ೧೪೧೧ ರ ಶಾಸನವೊಂದರಲ್ಲಿ ಕಂಡುಬರುವ ಪದ್ಯ. ವಿಜಯನಗರದ ಪ್ರೌಢಪ್ರತಾಪದೇವರಾಯನ ಕಾಲದಲ್ಲಿ ರಚಿತವಾದದ್ದು. ಇವನ ಮಂತ್ರಿ ಲಕ್ಷ್ಮೀಧರಾಮಾತ್ಯನು ಮಹಾಗಣಪತಿಯನ್ನು ಪ್ರತಿಷ್ಠಾಪಿಸಿ, ಅದಕ್ಕೆ ದತ್ತಿಯನ್ನು ಬಿಟ್ಟ ಸಂಗತಿ ಈ ಶಾಸನದಲ್ಲಿ ಉಕ್ತವಾಗಿದೆ. ಲಕ್ಷ್ಮೀಧರನು ಮಗುವಾಗಿದ್ದಾಗ ಅವನ ತಾಯಿ ಹಾಲೆರೆಯುತ್ತಾ ಅದರೊಂದಿಗೆ ಉದಾತ್ತ ವಿಚಾರದ ಸಂಸ್ಕೃತಿಯನ್ನೂ ರಕ್ತಗತವಾಗುವಂತೆ ಎರೆದಳೆಂಬುದನ್ನು ಇಲ್ಲಿ ವರ್ಣಿಸಲಾಗಿದೆ.

ಇದು ಮಗುವಿನ ಮೊದಲ ಗುರುವಾಗಿ ತಾಯಿ ನೀಡಿದ್ದ ಶಿಕ್ಷಣ. ಇದರ ಫಲವೇ ಮುಂದೆ ಆತ ಪ್ರೌಢಪ್ರತಾಪದೇವರಾಯನ ಮಂತ್ರಿಯಾಗಿದ್ದಾಗ ಮಹಾಗಣಪತಿಯನ್ನು ಪ್ರತಿಷ್ಠಾಪಿಸಿ, ಅದಕ್ಕೆ ದತ್ತಿಯೊಂದನ್ನು ಬಿಡುವ ಸಂಸ್ಕಾರವಂತ ವ್ಯಕ್ತಿಯಾಗಲು ಬುನಾದಿಯಾಗಿತ್ತು. ತಾಯಿ ನೀಡಿದ್ದ ನೈತಿಕ ಶಿಕ್ಷಣದ ಪರಿಣಾಮವೇ ಇದು. ಇದೇ ರೀತಿಯಲ್ಲಿ ಹಿಂದೂ ಸಾಮ್ರಾಜ್ಯ ಸ್ಥಾಪಕನೆನಿಸಿರುವ ಛತ್ರಪತಿ ಶಿವಾಜಿಗೆ ಆತನ ತಾಯಿ ಬಾಲ್ಯದಲ್ಲಿಯೇ ರಾಮಾಯಣ ಮತ್ತು ಮಹಾಭಾರತಗಳಿಂದ ಆದರ್ಶ ವ್ಯಕ್ತಿಗಳ ಕಥೆಗಳನ್ನು ಆರಿಸಿಕೊಂಡು ಹೇಳುತ್ತಾ, ಶೈಶವದಿಂದಲೇ ಮೌಲ್ಯಗಳನ್ನು ತುಂಬಿದ್ದು ಇತಿಹಾಸದಲ್ಲಿ ಉಲ್ಲೇಖವಾಗಿದೆ. ತಾಯ್ನಾಡಿನ ಬಗ್ಗೆ ಶಿವಾಜಿಗೆ ಇದ್ದ ಭಕ್ತಿ, ಪ್ರೇಮ, ಕಾಳಜಿಗೆ ಕಾರಣಕರ್ತಳೂ, ಪ್ರೇರಕಶಕ್ತಿಯೂ ಆತನ ತಾಯಿಯೇ ಆಗಿದ್ದಾಳೆ.

ಸಮಾಜದ ಗಣ್ಯವರ್ಗಗಳಲ್ಲಿ ಮಾತ್ರವೇ ಇಂತಹ ಉದಾತ್ತ ಸಂಸ್ಕಾರದ ಮಾತೆಯರನ್ನು, ಅವರ ಮಹತ್ತ್ವವನ್ನು ಕಾಣುವುದಲ್ಲ, ನಮ್ಮ ಗ್ರಾಮೀಣ ಪ್ರದೇಶಗಳಲ್ಲಿನ ಜನಪದರ ಸಂಸ್ಕೃತಿಯಲ್ಲಿ ಸಹ ಈ ಅಂಶವನ್ನು ಗುರುತಿಸಲಾಗಿದೆ. ಹಳ್ಳಿಗಾಡಿನ ತಾಯಿಯೊಬ್ಬಳು ತನ್ನ ಮಗುವಿಗೆ ಹೀಗೆ ಹೇಳುತ್ತಾ ಲಾಲಿಸುತ್ತಾಳಂತೆ. ‘ಆಚಾರಕೆ ಅರಸಾಗು । ನೀತಿಗೆ ಪ್ರಭುವಾಗು । ಮನೆಗೆ ಮಾಣಿಕವಾಗು । ನನ ಕಂದ ಜ್ಯೋತಿಯೆ ಆಗು ಜಗಕೆಲ್ಲ ॥

ತನ್ನ ಮಗು ಉತ್ತಮವಾದ ಆಚರಣೆಗಳನ್ನೇ ಬದುಕಿನಲ್ಲಿ ಅಳವಡಿಸಿಕೊಂಡು, ಎಲ್ಲರಿಗೂ ಅನುಕರಣೀಯನೆನಿಸುವಂತೆ ಬೆಳೆಯಬೇಕೆಂಬುದು ತಾಯಿಯ ಆಸೆ. ನ್ಯಾಯ,ಧರ್ಮಗಳನ್ನು ಅರಿತು ನಡೆಯುತ್ತ, ಸತ್ಯವಂತನೆಂದು ಹೆಸರು ಗಳಿಸಿ ಎಲ್ಲರ ಮೆಚ್ಚಿಕೆಗೆ ಪಾತ್ರವಾಗುವಂತಹ ಗುಣಗಳನ್ನು ಬೆಳೆಸಿಕೊಳ್ಳಬೇಕಂತೆ. ಹಾಗೆ ಬೆಳೆದು ಜಗತ್ತಿಗೇ ಬೆಳಕು ತೋರುವಂತೆ ಆಗಲೆಂದು ಹಾರೈಸುತ್ತಾಳೆ. ಇದು ನಿಜವಾದ ಶಿಕ್ಷಣ. ತಾಯಿ ಕಲಿತವಳಲ್ಲ, ನಿಜ, ಆದರೆ ಈಕೆಯಲ್ಲಿರುವ ಜೀವನಮೌಲ್ಯ ಅನ್ಯಾದೃಶವಾದದ್ದು. ಇಂತಹ ಶಿಕ್ಷಣವೇ ಮಗುವನ್ನು ಮಾನವೀಯತೆ ಹೊಂದಿದ ವ್ಯಕ್ತಿಯನ್ನಾಗಿ ರೂಪಿಸುವುದು. ಇದನ್ನು ಕೊಡಲು ತಾಯಿಗೆ ಮಾತ್ರವೇ ಸಾಧ್ಯ. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?'ಎಂಬ ಗಾದೆಯಂತೆ ಚಿಕ್ಕಂದಿನಲ್ಲಿ ದೊರೆಯುವ ಸಂಸ್ಕಾರವೇ ಕಡೆಯವರೆಗೂ ಉಳಿಯುವ ಉತ್ತಮ ತಳಹದಿಯಾಗುತ್ತದೆ.

ಈ ತಳಹದಿಯಲ್ಲಿರುವ ಸತ್ತ್ವವೇ ವ್ಯಕ್ತಿಯ ಅಂತರಂಗದ ಪರಿಶುದ್ಧಿಯನ್ನು ರಕ್ಷಿಸುವ ಶಕ್ತಿಯಾಗುತ್ತದೆ. ಅದನ್ನೇ ಡಿ.ವಿ.ಜಿ.ಯವರು ಹೇಳುತ್ತಾರೆ, 'ಪುಸ್ತಕದಿ ದೊರೆತರಿವು.ಮಸ್ತಕದಿ ತಳೆದ ಮಣಿ | ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ | ವಸ್ತು ಸಾಕ್ಷಾತ್ಕಾರವಂತರೀಕ್ಷಣೆಯಿಂದ | ಶಾಸ್ತ್ರಿತನದಿಂದಲ್ಲ -ಮಂಕುತಿಮ್ಮ.

ಶಿಕ್ಷಣವೆಂದರೆ ಕೇವಲ ಪುಸ್ತಕ ಜ್ಞಾನವಲ್ಲ. ಅದು ನಮ್ಮ ಮನಸ್ಸನ್ನು, ಬುದ್ಧಿಯೊಂದಿಗೆ ಸಂಸ್ಕರಿಸಬೇಕು. ನಮ್ಮ ವ್ಯಕ್ತಿತ್ವದಲ್ಲಿನ ದೋಷಗಳನ್ನು ನಾವೇ ಗುರುತಿಸಿ, ಅವುಗಳನ್ನು ತಿದ್ದಿಕೊಳ್ಳುವ ಮನೋಭಾವವನ್ನು ಬೆಳೆಸಬೇಕು. ವಿನಯವಂತಿಕೆ ನಮ್ಮಲ್ಲಿರಬೇಕಲ್ಲದೆ ಅಹಂಭಾವವಲ್ಲ. ಅಂತಹ ಸಂಸ್ಕಾರವನ್ನು ನೀಡುತ್ತಾ, ತಿದ್ದಿ, ತೀಡಿ ಬೆಳೆಸಲು ತಾಯಿಗೆ ಮಾತ್ರವೇ ಸಾಧ್ಯ ಮತ್ತು ಆಕೆಯೇ ಅದನ್ನು ಮಾಡಬೇಕು. ತಪ್ಪು ಮಾಡುವ ಮಕ್ಕಳ ದೋಷಗಳನ್ನು ತಾಯಿಯಾದವಳು ತಿದ್ದಬೇಕು. ಏಕೆಂದರೆ ಮಗು ಸಹಜವಾಗಿಯೇ ಪ್ರತಿಯೊಂದಕ್ಕೂ ತಾಯಿಯನ್ನೇ ಅವಲಂಬಿಸಿರುತ್ತದೆ. ಆಕೆಯ ಪ್ರಭಾವಕ್ಕೆ ಒಳಗಾಗಿರುತ್ತದೆ. ಹಾಗಾಗಿ ಆಕೆ ಬೆಳೆಸುವ ಗುಣಗಳು ಮಗುವಿನ ಅಭಿವೃದ್ಧಿಗೆ ಪೂರಕವಾಗಿಯೇ ಇರುತ್ತದೆ.ಮಾನವೀಯತೆಯ, ಹೃದಯಸಂಸ್ಕಾರ ಹೊಂದಿದ ವ್ಯಕ್ತಿಯನ್ನಾಗಿ ಬೆಳೆಸುವುದು ಆಕೆಯ ಆದ್ಯ ಕರ್ತವ್ಯವಾಗಿರುತ್ತದೆ.

ಈ ಸಂದರ್ಭದಲ್ಲಿ ಮಹಾಭಾರತದ ಸನ್ನಿವೇಶವೊಂದು ನೆನಪಾಗುತ್ತದೆ. ತಾಯಿಯಾದವಳು ತನ್ನ ಮಕ್ಕಳನ್ನು ಸರಿಯಾಗಿ ಬೆಳೆಸದಿದ್ದರೆ ಪರಿಣಾಮವೇನಾಗುವುದೆಂಬುದಕ್ಕೆ ಅತ್ಯಂತ ಸೂಕ್ತವಾದ ಉದಾಹರಣೆ ಅಲ್ಲಿದೆ.

ಕುರುಕ್ಷೇತ್ರ ಯುದ್ಧ ಮುಕ್ತಾಯಗೊಂಡಿದೆ. ಧೃತರಾಷ್ಟ್ರ,ಗಾಂಧಾರಿಯರು ತಮ್ಮೆಲ್ಲ ಮಕ್ಕಳನ್ನೂ ಕಳೆದುಕೊಂಡ ದುಃಖಸಾಗರದಲ್ಲಿ ಮುಳುಗಿದ್ದಾರೆ. ಧೃತರಾಷ್ಟ್ರನಿಗೆ ಪಾಂಡವರ ಮೇಲೆ, ಅದರಲ್ಲಿಯೂ ಭೀಮನ ಮೇಲೆ ಅಗಾಧವಾದ ಕ್ರೋಧವಿದೆ. ಅವನು ತಳಮಳಿಸುತ್ತಿದ್ದಾನೆ. ಗಾಂಧಾರಿಯ ಪುತ್ರಶೋಕವಂತೂ ಅಪಾರವಾಗಿದೆ. ಆ ಸಮಯದಲ್ಲಿ ಶ್ರೀಕೃಷ್ಣ ಪಾಂಡವರನ್ನೆಲ್ಲ ಕರೆದುಕೊಂಡು ಹಸ್ತಿನಾಪುರದ ಅರಮನೆಗೆ ಬರುತ್ತಾನೆ. ಹಿರಿಯರ ಆಶೀರ್ವಾದ ಪಡೆಯಲು ಅವರೆಲ್ಲರೂ ನಮಸ್ಕರಿಸಿದೊಡನೆ ಧೃತರಾಷ್ಟ್ರ, ಗಾಂಧಾರಿಯರ ದುಃಖ, ಆಕ್ರೋಶದ ರೂಪದಲ್ಲಿ ಸ್ಫೋಟಗೊಳ್ಳುತ್ತದೆ. ಗಾಂಧಾರಿಯಂತೂ ವಿವೇಕವನ್ನು ಕಳೆದುಕೊಂಡು ಶ್ರೀಕೃಷ್ಣನನ್ನು ನಿಂದಿಸತೊಡಗುತ್ತಾಳೆ. ಎಲ್ಲವನ್ನೂ ನಿಯಂತ್ರಿಸಬಲ್ಲವನಾಗಿದ್ದೂ ಕೂಡ ಯುದ್ಧವನ್ನು ನಿಲ್ಲಿಸದೆ, ಕೌರವರ ನಾಶಕ್ಕೆ ಕಾರಣನಾದನೆಂದು ಆರೋಪಿಸುತ್ತಾಳೆ. ಕಡೆಗೆ ಶ್ರೀಕೃಷ್ಣನೂ ಸೇರಿದಂತೆ ಯಾದವರೆಲ್ಲರೂ ಪರಸ್ಪರ ಹೊಡೆದಾಡಿ, ನಾಶವಾಗುವಂತೆ ಶಪಿಸುತ್ತಾಳೆ. ಆಗ ಶ್ರೀಕೃಷ್ಣನು ಆಡುವ ಮಾತುಗಳು ತಾಯಿಯಾದವಳು ಮಕ್ಕಳಿಗೆ ಬಾಲ್ಯದಿಂದಲೇ ಸರಿಯಾಗಿ ಮಾರ್ಗದರ್ಶನ ನೀಡದಿದ್ದರೆ, ಅವರನ್ನು ಸರಿಯಾಗಿ ಬೆಳೆಸುವ ಕಾಳಜಿಯನ್ನು ತೋರದಿದ್ದರೆ ಆಗುವ ಅನಾಹುತಗಳನ್ನು ವಿವರಿಸುತ್ತವೆ.

'ಅಮ್ಮ, ನೀನು ನನಗೆ ಶಾಪ ನೀಡಿದ್ದನ್ನು ನಾನು ಪ್ರಶ್ನಿಸುವುದಿಲ್ಲ. ಆದರೆ ಪುತ್ರಶೋಕದಲ್ಲಿ ಮುಳುಗಿಹೋಗಿರುವ ನೀನು ವಿವೇಕವನ್ನು ಕಳೆದುಕೊಂಡಿರುವೆ. ನಾನೇನೋ ಪಾಂಡವರ ಪಕ್ಷಪಾತಿ, ನಿಜ. ಆದರೆ ಅಮಾಯಕರಾದ ಯಾದವರನ್ನೇಕೆ ಶಪಿಸಿದೆ? ಅವರೆಲ್ಲ ನಿನ್ನ ಮಕ್ಕಳ ಪರವಾಗಿಯೇ ಯುದ್ಧ ಮಾಡಿದರಲ್ಲವೆ? ಅದೂ ಇರಲಿ, ಈ ಎಲ್ಲ ಅನಾಹುತಕ್ಕೆ ಕಾರಣ ನಿನ್ನ

ಮಗನ ಮೂರ್ಖತನ ಮತ್ತು ಅಸೂಯೆಯೇ ಅಲ್ಲವೆ ? ಇನ್ನೂ ಮೂಲಕ್ಕೆ ಕಾರಣ ಹುಡುಕಿದರೆ ನಿನ್ನಿಂದಲೇ ಈ ತಪ್ಪುಗಳ ಸರಮಾಲೆ ಆರಂಭವಾಗಿದೆ. ಯೋಚಿಸು. ನಿನ್ನ ಪತಿ ಕುರುಡನೆಂದು ತಿಳಿದ ಕೂಡಲೇ ನೀನೂ ಕಣ್ಣಿಗೆ ಬಟ್ಟೆ ಕಟ್ಟಿಕೊಂಡುಬಿಟ್ಟೆ. ನಿನ್ನ ಮಗನ ಯಾವ ತಪ್ಪೂ ನಿನ್ನ ಅರಿವಿಗೆ ಬರಲೇ ಇಲ್ಲ. ಮಕ್ಕಳು ಹೇಗೆ ಬೆಳೆಯುತ್ತಿದ್ದಾರೆಂದು ನೀನು ಯೋಚಿಸಲೇ ಇಲ್ಲ. ಗಮನಿಸಲೂ ಇಲ್ಲ. ಹಾಗೆ ಮಾಡದೆ ಆ ನಿನ್ನ ಮಕ್ಕಳ ಸ್ವಭಾವವನ್ನು ಚಿಕ್ಕಂದಿನಲ್ಲಿಯೇ ತಿದ್ದಿ,ಸಂಸ್ಕಾರವನ್ನು ನೀಡಿದ್ದರೆ ಅವರು ಪಾಂಡವರ ಮೇಲೆ ದ್ವೇಷಾಸೂಯೆಗಳನ್ನು ಬೆಳೆಸಿಕೊಳ್ಳುತ್ತಿದ್ದರೇ? ನೀನು ತಾಯಿಯಾಗಿ ನಿನ್ನ ಕರ್ತವ್ಯವನ್ನು ಮಾಡಿದೆಯಾ? ಇಲ್ಲ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಪತಿವ್ರತೆಯ ಕೀರ್ತಿ ಪಡೆದುಕೊಂಡುಬಿಟ್ಟೆ. ಇಂದಿನ ಈ ಎಲ್ಲ ಅನಾಹುತಕ್ಕೆ ನಿನ್ನ ಕರ್ತವ್ಯಲೋಪವೇ ಕಾರಣ. ಅದಾವುದನ್ನೂ ಯೋಚಿಸದೆ ನನ್ನನ್ನೂ,ಯಾದವಕುಲವನ್ನೂ ಶಾಪಕ್ಕೆ ಗುರಿಮಾಡಿದೆಯಲ್ಲ?'.

ನ್ಯಾಯ, ನೀತಿ, ಧರ್ಮಪಾಲನೆ, ತಾಯ್ನೆಲದ ಬಗೆಗೆ ಗೌರವ, ಅಭಿಮಾನ, ಸೇವೆ ಸಲ್ಲಿಸುವ ಮನೋಭಾವ, ಸಮಾಜಮುಖೀ ಚಿಂತನೆ ಈ ಎಲ್ಲದರ ಮೊಳಕೆಯನ್ನು ಶಾಲಾಶಿಕ್ಷಣಕ್ಕೆ ಮೊದಲು ಮಗುವಿನ ಮನದಲ್ಲಿ ಬಿತ್ತುವವಳು ತಾಯಿ. ಆ ಸಂಸ್ಕಾರವೇ ಮುಂದೆ ವೃದ್ಧಿಯಾಗಿ ವ್ಯಕ್ತಿಯನ್ನು ಜೀವನವಿಡೀ ಕಾಪಾಡುತ್ತದೆ.ಅದಕ್ಕೇ ಆಕೆಯನ್ನು ಮೊದಲ ಗುರುವೆನ್ನುವುದು.ಆಕೆ ನೀಡುವುದು ನೈತಿಕ ಶಿಕ್ಷಣ. ಹಾಗಾಗಿ ನಮ್ಮ ಭಾರತೀಯ ಸಂಸ್ಕಾರದ ಚಿಂತನೆಗಳಲ್ಲಿ ಮೊದಲಿಗೆ ಕಲಿಸುವುದೇ 'ಮಾತೃದೇವೋಭವ'ಎಂದು ಆರಾಧಿಸಬೇಕೆಂಬ ಪಾಠವನ್ನು.

ಶ್ರೀಶಾರದಾನಿಕೇತನ ಅಸೋಸಿಯೇಷನ್ (ರಿ)
ಬೆಂಗಳೂರು–560 019



# ವೃದ್ಧಾವಸ್ಥೆಯಲ್ಲಿ ಬಾಲ್ಯಾವಸ್ಥೆಯ ನೆನಪುಗಳೇ ಸಂಗಾತಿ

**ಪ್ರೊ॥ ಕೆ.ಜಿ.ಪ್ರಭಾಕರ**
ಬೆಂಗಳೂರು

**ಪರಿಚಯ–** 08–12–1945 ರಂದು ಶ್ರೀ ಗೋಪಾಲಸ್ವಾಮಿ ಹಾಗೂ ಶ್ರೀಮತಿ ಕಮಲಮ್ಮ ದಂಪತಿಗಳ ಜ್ಯೇಷ್ಠಪುತ್ರನಾಗಿ ಮೈಸೂರಿನಲ್ಲಿ ಜನಿಸಿದ ಇವರು ಅಲ್ಲಿನ ಶಾರದಾವಿಲಾಸ ಹೈಸ್ಕೂಲು ಕಾಲೇಜುಗಳಲ್ಲಿ ವಿದ್ಯಾಭ್ಯಾಸಮಾಡಿ B.Sc., ಪದವಿಯನ್ನು 1965 ರಲ್ಲಿ ಪೂರ್ಣಗೊಳಿಸಿರುತ್ತಾರೆ. ನಂತರ ಉಪಾಧ್ಯಾಯನಾಗಿ ಸೇವೆಸಲ್ಲಿಸಬೇಕೆಂಬ ಮಹದಾಕಾಂಕ್ಷೆಯಿಂದ ಬಿ.ಇಡಿ., ಪದವಿಯನ್ನು ಗಳಿಸಿ ಕೆಲವು ಕಾಲ ಮಂಡ್ಯದ ಸಮೀಪ ಒಂದು ಗ್ರಾಮದಲ್ಲಿ ಹೈಸ್ಕೂಲ್ ಅಧ್ಯಾಪಕರಾಗಿ ಸೇವೆ. ಆ ನಂತರ ಮೈಸೂರಿನ ಪ್ರತಿಷ್ಠಿತ ಮಾನಸಗಂಗೋತ್ರಿಯಲ್ಲಿ 1971 ರಲ್ಲಿ ಹಿಂದಿ ಭಾಷೆಯಲ್ಲಿ ವಿಶೇಷಪ್ರತಿಭೆಯಿಂದ M.A., ಸ್ನಾತಕೋತ್ತರ ಪದವಿ. ಇವರ ಪ್ರತಿಭೆಗೆ ತಕ್ಕಂತೆ ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಪ್ರತಿಷ್ಠಿತ M.E.S ಕಲೆ ವಿಜ್ಞಾನ ವಾಣಿಜ್ಯ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುವ ಅವಕಾಶ. ಅದೇ ಸಂಸ್ಥೆಯಲ್ಲಿ 33 ವರ್ಷಗಳಷ್ಟು ದೀರ್ಘಕಾಲ ರೀಡರ್ ಪ್ರೊಫೆಸರ್ ಮುಂತಾದ ಉನ್ನತಹುದ್ದೆಗಳಲ್ಲಿ ಸೇವೆ ಸಲ್ಲಿಸಿ, ಸಾವಿರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ 2003 ರ ವಿಸ್ತೃತ ಅವಧಿಯಲ್ಲಿ ನಿವೃತ್ತರಾದರು. ಇವರ ಮಾರ್ಗದರ್ಶನದಿಂದ ಸಾವಿರಾರು ವಿದ್ಯಾರ್ಥಿಗಳು ಇಂದಿಗೂ ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನಮಾನವನ್ನು ಪಡೆದು ಸಾರ್ಥಕ್ಯವನ್ನು ಕಂಡುಕೊಂಡಿರುತ್ತಾರೆ. ಕಾಲೇಜಿನಲ್ಲಿದ್ದಾಗಲೂ ಶ್ರೀಯುತರು ಬಡವಿದ್ಯಾರ್ಥಿಗಳ ಸಹಾಯನಿಧಿಯ ಸ್ಥಾಪನೆ, ವಯಸ್ಕರ ಶಿಕ್ಷಣ, ಗ್ರಾಮಾಂತರ ರಸ್ತೆಗಳ ಅಭಿವೃದ್ಧಿಕಾರ್ಯಕ್ರಮ ಮುಂತಾದ ಅನೇಕ ಸಮಾಜಸೇವಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುತ್ತಾರೆ. ಬೆಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾಕೇಂದ್ರದ ಅಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸಿರುತ್ತಾರೆ. ಇಷ್ಟೆಲ್ಲ ಸಾಧನೆಯನ್ನು ಮಾಡಿರುವ ಶ್ರೀಯುತರು ಈಗಲೂ ತಮ್ಮ ಕ್ಷೇತ್ರದ ಸಮಾಜಸೇವಾಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ, ಪ್ರಸ್ತುತ ತಾವು ವಾಸವಿರುವ ಜಡ್ಜಸ್ ಕಾಲೋನಿಯ ಕ್ಷೇಮಾಭಿವೃದ್ಧಿಸಂಘದ ಅಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸುತ್ತಾ ಸರಳಜೀವನವನ್ನು ನಡೆಸುತ್ತಿದ್ದಾರೆ.

ಮಗುವಾಗಿದ್ದಾಗ ತಾಯಿಯ ಮಡಿಲಲ್ಲಿ ಬೆಚ್ಚಗೆ ಮಲಗಿ ಅನಂತರ ಬಾಲ್ಯದಲ್ಲಿ ಭೂಮಿತಾಯಿಯ ಮಡಿಲಲ್ಲಿ ಆಟವಾಡಿ ಬೆಳೆದು ಬಂದ ನಾನು ದೊಡ್ಡವನಾದ ಮೇಲೆ ಏನೇನೋ ಆಗಬೇಕೆಂದು ಕನಸು ಕಾಣುತ್ತಿದ್ದೆ. ಆ ಸಮಯದಲ್ಲಿ ನನ್ನ ಗುರುಗಳು ಹೇಳಿದ ಮಾತು ಇನ್ನೂ ನನ್ನ ಹೃದಯಾಂತರದಲ್ಲಿ ಶಾಶ್ವತವಾಗಿ ನೆಲೆಸಿದೆ. ಅವರು ಆಗ ನನಗೆ ಹೇಳಿದ್ದೇನೆಂದರೆ, "ಮಗು ಮೊದಲು ಒಳ್ಳೆಯ ಮನುಷ್ಯನಾಗಲು ಪ್ರಯತ್ನಪಡು. ಆದಾದ ನಂತರ ಏನಾದರೂ ಆಗು."

ಹೂವಿನ ಪರಿಮಳ ಗಾಳಿ ಬೀಸುವ ದಿಕ್ಕಿನಲ್ಲಷ್ಟೇ ಹರಡುತ್ತದೆ. ಮನುಷ್ಯನ ಒಳ್ಳೆಯತನ ಎಲ್ಲೆಡೆ ವ್ಯಾಪಿಸುತ್ತದೆ. ವೃದ್ಧಾಪ್ಯದಲ್ಲಿ ಬಾಲ್ಯದ ನೆನಪೇ ಊರುಗೋಲು. ಬಾಲ್ಯದಲ್ಲಿ ಆಡಿದ ಆಟಪಾಠಗಳ ನೆನಪೇ ಮನಸ್ಸಿಗೆ ಸಂತೋಷವನ್ನು ಕೊಡುವ ಸಾಧನ, ಸುಖದ ಬೆನ್ನಟ್ಟಿ ಹೋಗದೇ ಬಂದದ್ದನ್ನೇ ಸುಖವೆಂದು ಸಂತೋಷಪಟ್ಟರೆ ಅದೇ ಜೀವನದ ಸಾರ್ಥಕತೆ. ನಮ್ಮ ಮನಸ್ಥಿತಿಯನ್ನು ಸರಿಯಾಗಿ ರೂಪಿಸಿಕೊಳ್ಳುವ ಹೊಣೆಗಾರಿಕೆ ನಮ್ಮದೇ ಆಗಿರುತ್ತದೆ.

ಜೀವನದಲ್ಲಿ ಕಷ್ಟವೇ ಬರಲಿ, ಸುಖವೇ ಬರಲಿ ಎರಡನ್ನೂ ಭಗವದ್ಗೀತೆಯಲ್ಲಿ ಹೇಳಿರುವಂತೆ ಸಮಾನ ಮನಸ್ಥಿತಿಯಿಂದ ಸ್ವೀಕರಿಸಬೇಕು. ಪಾಲಿಗೆ ಬಂದದ್ದು ಪಂಚಾಮೃತ ಎಂಬ ಭಾವನೆ ಇರಬೇಕು. ಆಗ ಅದು ಭಗವಂತನ ಪ್ರಸಾದವಾಗುವುದರಲ್ಲಿ ಯಾವ ಸಂದೇಹವೂ ಬೇಡ. ಕೇವಲ ಸುಖವನ್ನು ಹುಡುಕಲು ಹೊರಟರೆ

ನಮ್ಮ ಅಮೂಲ್ಯ ಸಮಯ ವ್ಯರ್ಥವಾಗುವುದು ಮಾತ್ರವಲ್ಲದೇ ನಮ್ಮ ಕೈಸೇರುವುದು ಕೇವಲ ಶೂನ್ಯ. ಸುಖದ ಅಲೆದಾಟದಲ್ಲಿ ನೆಮ್ಮದಿಯನ್ನು ಹಾಳು ಮಾಡಿಕೊಳ್ಳದೆ ಇರುವುದರಲ್ಲೇ ತೃಪ್ತಿಕಂಡರೆ ಅದೇ ಸುಖ ಅದೇ ಶಾಂತಿ. ಹಾಗಾದರೆ ಸಮಯವನ್ನು ಸದುಪಯೋಗಪಡಿಸಿಕೊಳ್ಳಬೇಕಾದರೆ ಇರುವ ಒಂದೇ ಮಾರ್ಗ– ನಿಷ್ಕಾಮ ಕರ್ಮ. ಪರೋಪಕಾರವೇ ನಮ್ಮ ಕಾಯಕವಾಗಬೇಕು. ಇದಕ್ಕೆ ಪ್ರೇರಣೆ ಸತತವಾಗಿ ಭಗವಂತನ ಧ್ಯಾನ ಮತ್ತು ಭಗವದ್ಗೀತೆಯ ಸಂದೇಶ.

ಪ್ರಪಂಚದ ನಿಯಮ ಬಹಳ ಸರಳವಾದುದು. ಇಲ್ಲಿ ನಮ್ಮ ನಿಷ್ಠಾವಂತ ಪ್ರಯತ್ನಕ್ಕೆ ಖಂಡಿತ ಫಲ ಸಿಗುತ್ತದೆ. ಆದರೆ ಪ್ರಯತ್ನಕ್ಕೆ ಮೊದಲೇ ಫಲಾಪೇಕ್ಷೆ ಮಾಡುವುದು ತಪ್ಪಾಗುತ್ತದೆ. ನಮ್ಮ ಸಂಪೂರ್ಣ ಗಮನ ನಾವು ಮಾಡುವ ಕರ್ಮದ ಕಡೆ ಇರಬೇಕೇ ಹೊರತು ಫಲದ ಕಡೆ ಅಲ್ಲ. ಹುಟ್ಟಿದ ಮೇಲೆ ಸಾಯಲೇ ಬೇಕು. ಅದು ವಿಧಿನಿಯಮ. ಇರುವಷ್ಟು ಕಾಲ ನಾವು ಎಲ್ಲರೊಡನೆ ಸ್ನೇಹ ಸೌಹಾರ್ದದಿಂದ ಬದುಕುವ ಕಲೆಯನ್ನು ಕಲಿಯಬೇಕು. ಪ್ರೀತಿಸುವುದು ಹಾಗೂ ಪ್ರೀತಿಸಲ್ಪಡುವುದೇ ನಮ್ಮ ಜೀವನದ ಗುರಿಯಾಗಬೇಕು. ಪ್ರೀತಿಯಿಂದ ಬದುಕಿದಾಗ ಮಾತ್ರ ನಮ್ಮ ಜೀವನ ಆನಂದಮಯವಾಗಿರುತ್ತದೆ.

ಯಾವುದೇ ಒಂದು ಹೊಸ ಸೃಷ್ಟಿ, ಆವಿಷ್ಕಾರ ಧ್ಯಾನದ ಸ್ಥಿತಿಯಲ್ಲೇ ಆಗುತ್ತದೆ. ಅಂದರೆ ಇದಕ್ಕೆ ಏಕಾಗ್ರತೆ ಮತ್ತು ಶ್ರದ್ಧೆಯ ಆವಶ್ಯಕತೆ ಇರುತ್ತದೆ. ವಿಜ್ಞಾನದ ಆವಿಷ್ಕಾರ, ಕಾವ್ಯಸೃಷ್ಟಿ ಯಾವುದೇ ಇದ್ದರೂ ಅದು ಸಫಲವಾಗಬೇಕಾದರೆ ತಲ್ಲೀನತೆ ಹಾಗೂ ತನ್ಮಯತೆ ಅಗತ್ಯ. ಇಂತಹ ವ್ಯಕ್ತಿಗಳು ಸ್ವಂತ ಸುಖವನ್ನು ಮರೆತು ಲೋಕ ಕಲ್ಯಾಣದ ಬಗ್ಗೆ ಕಾರ್ಯತತ್ಪರರಾಗಿರುತ್ತಾರೆ. ಜನಸೇವೆಯೇ ಜನಾರ್ಧನಸೇವೆ ಎಂದು ನಂಬಿರುತ್ತಾರೆ. ತಮ್ಮತಮ್ಮ ಆತ್ಮೋದ್ಧಾರಕ್ಕಾಗಿ ಎಲ್ಲರೂ ಮಾಡಬೇಕಾಗಿರುವ ಕೆಲಸ ಇದೇ ಅಲ್ಲವೇ?

ಅತಿ ದುರ್ಲಭವಾದ ಮಾನವ ಶರೀರವು ಬಹಳ ಜನ್ಮಗಳ ನಂತರ ಪರಮದಯಾಳು ಭಗವಂತನ ಕೃಪೆಯಿಂದ ದೊರಕಿರುವಾಗ ಇದನ್ನು ಸಾರ್ಥಕಪಡಿಸಿಕೊಳ್ಳಬೇಕಾದದ್ದು ನಮ್ಮ ಧರ್ಮವಲ್ಲವೇ. ನಾಶವಾಗುವ ಕ್ಷಣಭಂಗುರವಾದ ಪ್ರಪಂಚದ ಅಶಾಶ್ವತ ಭೋಗಗಳನ್ನು ಅನುಭವಿಸುವುದರಲ್ಲೇ ಜೀವನದ ಅಮೂಲ್ಯ ಸಮಯವನ್ನು ಹಾಳುಮಾಡಿಕೊಳ್ಳದೇ ಸಿಕ್ಕಿರುವ ಅವಕಾಶವನ್ನು ಭಗವಂತನಿಗೆ ಪ್ರೀತಿಯಾದ ಪರೋಪಕಾರಕ್ಕಾಗಿ ಬಳಸಿ ಜೀವನವನ್ನು ಸಾರ್ಥಕಪಡಿಸಿಕೊಳ್ಳೋಣ ಏನಂತೀರಿ?

ಜೀವನವನ್ನು ಹೇಗೆ ಸಾರ್ಥಕ ಪಡಿಸಿಕೊಳ್ಳಬೇಕು ಎಂದು ತಿಳಿದುಕೊಳ್ಳಬೇಕಾದರೆ ಡಿ.ವಿ.ಜಿಯವರ ಈ ಕೆಳಗಿನ ಕಗ್ಗವೇ ಮಾರ್ಗದರ್ಶಿ:

ಹುಲ್ಲಾಗು ಬೆಟ್ಟದಡಿ
ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿಸುರಿಸೆ
ಕಲ್ಲುಸಕ್ಕರೆಯಾಗು ದೀನದುರ್ಬಲರಿಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ.

ಶ್ರೀಶಾರದಾನಿಕೇತನ ಅಸೋಸಿಯೇಷನ್ (ರಿ)
ಬೆಂಗಳೂರು–560 019



# ಶ್ರೀಮಚ್ಛಂಕರಭಗವತ್ಪಾದರು

ಎಸ್.ಆರ್. ಅನಂತಮೂರ್ತಿ
ಬೆಂಗಳೂರು-560061

ಜಾತಿ ಮತ ಲಿಂಗ ವಯಸ್ಸು ಆಶ್ರಮ ಮೊದಲಾದ ಯಾವ ಭೇದವೂ ಇಲ್ಲದೆ ಪರಮಪುರುಷಾರ್ಥವಾದ ಮೋಕ್ಷವನ್ನು ಪಡೆಯಲು ಸಮಸ್ತಜೀವಿಗಳೂ ಸಮಾನವಾಗಿ ಅಧಿಕಾರಿಗಳು ಎಂಬ ಪ್ರಾಚೀನವಾದ ಉಪನಿಷತ್ಸಿದ್ಧಾಂತವನ್ನು ಜಗತ್ತಿಗೆ ತಿಳಿಸಿದ ಅದ್ವಿತೀಯಜ್ಞಾನಿವರೇಣ್ಯ-ಶ್ರೋತ್ರಿಯಬ್ರಹ್ಮನಿಷ್ಠ-ಯತಿಶ್ರೇಷ್ಠರೇ ಶ್ರೀಮಚ್ಛಙ್ಕರಭಗವತ್ಪಾದರು. ಪ್ರಸ್ಥಾನತ್ರಯವೆಂದು ಪ್ರಸಿದ್ಧವಾಗಿರುವ ಉಪನಿಷತ್ತುಗಳು, ಭಗವದ್ಗೀತೆ ಹಾಗೂ ವೇದಾನ್ತಸೂತ್ರಗಳಿಗೆ ತಮ್ಮ ಹದಿನಾರನೆಯ ವಯಸ್ಸಿನಲ್ಲಿಯೇ ಪ್ರಸನ್ನಗಂಭೀರವಾದ ಭಾಷ್ಯಗಳನ್ನು ರಚನೆಮಾಡಿ, ಅದನ್ನು ಪ್ರಚಾರಮಾಡುವುದಕ್ಕಾಗಿ ಅಖಂಡಭಾರತವರ್ಷದ ಉದ್ದಗಲವನ್ನೂ ಕೇವಲ ಕಾಲ್ನಡಿಗೆಯಲ್ಲಿ ಸಂಚರಿಸಿ, ಅನೇಕಪ್ರಕಾರವಾಗಿದ್ದ ವೇದಾನ್ತಸಿದ್ಧಾನ್ತವಿರುದ್ಧವಾದಿಗಳನ್ನು ವಾದದಲ್ಲಿ ಸೋಲಿಸಿ, ಉಪನಿಷತ್ಪ್ರತಿಪಾದ್ಯವಾದ ಆತ್ಮೈಕತ್ವವನ್ನು ಜಗತ್ತಿನಲ್ಲಿ ಪ್ರತಿಷ್ಠಾಪಿಸಿದ ಮಹಾನ್ ಚೇತನವೇ ಶ್ರೀಮಚ್ಛಙ್ಕರಭಗವತ್ಪಾದರು. ಸನಾತನಧರ್ಮವನ್ನೂ, ಪರಿಶುದ್ಧವಾದ ವೇದಾನ್ತಸಿದ್ಧಾನ್ತವನ್ನೂ ಲೋಕದಲ್ಲಿ ಪ್ರಚಾರಮಾಡಿ ಜನರನ್ನು ಉದ್ಧರಿಸುವುದಕ್ಕಾಗಿಯೇ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಮಠಾಮ್ನಾಯಗಳನ್ನು ಸ್ಥಾಪನೆಮಾಡಿ, ತಮ್ಮ ಶಿಷ್ಯರನ್ನು ಆ ಪೀಠಗಳಲ್ಲಿ ಅಧ್ಯಕ್ಷರನ್ನಾಗಿ ನೇಮಿಸಿ, ಒಬ್ಬ ಅವತಾರಪುರುಷನು ಮಾಡಬಹುದಾದ ಸಮಸ್ತ ಕಾರ್ಯಗಳನ್ನೂ ಸಮರ್ಪಕವಾಗಿ ನಿರ್ವಹಿಸಿ, ಕೇವಲ ತಮ್ಮ ಮೂವತ್ತೆರಡನೆಯ ವಯಸ್ಸಿನಲ್ಲಿ ಅನ್ತರ್ಧಾನರಾದ ಮಹಾನುಭಾವರೇ ಶ್ರೀಮಚ್ಛಙ್ಕರಭಗವತ್ಪಾದರು. ಶ್ರದ್ಧೆ, ನಂಬಿಕೆ, ಅಭಿಮಾನ, ಪಕ್ಷಪಾತ ಮೊದಲಾದ ಯಾವ ಪೂರ್ವಗ್ರಹಗಳಿಗೂ ಆಸ್ಪದವನ್ನು ಕೊಡದೆ, ಕೇವಲ ವಿವೇಕ ವಿಚಾರಗಳಿಂದ ಮಾತ್ರ ಪರಮಾರ್ಥತತ್ತ್ವವನ್ನು ತಿಳಿದು, ಇಲ್ಲಿಯೇ ಈ ಜನ್ಮದಲ್ಲಿಯೇ ಈ ಶರೀರವು ಇದ್ದುಕೊಂಡಿರುವಾಗಲೇ ಅನುಭವಕ್ಕೆ ತಂದುಕೊಂಡು, ದ್ವೈತಾತ್ಮಕವಾದ ಈ ಸಂಸಾರದಿಂದ ಮುಕ್ತರಾಗಿ ಕೃತಾರ್ಥರಾಗಬಹುದಾಗಿರುವ ವಸ್ತುತಂತ್ರಜ್ಞಾನವನ್ನು ತಿಳಿಸುವುದಕ್ಕಾಗಿ ಹೊರಟಿರುವ ಒಂದು ದರ್ಶನವು ಈ ಜಗತ್ತಿನಲ್ಲಿರುವುದಾದರೆ, ಅದು ವೇದಾನ್ತದರ್ಶನವೊಂದೇ ಎನ್ನುವುದನ್ನು ಪ್ರಮಾಣಪೂರ್ವಕವಾಗಿ ತಿಳಿಸಿದ ಮಹಾನುಭಾವರೇ ಶ್ರೀಮಚ್ಛಙ್ಕರಭಗವತ್ಪಾದರು.

ಶ್ರೀ ಶಾರದಾ ನಿಕೇತನ ಅಸೋಸಿಯೇಷನ್ (ರಿ)
ಬೆಂಗಳೂರು-560 019

ಇಂತಹ ಮಹಾನುಭಾವರ ಜೀವನಚರಿತ್ರೆಯು ನಮಗೆ ನಿಖರವಾಗಿ ತಿಳಿದುಬರದಿರುವುದು ನಮ್ಮ ದೌರ್ಭಾಗ್ಯವೆನ್ನಬಹುದಾಗಿದೆ. ಈಗ ನಮಗೆ ಸಾಮಾನ್ಯವಾಗಿ ಈ ಯತಿಶ್ರೇಷ್ಠರ ವಿಚಾರದಲ್ಲಿ ತಿಳಿದುಬಂದಿರುವ

ಎಲ್ಲ ವಿಷಯಗಳಿಗೂ ಶಂಕರವಿಜಯಗಳೆಂಬ ಗ್ರಂಥಗಳೇ ಬಹುಮಟ್ಟಿಗೆ ಆಧಾರವಾಗಿವೆ. ಸುಮಾರು ಇಪ್ಪತ್ತೆರಡು ಇಂತಹ ಪ್ರಕಟಿತ ಹಾಗೂ ಅಪ್ರಕಟಿತರೂಪದ ಶಂಕರವಿಜಯಗ್ರಂಥಗಳು ಲಭ್ಯವಿರುವುದಾಗಿ ಶ್ರೀಬಲದೇವಉಪಾಧ್ಯಾಯ ಎಂಬ ಸಂಶೋಧಕರು ತಿಳಿಸುತ್ತಾರೆ. ಇವುಗಳಲ್ಲಿ ಮಾಧವೀಯ, ವ್ಯಾಸಾಚಲೀಯ, ಚಿದ್ವಿಲಾಸೀಯ, ಅನಂತಾನಂದಗಿರೀಯ ಮುಂತಾದ ಶಂಕರವಿಜಯಗ್ರಂಥಗಳು ಪ್ರಸಿದ್ಧವಾಗಿವೆ. ಇದಲ್ಲದೆ ಕೆಲವು ಪುರಾಣಗಳಲ್ಲಿಯೂ ಶ್ರೀಶಂಕರರ ವಿಷಯದ ಉಲ್ಲೇಖವು ಕಂಡುಬರುತ್ತದೆ. ಆದರೆ ಈ ಗ್ರಂಥಗಳಲ್ಲಿ ಆಚಾರ್ಯರ ಚರಿತ್ರೆಯ ವಿಷಯದಲ್ಲಿ ಒಮ್ಮತವಿರುವುದು ಕಂಡುಬರುವುದಿಲ್ಲ. ಇನ್ನು ಆಚಾರ್ಯರ ಗ್ರಂಥಗಳ ಅಧ್ಯಯನದಿಂದಲೂ ಅವರ ಚರಿತ್ರೆಯು ತಿಳಿದುಬರುವುದು ಸುಲಭವಲ್ಲ. ಆಚಾರ್ಯರು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿರುವ ಚಾರಿತ್ರಿಕವ್ಯಕ್ತಿಗಳ ಹೆಸರಿನವರು ಅನೇಕರಿದ್ದು ಅವರುಗಳು ಭಿನ್ನಭಿನ್ನ ಕಾಲದಲ್ಲಿ ಇದ್ದಂಥವರು. ಇಷ್ಟಾದರೂ, ಆಚಾರ್ಯರ ಜೀವಿತಕಾಲಾವಧಿ, ದೇಶ, ಭಾಷ್ಯರಚನೆಮಾಡಿದಾಗ ಅವರ ವಯಸ್ಸು ಮುಂತಾದ ವಿಷಯಗಳ ಬಗ್ಗೆ ಬಹುಮಟ್ಟಿಗೆ ಎಲ್ಲ ಗ್ರಂಥಗಳಲ್ಲಿಯೂ ಏಕರೂಪತೆಯಿರುವುದು ಕಂಡುಬರುತ್ತದೆ.

ಆಚಾರ್ಯರ ಜನ್ಮಸ್ಥಳ- ಆಚಾರ್ಯರ ಜನ್ಮಸ್ಥಳದ ವಿಚಾರದಲ್ಲಿ ಅಷ್ಟೇನೂ ವಿಪ್ರತಿಪತ್ತಿಯಿಲ್ಲದಿರುವುದೊಂದು ನಮ್ಮ ಸೌಭಾಗ್ಯವೆಂದೇ ಹೇಳಬಹುದಾಗಿದೆ. ಕೇರಳದ ಕಾಲಟಿಯೇ ಆಚಾರ್ಯರ ಜನ್ಮಸ್ಥಳವೆಂದು ಚಿದ್ವಿಲಾಸೀಯ ಮತ್ತು ಆನಂದಗಿರೀಯದಲ್ಲಿ ಹೇಳಿದೆ. 'ಕಾಲಟ್ಯಾಖ್ಯೇ ಗ್ರಾಮವರ್ಯೇ ಕೇರಳಾಲಂಕೃತೀಕೃತೇ । ವಿದ್ಯಾಧಿರಾಜತನಯಃ ಪ್ರಾಜ್ಞಃ ಶಿವಗುರುರ್ಬಭೌ ॥ ಬಹುಮಟ್ಟಿಗೆ ಎಲ್ಲ ಮಠಾಮ್ನಾಯಗಳೂ ಕೇರಳದ ಕಾಲಟಿಯೇ ಆಚಾರ್ಯರ ಜನ್ಮಸ್ಥಳವೆಂದು ಒಪ್ಪಿಯೂ ಇರುತ್ತಾರೆ.

ಆಚಾರ್ಯರ ಕಾಲ- ಶಂಕರವಿಜಯಗಳ ಆಧಾರದಮೇಲೆ ಆಚಾರ್ಯರ ಕಾಲವನ್ನು ನಿರ್ಣಯಿಸುವುದು ಸುಲಭವಲ್ಲ. ಒಂದೊಂದು ಶಂಕರವಿಜಯಗ್ರಂಥಗಳಲ್ಲೂ ಆಚಾರ್ಯರ ಕಾಲವನ್ನು ಬೇರೆಬೇರೆಯಾಗಿ ಹೇಳಿರುವುದು ಕಂಡುಬರುತ್ತದೆ. ಕ್ರಿ.ಪೂ. 5 ನೆಯ ಶತಮಾನದಿಂದ ಕ್ರಿ.ಶ. 8 ನೆಯ ಶತಮಾನದವರೆಗೂ ಕಾಲವನ್ನು ಹೇಳಿರುತ್ತಾರೆ. ಉದಾ- ಕಾಮಕೋಟಿಪೀಠದಸಂಪ್ರದಾಯದಂತೆ ಆಚಾರ್ಯರ ಕಾಲವು ಕ್ರಿ.ಪೂ. 5 ನೆಯ ಶತಮಾನ. 'ತಿಷ್ಯೇ ಪ್ರಯಾತ್ಯನಲಶೇವಧಿಬಾಣನೇತ್ರೇ ಯೋ ನನ್ದನೇ ದಿನಮಣಾವುದಗಧ್ವಭಾಜಿ' ಕಲಿಯುಗದ ಪ್ರಾರಂಭದಿಂದ 2593 ನೆಯ ನನ್ದನ ನಾಮ ಸಂವತ್ಸರ ಉತ್ತರಾಯಣ ವೈಶಾಖ ಶುದ್ಧ ಪಂಚಮಿ (ಕ್ರಿ.ಪೂ. 509). ಇನ್ನು ಕ್ರಿ.ಶ. 8 ನೆಯ ಶತಮಾನವನ್ನು ಆಚಾರ್ಯರ ಕಾಲವೆಂದು ಹೇಳುವವರಿಗೆ ಬಹುಮತವಿರುತ್ತದೆ.

ಶ್ರೀಶಾರದಾನಿಕೇತನ ಅಸೋಸಿಯೇಷನ್ (ರಿ)

ಆಚಾರ್ಯರಿಗೆ 3 ನೆಯ ವರ್ಷದಲ್ಲಿ ಚೂಡಾಕರ್ಮ, 5 ನೆಯ ವರ್ಷದಲ್ಲಿ ಉಪನಯನ, 8 ನೆಯ ವರ್ಷಕ್ಕೆ ನಾಲ್ಕೂ ವೇದಗಳ ಪೂರ್ಣಾಧ್ಯಯನ, 12 ನೆಯ ವರ್ಷಕ್ಕೆ ಋಗ್ಯಜುಃಸಾಮಾಥರ್ವಗಳೆಂಬ ನಾಲ್ಕು ವೇದಗಳು, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛನ್ದಸ್ಸು ಮತ್ತು ಜ್ಯೋತಿಷ ಎಂಬ ಆರು ವೇದಾಂಗಗಳು, ಪುರಾಣ, ನ್ಯಾಯ,

ಮೀಮಾಂಸಾ ಮತ್ತು ಧರ್ಮಶಾಸ್ತ್ರ ಎಂಬ ನಾಲ್ಕು ಶಾಸ್ತ್ರಗಳಿಂದ ಕೂಡಿರುವ 14 ವಿದ್ಯಾಸ್ಥಾನಗಳಲ್ಲಿ ಪರಿಪೂರ್ಣಪಾಂಡಿತ್ಯ. ನರ್ಮದಾನದೀತೀರದಲ್ಲಿ ಶ್ರೀಗೋವಿನ್ದಭಗವತ್ಪಾದರಿಂದ ಕ್ರಮಸಂನ್ಯಾಸಸ್ವೀಕಾರ. ನಂತರ 16 ನೆಯ ವರ್ಷದಲ್ಲಿ ಹತ್ತು ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬಾದರಾಯಣಾಚಾರ್ಯರ ವೇದಾನ್ತಸೂತ್ರಗಳು ಎಂಬ ಪ್ರಸ್ಥಾನತ್ರಯೀ ಗ್ರಂಥಗಳಿಗೆ ಪ್ರಸನ್ನಗಂಭೀರವಾದ ಭಾಷ್ಯರಚನೆ. ನಂತರ 32 ನೆಯ ವರ್ಷದವರೆಗೂ ನಿರನ್ತರವಾಗಿ ಅಖಂಡಭಾರತದ ಉದ್ದಗಲಕ್ಕೂ ಕಾಲ್ನಡಿಗೆಯಲ್ಲಿ ಸಂಚರಿಸಿ ತಾವು ರಚಿಸಿದ ಭಾಷ್ಯಗಳ ಮೂಲಕ ಅನರ್ಘ್ಯವಾದ ಉಪನಿಷತ್ಸಿದ್ಧಾನ್ತದ ಪ್ರಚಾರವನ್ನು ಮಾಡಿ, ಭಾರತೀಯಸಂಸ್ಕೃತಿಯ ಮಕರಂದವನ್ನು ಜಗತ್ತಿಗೆ ಪ್ರಸರಿಸಿ ಅನ್ತರ್ಧಾನರಾದ ಪ್ರಾತಃಸ್ಮರಣೀಯ ಆಚಾರ್ಯರೇ ಶ್ರೀಶಂಕರರು. ಶಂಕರವಿಜಯಗಳಿಂದ ಈ ಅಂಶಗಳು ನಮಗೆ ತಿಳಿದುಬರುತ್ತವೆ.

ಆಚಾರ್ಯರ ಕೃತಿಗಳು- ಈಶ, ಕೇನ, ಕಠ, ಮುಂಡಕ, ಪ್ರಶ್ನ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾನ್ದೋಗ್ಯ ಮತ್ತು ಬೃಹದಾರಣ್ಯಕ ಎಂಬ ಹತ್ತು ಉಪನಿಷತ್ತುಗಳು, ಭಗವದ್ಗೀತೆ ಹಾಗೂ ಬ್ರಹ್ಮಸೂತ್ರಗಳು ಇವುಗಳಿಗೆ ಭಾಷ್ಯಗಳು. ಈ ಬ್ರಹ್ಮಸೂತ್ರಗ್ರನ್ಥವು ವೇದಾನ್ತಸೂತ್ರಗಳು, ಶಾರೀರಕಮೀಮಾಂಸಾ, ಚತುರ್ಲಕ್ಷಣೀ, ಉತ್ತರಮೀಮಾಂಸಾ ಎಂಬ ಹೆಸರುಗಳಿಂದಲೂ ಪ್ರಸಿದ್ಧವಾಗಿದೆ. ಹದಿನಾರು ವರ್ಷದ ಬಾಲಕನಿಂದ ಇಂತಹ ಅದ್ಭುತವಾದ ಭಾಷ್ಯರಚನೆಯಾಗಿರುವುದನ್ನು ಕಂಡು ಜಗತ್ತಿನ ಎಲ್ಲ ವಿದ್ವಾಂಸರೂ ಮೂಕವಿಸ್ಮಿತರಾಗಿ 'ಇದೊಂದು ಮಾನವ ಮಸ್ತಿಷ್ಕದ ಪೂರ್ಣವಿಕಾಸ' ಎಂಬುದಾಗಿ ಉದ್ಗರಿಸಿರುತ್ತಾರೆ. ಇಷ್ಟೇ ಅಲ್ಲದೆ ಕೆಲವು ಪ್ರಕರಣಗ್ರಂಥಗಳೂ ಇವರಿಂದ ರಚಿತವಾಗಿವೆ. ಆಚಾರ್ಯರಿಂದ ರಚಿತವಾದ ವಿವಿಧ ದೇವದೇವಿಯರನ್ನು ಕುರಿತಾದ ಸ್ತೋತ್ರಗಳಂತೂ ಚೇತೋಹಾರಿಯಾಗಿ ಜಗತ್ತಿನ ಎಲ್ಲ ಆಸ್ತಿಕರ ನಾಲಿಗೆಯ ಮೇಲೆ ದಿನನಿತ್ಯವೂ ನಲಿದಾಡುತ್ತಿವೆ. ಆಚಾರ್ಯ ಶಂಕರರ ವಿದ್ವತ್ತು, ಶಾಸ್ತ್ರಪಾಂಡಿತ್ಯ, ಭಾಷಾಪ್ರೌಢಿಮೆ, ವಾಕ್ಯರಚನಾಕೌಶಲ, ವಾದವೈಖರಿ ಇವುಗಳ ಪರಿಚಯ ನಮಗಾಗಬೇಕೆನ್ನುವುದಾದರೆ, ನಾವು ಆಚಾರ್ಯರ ಬ್ರಹ್ಮಸೂತ್ರಭಾಷ್ಯ ಹಾಗೂ ಬೃಹದಾರಣ್ಯಕಭಾಷ್ಯಗಳನ್ನು ಅಧ್ಯಯನಮಾಡಬೇಕು. ಶಾಂಕರಭಾಷ್ಯದಂತೆ ಪ್ರಸನ್ನವೂ ಅಷ್ಟೇ ಗಂಭೀರವೂ ಗಭೀರವೂ ಆಗಿರುವ ಮತ್ತೊಂದು ಭಾಷ್ಯವು ಜಗತ್ತಿನಲ್ಲಿ ಇರುವುದು ಕಂಡುಬರುವುದಿಲ್ಲ ಎನ್ನುವುದು ವಿದ್ವಾಂಸರ ಅಭಿಪ್ರಾಯವಾಗಿದೆ. ಶ್ರೀಶಂಕರರ ವಾದಮಂಡನಸಾಮರ್ಥ್ಯದ ವಿಚಾರದಲ್ಲಿ ನಮ್ಮ ದೇಶದ ಸುಪ್ರಸಿದ್ಧ ನ್ಯಾಯವಾದಿಗಳಾಗಿದ್ದ ಶ್ರೀ ನಾನಿ ಪಾಲ್ಕಿವಾಲ ಹಾಗೂ ಶ್ರೀ ರಾಮಾಜೋಯಿಸ್ ಇವರ ಅಭಿಪ್ರಾಯಗಳನ್ನು ತಿಳಿಸಿ ವಿರಮಿಸುತ್ತೇನೆ.

ಶ್ರೀ ನಾನಿ ಪಾಲ್ಕಿವಾಲ- ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳು ವಾದವನ್ನು ಮಂಡಿಸುವುದಕ್ಕೆ ಮುನ್ನ ಶ್ರೀಶಂಕರರ ಭಾಷ್ಯವನ್ನೊಮ್ಮೆ ಅವಲೋಕಿಸುವುದು ಒಳ್ಳೆಯದು.

(ರಿ)
ಬೆಂಗಳೂರು–560 019

ಶ್ರೀ ರಾಮಾಜೋಯಿಸ್- ನಮ್ಮ ನ್ಯಾಯಶಾಸ್ತ್ರದ ವಿಶ್ವವಿದ್ಯಾಲಯಗಳಲ್ಲಿ ಆಚಾರ್ಯ ಶಂಕರರ ಭಾಷ್ಯಗಳನ್ನು ಪಠ್ಯವಿಷಯಗಳಲ್ಲಿ ಒಂದಾಗಿ ಸೇರಿಸಬೇಕು.

ಸಾಕಾರವಾನೇವ ಹಿ ವೇದಧರ್ಮಃ ಸಾರ್ಥವತೀ ತೇನ ಸರಸ್ವತೀ ಚ ।
ಸೌಮ್ಯಃ ಸ ಶಂಕರಧೃತಾವತಾರೋ ಲೋಕೇ ಚಕಾಸ್ತಿ ಕಿಲ ಶಂಕರಾರ್ಯಃ ॥





# ಭಾರತದ ನ್ಯಾಯಾಂಗವ್ಯವಸ್ಥೆಯ ಸ್ಥೂಲಪರಿಚಯ

**ಸ.ರ. ಮಾಣಿಕ್ಯ**
ನಿವೃತ್ತ ಜಿಲ್ಲಾನ್ಯಾಯಾಧೀಶರು.

ಶ್ರೀಯುತ ಸ.ರ. ಮಾಣಿಕ್ಯರವರು ಮೈಸೂರಿನ ದಿ. ಶ್ರೀ. ಎಸ್. ವಿ. ರಘೋತ್ತಮರಾವ್ ಮತ್ತು ಶ್ರೀಮತಿ ಅಂಬಾರವರ ಮೂರನೆಯ ಮಗನಾಗಿ ದಿನಾಂಕ 21.10.1961 ರಂದು ಜನಿಸಿ, ಮೈಸೂರು ನಗರದಲ್ಲಿ ಪ್ರಾಥಮಿಕ ಮತ್ತು ಪ್ರೌಢ ವಿದ್ಯಾಭ್ಯಾಸವನ್ನು ಮುಗಿಸಿ, ಮೈಸೂರಿನ ಯುವರಾಜ ಕಾಲೇಜಿನಲ್ಲಿ BSc ಪದವಿ ಪಡೆದು, ಶಾರದವಿಲಾಸ ಕಾನೂನು ಕಾಲೇಜಿನಲ್ಲಿ LLB ಪದವಿಯನ್ನು ಪಡೆದುಕೊಂಡಿರುತ್ತಾರೆ. ಸನ್ 1987ನೇ ಇಸವಿ ನವೆಂಬರ್ ನಲ್ಲಿ ಮೈಸೂರಿನ ಪ್ರಖ್ಯಾತ ವಕೀಲರಾದ ಶ್ರೀ ಟಿ. ವಿ. ಶ್ರೀನಿವಾಸರಾವ್ ರವರ ಬಳಿ ಕಿರಿಯ ವಕೀಲರಾಗಿ ವೃತ್ತಿ ಪ್ರಾರಂಭಿಸಿ 2003ರ ವರೆವಿಗೂ ಮೈಸೂರು ಜಿಲ್ಲಾ ನ್ಯಾಯಾಲಯದಲ್ಲಿ ವಕೀಲ ವೃತ್ತಿ ನಡೆಸಿರುತ್ತಾರೆ. 2003ನೇ ಇಸವಿ ನವೆಂಬರ್ ನಲ್ಲಿ ನ್ಯಾಯಾಧೀಶರಾಗಿ ನೇಮಕಗೊಂಡು ಬೆಳಗಾವಿ, ಸಂಕೇಶ್ವರ. ಹೊಳಲ್ಕೆರೆಗಳಲ್ಲಿ ಸಿವಿಲ್ ಜಡ್ಜ್ ಕಿರಿಯ ಶ್ರೇಣಿ ನ್ಯಾಯಾಧೀಶರಾಗಿಯೂ, 2009ರಲ್ಲಿ ಪದೋನ್ನತಿ ಹೊಂದಿ ಮುದ್ದೆಬೀಹಾಳ, ಬೆಂಗಳೂರು ಗ್ರಾಮಾಂತರ, ಗುಲ್ಬರ್ಗ ಮತ್ತು ಬೆಂಗಳೂರು ಮೆಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಹಿರಿಯಶ್ರೇಣಿ ನ್ಯಾಯಾಧಿಶರಾಗಿಯೂ ಕರ್ತವ್ಯ ನಿರ್ವಹಿಸುರುತ್ತಾರೆ. 2020 ನವೆಂಬರ್ ನಲ್ಲಿ ಜಿಲ್ಲಾ ನ್ಯಾಯಾಧೀಶರಾಗಿ ಪದೋನ್ನತಿ ಹೊಂದಿ 2021 ಆಕ್ಟೊಬರ್ ವರೆಗೂ ಬೆಂಗಳೂರು ಸಿಟಿ ಸಿವಿಲ್ ನ್ಯಾಯಾಲಯದಲ್ಲಿ 61ನೇ ಅಧಿಕ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾಗಿ ಸೇವೆಸಲ್ಲಿಸಿ 2021 ಆಕ್ಟೊಬರ್ ನಲ್ಲಿ ನಿವೃತ್ತಿ ಹೊಂದಿರುತ್ತಾರೆ. ನಿವೃತ್ತಿಯಾದ ನಂತರ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (Bangalore Metro Rail Corporation Limited) ರಲ್ಲಿ ಕಾನೂನು ಅಧಿಕಾರಿಯಾಗಿ ಸೇವೆ ಯನ್ನು ಸಲ್ಲಿಸುತ್ತಾ ಇರುತ್ತಾರೆ.

1. ಭಾರತವು ಒಂದು ಪ್ರಜಾಸತ್ತಾತ್ಮಕ ರಾಷ್ಟ್ರವಾಗಿರುತ್ತದೆ.

2. ಈ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಕಾರ್ಯಾಂಗ (Executive), ಶಾಸಕಾಂಗ (Legislative) ಮತ್ತು ನ್ಯಾಯಾಂಗ (Judiciary) ಎಂಬ ಮೂರು ಅಂಗಗಳು ಇರುತ್ತವೆ.

3. ಇವುಗಳಲ್ಲಿ ನ್ಯಾಯಾಂಗವು ಭಾರತದ ಪ್ರಜಾಸತ್ತಾತ್ಮಕತೆಯನ್ನು ಗಟ್ಟಿಗೊಳಿಸುವಲ್ಲಿ ಮತ್ತು ದೇಶದ ಸಂವಿಧಾನವನ್ನು ರಕ್ಷಿಸುವ ನಿಟ್ಟಿನಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತಾ ಬಂದಿರುತ್ತದೆ. ಇಂದಿಗೂ ಭಾರತದ ನ್ಯಾಯಾಂಗವ್ಯವಸ್ಥೆಯು ಪ್ರಜೆಗಳ ಹಕ್ಕನ್ನು ಸಂರಕ್ಷಿಸುವಲ್ಲಿ ಮತ್ತು ಅವರ ಆಸ್ತಿ, ಜೀವಗಳಿಗೆ ಹಾನಿಯಾಗದಂತೆ ನೋಡಿಕೊಳ್ಳುವ ಉನ್ನತ ಜವಾಬ್ದಾರಿಯನ್ನು ನಿರ್ವಹಿಸುತ್ತಾ ಬಂದಿರುತ್ತದೆ. ಇಂತಹ ನ್ಯಾಯಾಂಗದ ವ್ಯವಸ್ಥೆಯ ಕಿರುಪರಿಚಯವನ್ನು ಮಾಡಲು ಈ ಲೇಖನವನ್ನು ಬರೆಯುವ ಪ್ರಯತ್ನವನ್ನು ಮಾಡಿರುತ್ತೇನೆ.

4. ಈ ನ್ಯಾಯಾಂಗ ವ್ಯವಸ್ಥೆಯು ಮುಖ್ಯವಾಗಿ ಎರಡು ವಿಭಾಗಗಳಲ್ಲಿ ಎಂದರೆ ಸಿವಿಲ್ (Civil) ಮತ್ತು ಕ್ರಿಮಿನಲ್ (Criminal) ವಿಭಾಗಗಳಲ್ಲಿ ವ್ಯಾಜ್ಯ ಮತ್ತು ಮೊಕ್ಕದಮೆಗಳನ್ನು ತೀರ್ಮಾನ ಮಾಡುವ ವ್ಯಾಪ್ತಿಯನ್ನು ಹೊಂದಿರುತ್ತದೆ.

5. ಯಾವುದೇ ಸಿವಿಲ್ ವಿಭಾಗದ ಪ್ರಕರಣಗಳನ್ನು ವ್ಯಾಜ್ಯವೆಂತಲೂ ಮತ್ತು ಕ್ರಿಮಿನಲ್ ವಿಭಾಗದ ಪ್ರಕರಣಗಳನ್ನು ಮೊಕದ್ದಮೆಯಂತಲೂ ಗುರುತಿಸಿ ನಡೆಸಲಾಗುತ್ತದೆ.

6. ಸಿವಿಲ್ ವಿಭಾಗಗಳಲ್ಲಿ ಉದಾಹರಣೆಗಾಗಿ ಕೆಲವು ವ್ಯಾಜ್ಯಗಳ ವಿವರಣೆ ನೀಡುವುದಾದರೆ ಅವುಗಳು; ಆಸ್ತಿವ್ಯಾಜ್ಯ (Property Dispute), ಗ್ರಾಹಕ ಪರಿಹಾರವ್ಯಾಜ್ಯಯ (Consumer Redressal Litigation), ವಿಚ್ಛೇದನ ಪ್ರಕರಣ (Divorce Case), ಹಣಕಾಸುವ್ಯಾಜ್ಯ (Financial Dispute), ಕುಟುಂಬವ್ಯಾಜ್ಯ (Family Dispute), ಕಂದಾಯವ್ಯಾಜ್ಯ (Revenue Dispute), ಕಾರ್ಮಿಕವ್ಯಾಜ್ಯ (Labour Dispute) ಎಂಬುದಾಗಿ ವೈವಿಧ್ಯಗಳನ್ನು ಹೊಂದಿರುತ್ತದೆ.

7. ಅದೇರೀತಿ ಕ್ರಿಮಿನಲ್ ವಿಭಾಗದಲ್ಲಿ ಉದಾಹರಣೆಗಾಗಿ ಕೆಲವು ಮೊಕದ್ದಮೆಗಳ ವಿವರಣೆ ನೀಡುವುದಾದರೆ ಅವುಗಳು ಕಳ್ಳತನ (Theaft), ಕೊಲೆ (Murder), ಮಾನಹಾನಿ (Defamation), ದರೋಡೆ (Robbery), ಗುಂಪುಹೊಡೆದಾಟ (Group Clash), ವರದಕ್ಷಿಣೆಹಿಂಸೆ (Dowry Harrasment), ದೇಶದ ಕಾನೂನನ್ನು ಉಲ್ಲಂಘಿಸುವುದು ಎಂಬುದಾಗಿ ಮೊಕದ್ದಮೆಗಳನ್ನು ಹೊಂದಿರುತ್ತದೆ.

8. ಈ ನ್ಯಾಯಾಲಯಗಳು ಸಿವಿಲ್ ಪ್ರಕರಣಗಳನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ (Civil Procedure Code) ಮತ್ತು ಭಾರತೀಯ ಸಾಕ್ಷ್ಯ ಕಾಯಿದೆ (Indian Evidence Act) ಮತ್ತು ಸ್ವತ್ತು ಹಸ್ತಾಂತರಕಾಯಿದೆ (Transfer of Property Act), ಹಿಂದೂ ವಾರಸಾಕಾಯಿದೆ (Hindu Succession Act), ಹಿಂದೂ ವಿವಾಹಕಾಯಿದೆ (Hindu Marriage Act), ಜೀವನಾಂಶ ಕಾಯಿದೆ (Maintenance Act), ಕಂದಾಯಕಾಯಿದೆ (Revenue Laws), ಮತ್ತು ಪ್ರಕರಣ ದಾಖಲಾಗಿರುವ ಸಂಬಂಧಿಸಿದ ಕಾಯಿದೆಗಳನ್ನು ಪರಿಗಣಿಸಿ ತೀರ್ಮಾನಿಸಲ್ಪಡುತ್ತವೆ.

9. ಇದೇ ರೀತಿ ಕ್ರಿಮಿನಲ್ ಪ್ರಕರಣಗಳನ್ನು ಈ ಹಿಂದೆ ದಂಡ ಪ್ರಕ್ರಿಯಾ ಸಂಹಿತೆ (Criminal Procedure Code), ಭಾರತೀಯ ದಂಡಸಂಹಿತೆ (Indian Penal Code), ಭಾರತೀಯ ಸಾಕ್ಷ್ಯಕಾಯಿದೆ (Indian Evidence Act) ಮತ್ತು ಕ್ರಿಮಿನಲ್ ಪ್ರಕರಣ ದಾಖಲಾಗಿರುವ ಕಾಯಿದೆಗಳನ್ನು ಪರಿಗಣಿಸಿ ತೀರ್ಮಾನಿಸಲಾಗುತ್ತಿತ್ತು, ದಂಡ ಪ್ರಕ್ರಿಯಾಸಂಹಿತೆ ಈಗ ಭಾರತೀಯ ನಾಗರಿಕ ಸುರಕ್ಷಾಸಂಹಿತೆ (Bharatiya Nagarik Suraksha Sanhita, 2023) ಎಂಬುದಾಗಿಯೂ ಮತ್ತು ಭಾರತೀಯ ಸಾಕ್ಷ್ಯಕಾಯಿದೆಯು ಈಗ ಭಾರತೀಯ ಸಾಕ್ಷ್ಯಅಧಿನಿಯಮ (Bharatiya Sakshya Adhiniyam, 2023) ಎಂಬುದಾಗಿಯೂ ಮತ್ತು ಭಾರತೀಯ ದಂಡಸಂಹಿತೆಯು ಭಾರತೀಯ ನ್ಯಾಯಸಂಹಿತ (Bharatiya Nyaya Sanhita, 2023) ಎಂಬುದಾಗಿ ಜುಲೈ 2024 ರಿಂದ ತಿದ್ದುಪಡಿ ಮುಖಾಂತರ ಜಾರಿ ಮಾಡಲ್ಪಟ್ಟಿರುತ್ತದೆ.

10. ಉಚ್ಚನ್ಯಾಯಾಲಯ (High Court) ಮತ್ತು ಸರ್ವೋಚ್ಚನ್ಯಾಯಾಲಯ (Supreme Court) ಗಳಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳಲ್ಲದೆ ಸಂವಿಧಾನದ ರೀತ್ಯ ಪ್ರಕರಣಗಳು (Constitutional Cases) ದಾಖಲಿಸಲ್ಪಡುತ್ತವೆ. ಅವುಗಳನ್ನು ಭಾರತೀಯ ಸಂವಿಧಾನದ ರೀತ್ಯ (Indian Constitution) ತೀರ್ಮಾನಮಾಡಲಾಗುತ್ತದೆ.

11. ಉಚ್ಚನ್ಯಾಯಾಲಯ ಮತ್ತು ಸರ್ವೋಚ್ಚತ ನ್ಯಾಯಾಲಯಗಳನ್ನು ಹೊರತುಪಡಿಸಿ ಉಳಿದ ನ್ಯಾಯಾಲಯಗಳು ಯಾವುದೇ ಒಂದು ಪ್ರಕರಣವನ್ನು ಕಾನೂನಿನ ಚೌಕಟ್ಟಿನೊಳಗೆ ತೀರ್ಮಾನಿಸಬೇಕಾಗಿರುತ್ತದೆ. ಅಂದರೆ ಕಾನೂನಿಗೆ ಅನುಗುಣವಾಗಿ ಮಾತ್ರ ತೀರ್ಮಾನ ನೀಡಲು ಅಧಿಕಾರ ಹೊಂದಿರುತ್ತದೆ. ಆದರೆ ಉಚ್ಚನ್ಯಾಯಾಲಯ ಮತ್ತು ಸರ್ವೋಚ್ಚತ ನ್ಯಾಯಾಲಯವು ಸಾಂವಿಧಾನಿಕ ನ್ಯಾಯಾಲಯಗಳೆಂದು (Constitutional Courts) ಪರಿಗಣಿಸಲ್ಪಟ್ಟಿರುವುದರಿಂದ ಅವುಗಳಿಗೆ ಭಾರತೀಯ ಸಂವಿಧಾನದ ಅಡಿಯಲ್ಲಿ ಕೆಲವು ವಿಶೇಷ ಅಧಿಕಾರಗಳನ್ನು ನೀಡಿರುವುದರಿಂದ ಈ ನ್ಯಾಯಾಲಯಗಳು ಅಂತಹ ಅಧಿಕಾರವನ್ನು ಬಳಸಿ ಕೆಲವು

ವಿಶೇಷ ತೀರ್ಮಾನವನ್ನು ನೀಡಲು ಅಧಿಕಾರ ಹೊಂದಿರುತ್ತವೆ. (ಉದಾ: ಬೊಮ್ಮಾಯಿ ಪ್ರಕರಣ, ತಮಿಳುನಾಡು ರಾಜ್ಯಪಾಲರ ಪ್ರಕರಣ ಸಂವಿಧಾನ ಪರಿಚ್ಛೇದ 370 ಪ್ರಕರಣ.)

12. ಭಾರತದ ಸಂವಿಧಾನವು ಸರ್ವೋಚ್ಚ ನ್ಯಾಯಾಲಕ್ಕೆ ಪರಿಚ್ಛೇಧ 141ರ (Article 141) ಅಡಿಯಲ್ಲಿ ವಿಶೇಷ ಅಧಿಕಾರ ನೀಡಿದ್ದು, ಸರ್ವೋಚ್ಚ ನ್ಯಾಯಾಲವು ಯಾವುದೇ ಒಂದು ಕಾನೂನಿನ ಅಂಶವನ್ನು ತೀರ್ಮಾನಮಾಡಿ ತೀರ್ಪು ನೀಡಿದಾಗ ಅಂತಹ ತೀರ್ಪುಗಳನ್ನು ಎಲ್ಲಾ ನ್ಯಾಯಾಲಗಳು ಪರಿಪಾಲಿಸುವುದು ಕಡ್ಡಾಯ ಇರುತ್ತದೆ. (It is binding on all Courts)

13. ಹೀಗೆ ನ್ಯಾಯದಾನವನ್ನು ಮಾಡಲು ಸಿವಿಲ್ ಮತ್ತು ಕ್ರಿಮಿನಲ್ ವಿಭಾಗಳಲ್ಲಿ ನ್ಯಾಯಾಧೀಶರ ವಿವಿಧಶ್ರೇಣಿಗಳು (Grade) ಇರುತ್ತವೆ. ಸಿವಿಲ್ ವಿಭಾಗದಲ್ಲಿ ಮೊದಲಿಗೆ ಸಿವಿಲ್ ಜಡ್ಜ್ (ಕಿ. ಶ್ರೇಣಿ) (Civil Judge (Jr. Division)) ನಂತರ ಸಿವಿಲ್ ಜಡ್ಜ್ (ಹಿ. ಶ್ರೇಣಿ) (Civil Judge (Sr. Division)) ಜಿಲ್ಲಾನ್ಯಾಯಾಲಯ (District Judge), ಉಚ್ಚನ್ಯಾಯಾಲಯ, (High Court Judge) ಸರ್ವೋಚ್ಚನ್ಯಾಯಾಲಯ (Supreme Court Judge) ಎಂಬುದಾಗಿ ವಿವಿಧ ಶ್ರೇಣಿಗಳು ಇರುತ್ತವೆ.

14. ಕ್ರಿಮಿನಲ್ ವಿಭಾಗದಲ್ಲಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ (Judicial Magistrate of First Class), ಮುಖ್ಯ ನ್ಯಾಯಿಕ ದಂಡಾಧಿಕಾರಿ (Chief judicial Magistrate), ಜಿಲ್ಲಾ ಮತ್ತು ಸತ್ರನ್ಯಾಯಾಲಯ (District & Sessions Judge) ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯ (High Court and Supreme Court Judge) ಎಂಬುದಾಗಿ ವಿವಿಧ ಶ್ರೇಣಿಗಳು ಇರುತ್ತದೆ.

15. ಈ ನ್ಯಾಯಾಧೀಶರಲ್ಲಿ ಸಿವಿಲ್‌ಜಡ್ಜ್ ಕಿರಿಯ ಶ್ರೇಣಿ (Civil Judge Jr. Division) ಅಥವಾ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ (Judicial Magistrate First Class) ಈ ನ್ಯಾಯಾಧೀಶರನ್ನು ಉಚ್ಚನ್ಯಾಯಾಲಯವು ನಿಗದಿತ ಲಿಖಿತಪರೀಕ್ಷೆ ನಡೆಸಿ ಅದರಲ್ಲಿ ಉತ್ತೀರ್ಣರಾದ ವಕೀಲರುಗಳನ್ನು ಉಚ್ಚನ್ಯಾಯಾಲಯದ ನ್ಯಾಯಾಧೀಶರಿರುವ ಸಮಿತಿಯ ಮುಖಾಂತರ ಸಂದರ್ಶನ ನಡೆಸಿ ಆಯ್ಕೆಮಾಡಿ ರಾಜ್ಯಪಾಲರ ಅನುಮತಿಯ ಮೇರೆಗೆ ನ್ಯಾಯಾಧೀಶರುಗಳನ್ನಾಗಿ ನೇಮಕ ಮಾಡಲಾಗುತ್ತದೆ. ಯಾವುದೇ ನ್ಯಾಯಾಧೀಶರನ್ನು ನೇಮಕ ಮಾಡಲು ಮತ್ತು ಅವರನ್ನು ಸೇವೆಯಿಂದ ಮುಕ್ತಿಗೊಳಿಸಲು ರಾಜ್ಯಪಾಲರ ಅಂಕಿತ ಆದ ನಂತರ ಗೆಜೆಟ್‌ನಲ್ಲಿ ಪ್ರಕಟಿಸುವುದು ಅವಶ್ಯಕವಿರುತ್ತದೆ.

16. ಹೀಗೆ ನೇಮಕವಾದ ನ್ಯಾಯಾಧೀಶರುಗಳನ್ನು ಎರಡು ವರ್ಷಗಳ ಕಾಲ ತರಬೇತಿ (Probationary period) ಅವಧಿ ಎಂಬುದಾಗಿ ಪರಿಗಣಿಸಿ ನಂತರ ಅವರ ಕಾರ್ಯಕ್ಷಮತೆಯ ಆಧಾರದ ಮೇಲೆ ಖಾಯಂ ನ್ಯಾಯಾಧೀಶರನ್ನಾಗಿ ನೇಮಕ ಮಾಡಲಾಗುತ್ತದೆ.

17. ಹೀಗೆ ನೇಮಕವಾದ ನ್ಯಾಯಾಧೀಶರುಗಳು ಕಾಲಕಾಲಕ್ಕೆ ಅವರು ಕರ್ತವ್ಯ ನಿರ್ವಹಿಸುತ್ತಿರುವ ರೀತಿ ನೀತಿ, ನಡತೆಗಳನ್ನು ಪರಿಶೀಲಿಸಿ ಜಿಲ್ಲಾ ಮತ್ತು ಆಡಳಿತ ನ್ಯಾಯಾಧೀಶರು ಸಲ್ಲಿಸುವ ವರದಿಯನ್ನು ಪರಿಗಣಿಸಿ, ನಂತರ ಉಚ್ಚನ್ಯಾಯಾಲಯವು ನಿರ್ಣಯಿಸುವ ರೀತ್ಯ ಅವರಿಗೆ ಸಿವಿಲ್ ಜಡ್ಜ್ ಹಿರಿಯ ಶ್ರೇಣಿ ನ್ಯಾಯಾಧೀಶರಾಗಿಯೂ ಮತ್ತು ಜಿಲ್ಲಾ ನ್ಯಾಯಾಧೀಶರನ್ನಾಗಿಯೂ ಪದೋನ್ನತಿ (Promotion) ನೀಡಿ ನೇಮಕ ಮಾಡಲಾಗುತ್ತದೆ.

18. ಜಿಲ್ಲಾ ನ್ಯಾಯಾಲಯದ ಹುದ್ದೆಗಳಲ್ಲಿ ಶೆ. 50% ರಷ್ಟು ಪದೋನ್ನತಿಯ (Promotion) ಮುಖಾಂತರ ಮತ್ತು ಉಳಿದ ಶೇ. 50% ಹುದ್ದೆಗಳನ್ನು ನೇರನೇಮಕಾತಿ (Direct Recruitment) ಅಂದರೆ 7 ವರ್ಷ ವಕೀಲಿ ವೃತ್ತಿ ನಡೆಸುವ ವಕೀಲರಿಗೆ ಒಂದು ನಿಗದಿತ ಲಿಖಿತಪರೀಕ್ಷೆ ನಡೆಸಿ, ಉತ್ತೀರ್ಣರಾದ ಅಭ್ಯರ್ಥಿಗಳನ್ನು ಉಚ್ಚನ್ಯಾಯಾಲಯದ ನ್ಯಾಯಾಧೀಶರನ್ನೊಳಗೊಂಡ ಸಮಿತಿಯ (Committee Consisting of High Court Judges) ಮುಖಾಂತರ ಸಂದರ್ಶನ ಮಾಡಿ ಆಯ್ಕೆ ಮಾಡಲಾಗುತ್ತದೆ.

19. ಉಚ್ಚನ್ಯಾಯಾಲಯದ ನ್ಯಾಯಾಧೀಶರ ಹುದ್ದೆಗಳಲ್ಲಿ ಶೆ. 50% ರಷ್ಟು ಜಿಲ್ಲಾ ಮತ್ತು ಸತ್ರನ್ಯಾಯಾಧೀಶರಿಗೆ (District & Session Judge) ಪದೋನ್ನತಿ (Promotion) ನೀಡುವ ಮುಖಾಂತರ ಮತ್ತು ಉಳಿದ ಶೆ. 50% ಹುದ್ದೆಗಳನ್ನು ಉಚ್ಚನ್ಯಾಯಾಲಯದಲ್ಲಿ ವಕೀಲಿ ವೃತ್ತಿ ನಡೆಸುವ ವಕೀಲರುಗಳಿಂದ ಆಯ್ಕೆ ಮಾಡಿ ಸರ್ವೋಚ್ಚನ್ಯಾಯಾಲಯದಲ್ಲಿ ಇರುವ

ಕೊಲಿಜಿಯಂ (Collegium) ಸಮಿತಿಗೆ ಕಳುಹಿಸಿದ ನಂತರ, ಸದರಿ ಸಮಿತಿಯು ಪರಿಶೀಲನೆ ಮಾಡಿ ನೇಮಕಾತಿಗೆ ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುತ್ತದೆ. ಕೇಂದ್ರ ಸರ್ಕಾರವು ತನ್ನದೇ ಆದ ಆಂತರಿಕ ಪರಿಶೀಲನೆ (Internal Verification) ಮಾಡಿ ಒಪ್ಪಿಗೆಯನ್ನು ಸೂಚಿಸಿದ ನಂತರ ನೇಮಕಾತಿ ಆದೇಶವನ್ನು ಹೊರಡಿಸಲಾಗುತ್ತದೆ.

20. ನ್ಯಾಯದಾನವು ಸುಸೂತ್ರವಾಗಿ ನಡೆಯಲು ಪ್ರತಿಯೊಂದು ಜಿಲ್ಲೆಗೂ ಒಬ್ಬರು ಪ್ರಧಾನ ಜಿಲ್ಲಾ ನ್ಯಾಯಾಧೀಶರು (Prl. District & Session Judge) ಇರುತ್ತಾರೆ. ಅವರು ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುವ ಎಲ್ಲಾ ನ್ಯಾಯಾಧೀಶರ ಮತ್ತು ಜಿಲ್ಲೆಯ ನ್ಯಾಯಾಲಯಗಳ ಸಿಬ್ಬಂದಿಗಳ ಉಸ್ತುವಾರಿಯನ್ನು ನಡೆಸುತ್ತಾರೆ. ಅಲ್ಲದೆ ನ್ಯಾಯಾಲಯಗಳಿಗೆ ಬೇಕಾಗುವ ಮೂಲಸೌಕರ್ಯ, ನ್ಯಾಯಾಲಯದ ಕಟ್ಟಡಗಳನ್ನು ನಿರ್ಮಿಸಲು ಬೇಕಾಗುವ ನಿರ್ವಹಣೆಯನ್ನು ನಿರ್ವಹಿಸುತ್ತಾರೆ. ಅಲ್ಲದೆ ಪ್ರತಿಯೊಂದು ಜಿಲ್ಲೆಗೂ ಒಬ್ಬ ಉಚ್ಚನ್ಯಾಯಾಲಯದ ನ್ಯಾಯಾಧೀಶರು (One High Court Judge) ಆಡಳಿತಾತ್ಮಕ ನ್ಯಾಯಾಧೀಶರಾಗಿರುತ್ತಾರೆ (Administrative Judge).

21. ಉಚ್ಚನ್ಯಾಯಾಲಯ ಮತ್ತು ಸರ್ವೋಚ್ಚನ್ಯಾಯಾಲಯದಲ್ಲಿ ಕೆಲವು ವಿಶೇಷ ಮೇಲ್ಮನವಿಗಳನ್ನು ತೀರ್ಮಾನಮಾಡಲು ವಿಭಾಗೀಯ ಪೀಠಗಳಿದ್ದು, ವಿಚಾರಣೆ ಮಾಡಿ ಸೂಕ್ತ ತೀರ್ಪನ್ನು ನೀಡಲು ಅವಕಾಶವಿರುತ್ತದೆ.

22. ಕೆಲವೊಂದು ಸಾಂವಿಧಾನಿಕ ಅಂಶಗಳನ್ನು ಸರ್ವೋಚ್ಚನ್ಯಾಯಾಲಯದಲ್ಲಿ ತೀರ್ಮಾನ ಮಾಡುವ ಸಂದರ್ಭಗಳು ಎದುರಾದಾಗ ಮುಖ್ಯ ನ್ಯಾಯಾಧೀಶರು ಸಂವಿಧಾನಿಕ ಪೀಠವನ್ನು (Constitutional Bench) ರಚಿಸುತ್ತಾರೆ. ಇಂತಹ ಪೀಠಗಳಲ್ಲಿ ಬಹುಮತದ ಆಧಾರದ (Majority Basis) ಮೇಲೆ ತೀರ್ಪುಗಳು ಬಂದು ಅವುಗಳು ಕಾನೂನಾಗಿ ಹೊರಹೊಮ್ಮುತ್ತವೆ. ಭಾರತದ ನ್ಯಾಯಾಂಗ ವ್ಯವಸ್ಥೆಯಲ್ಲಿ 5, 6, 9, 11 ನ್ಯಾಯಾಧೀಶರಿರುವ ಸಾಂವಿಧಾನಿಕ ಪೀಠವನ್ನು ರಚಿಸಿದ ನಿದರ್ಶನಗಳು ಇರುತ್ತವೆ.

23. ಜಿಲ್ಲಾ ನ್ಯಾಯಾಧೀಶರ ಹಂತದವರೆಗೆ ಪ್ರತಿಯೊಬ್ಬ ನ್ಯಾಯಾಧೀಶರೂ ಪ್ರತಿತಿಂಗಳೂ ಇಂತಿಷ್ಟು ಪ್ರಕರಣಗಳನ್ನು ತೀರ್ಮಾನಿಸಬೇಕೆಂಬ ನಿಯಮವಿರುತ್ತದೆ (Quota). ಪ್ರತಿ ತಿಂಗಳು 12 ಅಂಕಗಳನ್ನು ತಲುಪಬೇಕೆಂಬ ನಿಯಮವಿದೆ. ನ್ಯಾಯಾಧೀಶರು ಇದನ್ನು ಪಾಲಿಸುವುದು ಅವಶ್ಯಕ. ಉಚ್ಚನ್ಯಾಯಾಲಯವು ಈ ಅಂಶವನ್ನು ನ್ಯಾಯಾಧೀಶರಿಗೆ ಪದೋನ್ನತಿಯನ್ನು ನೀಡುವಾಗ ಪರಿಗಣಿಸುತ್ತದೆ. ಹೀಗೆ ನಿಗದಿತ ಅಂಕ ತಲುಪದೆ ಇರುವ ನ್ಯಾಯಾಧೀಶರಿಂದ ಆಡಳಿತಾತ್ಮಕ ನ್ಯಾಯಾಧೀಶರು ವಿವರಣೆ ಪಡೆದ ನಿದರ್ಶನಗಳು ಇರುತ್ತವೆ. ಪ್ರತಿಯೊಬ್ಬ ನ್ಯಾಯಾಧೀಶರ ಕಾರ್ಯಕ್ಷಮತೆ (Effieciency), ನಡತೆ (Conduct), ಮತ್ತು ಪ್ರಾಮಾಣಿಕತೆ (Integrity), ಇವುಗಳನ್ನು ಸ್ವತಂತ್ರವಾಗಿ ಪರಿಶೀಲನೆಮಾಡಲು ಉಚ್ಚನ್ಯಾಯಾಲಯದಲ್ಲಿ ಜಾಗೃತ ವಿಲೇಖನಾಧಿಕಾರಿ (Registrar Vigilence) ಇರುತ್ತಾರೆ. ಯಾವುದೇ ನ್ಯಾಯಾಧೀಶರ ಕಾರ್ಯಕ್ಷಮತೆಯಲ್ಲಿ, ನಡತೆಯಲ್ಲಿ ಮತ್ತು ಪ್ರಾಮಾಣಿಕತೆಯ ಬಗ್ಗೆ ಗುರುತರ ಆಪಾದನೆ ಬಂದಾಗ ವಿಚಾರಣೆ ನಡೆಸಿ ವರದಿ ಸಲ್ಲಿಸುತ್ತಾರೆ. ಆಪಾದನೆ ರುಜುವಾತಾದಲ್ಲಿ (If the allegation is proved) ಉಚ್ಚನ್ಯಾಯಾಲಯವು ಕ್ರಮ ಕೈಗೊಂಡು ಸೇವೆಯಿಂದ ಬಿಡುಗಡೆ ಮಾಡಬಹುದು.

24. ನ್ಯಾಯದಾನದ ವ್ಯವಸ್ಥೆ ಸುಗಮವಾಗಿ ನಡೆಯಲು ಉಚ್ಚನ್ಯಾಯಾಲಯದಲ್ಲಿ ಮಹಾವಿಲೇಖನ ಅಧಿಕಾರಿ (Registrar General), ಜಾಗೃತ ವಿಲೇಖನ ಅಧಿಕಾರಿ (Registrar Vigilence), ನ್ಯಾಯಾಂಗ ವಿಲೇಖನ ಅಧಿಕಾರಿ (Registrar Judiciary), ಆಡಳಿತಾತ್ಮಕ ವಿಲೇಖನ ಅಧಿಕಾರಿ (Registrar Administration), ಶಿಷ್ಟಾಚಾರ ವಿಲೇಖನ ಅಧಿಕಾರಿ (Registrar Protocol) ಮತ್ತು ನೇಮಕಾತಿ ವಿಲೇಖನ ಅಧಿಕಾರಿ (Registrar Recruitment) ಎಂಬ ಅಧಿಕಾರಿಗಳು ಉಚ್ಚನ್ಯಾಯಾಲಯದಲ್ಲಿ ಕಾರ್ಯನಿರ್ವಹಿಸುತ್ತಾರೆ.

25. ಭಾರತ ನ್ಯಾಯಾಂಗವು ನಾಗರೀಕ ಹಕ್ಕನ್ನು ಸಂರಕ್ಷಿಸುವಲ್ಲಿ ಹೇಗೆ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂಬುದಕ್ಕೆ ಒಂದು ಪ್ರಸಂಗವನ್ನು ಉಲ್ಲೇಖಿಸುವುದು ಸಮಂಜಸವೆಂಬುದು ನನ್ನ ಅಭಿಪ್ರಾಯವಾಗಿದೆ.

26. ಒಬ್ಬ ಮಂಡಲ ಪಂಚಾಯಿತಿ ಸದಸ್ಯರು ಒಬ್ಬ ವ್ಯಕ್ತಿಯನ್ನು ಕೊಲೆ ಮಾಡಿದ್ದು ಪೋಲಿಸರು ಯಾವುದೇ ಕ್ರಮ ಕೈಗೊಳ್ಳದೆ ಇರುವಾಗ ಕೊಲೆಯಾದ ವ್ಯಕ್ತಿಯ ಪತ್ನಿ ಒಂದು ಅಂಚೆ ಕಾರ್ಡಿನಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಪತ್ರ ಬರೆದಾಗ, ಆ ಪತ್ರವನ್ನೆ

ರಿಟ್ (Writ) ಆಗಿ ಪರಿಗಣಿಸಿ ನೋಂದಾಯಿಸಿಕೊಂಡು ಆದೇಶ (Order) ಹೊರಡಿಸಿದ್ದು, ನಂತರ ಆ ವ್ಯಕ್ತಿಯನ್ನು ಪೊಲೀಸರು ದಸ್ತಗಿರಿ (Arrest) ಮಾಡಿದ್ದು, ಭಾರತದ ನ್ಯಾಯಾಲಯವು ಜನರ ಹಕ್ಕನ್ನು ಹೇಗೆ ರಕ್ಷಿಸುತ್ತದೆ ಎಂಬುದಕ್ಕೆ ಸಾಕ್ಷಿಯಾಗಿರುತ್ತದೆ.

**27**. ಭಾರತದ ನ್ಯಾಯಾಂಗವು ಪ್ರತಿಯೊಬ್ಬ ನಾಗರೀಕರಿಗೂ ಕಾನೂನಿನ ಜ್ಞಾನವು ಇರಬೇಕೆಂಬ ಸದುದ್ದೇಶದಿಂದ ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರವನ್ನು (National Legal Services Authority), ರಾಜ್ಯಮಟ್ಟದಲ್ಲಿ ರಾಜ್ಯ ಕಾನೂನು ಸೇವಾ ಪ್ರಾಧಿಕಾರವನ್ನು (State Legal Services Authority), ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವನ್ನು (District Legal Services Authority), ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಕಾನೂನು ಸೇವಾಸಮಿತಿಯನ್ನು ನಿಯೋಜಿಸಿರುತ್ತದೆ (Taluk Legal Services Committee). ಈ ಸಂಸ್ಥೆಗಳು ಕಾನೂನಿನ ಅರಿವನ್ನು ನೀಡುವುದಲ್ಲದೆ, ಅಶಕ್ತರಿಗೆ, ಮಹಿಳೆಯರಿಗೆ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದ ವ್ಯಕ್ತಿಗಳಿಗೆ ಕಾನೂನಿನ ನೆರವನ್ನು (Letgl Aid) ನೀಡುತ್ತಾ ಬಂದಿರುತ್ತದೆ. ರಾಜ್ಯ, ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಕಾನೂನಿನ ಬಗ್ಗೆ ಕಾರ್ಯಕ್ರಮಗಳನ್ನು ಆಯೋಜಿಸಿ ಅವುಗಳ ಬಗ್ಗೆ ಮಾಹಿತಿ ನೀಡುತ್ತ ಬಂದಿರುತ್ತದೆ. ವಿಶ್ವದ ಯಾವುದೇ ಭಾಗದಲ್ಲಿ ಇಂತಹ ಸಂಸ್ಥೆ ಇಲ್ಲದಿರುವುದು ಭಾರತದ ನ್ಯಾಯಾಂಗದ ಒಂದು ಹೆಗ್ಗಳಿಕೆಯಾಗಿರುತ್ತದೆ.

**28**. ಶಾಸಕಾಂಗ ಮತ್ತು ಕಾರ್ಯಾಂಗಗಳು ಸಂವಿಧಾನದ ಆಶೋತ್ತರಗಳಿಗೆ ವಿರುದ್ಧವಾಗಿ ನಡೆದುಕೊಂಡಲ್ಲಿ ನ್ಯಾಯಾಂಗವು ಕ್ರಮ ಕೈಗೊಂಡು ಅವುಗಳನ್ನು ಸರಿಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಇಂತಹ ನಿಟ್ಟಿನಲ್ಲಿ ಸ್ವತಂತ್ರವಾಗಿ ಮತ್ತು ನಿರ್ಭೀತಿಯಿಂದ, ನಿಷ್ಪಕ್ಷಪಾತವಾಗಿ ಕಾರ್ಯವನ್ನು ನಿರ್ವಹಿಸುತ್ತಿರುವ ಭಾರತದ ನ್ಯಾಯಾಂಗದ ಸಾಧನೆ ನಿಜಕ್ಕೂ ಶ್ಲಾಘನೀಯ.

***

ಶ್ರೀಶಾರದಾನಿಕೇತನ ಅಸೋಸಿಯೇಷನ್ (ರಿ)
ಬೆಂಗಳೂರು–560 019



# संस्कृतभाषायाः महत्त्वम्

ಎಸ್.ಆರ್. ಅನಂತಮೂರ್ತಿ
ಬೆಂಗಳೂರು–560061

सम्स्कृतभाषा देवभाषा इति लोके प्रसिद्धा विराजते । अत्र नायमर्थः यत् परलोकवासिनो देवाः अस्यामेव भाषायां व्यहरन्तीति । परञ्च देवताः अस्यामेव भाषायां व्यवहरन्तीति प्रत्यक्षेण अध्यवसातुमपि न शक्यते । प्रमाणाभावात् । सर्वेऽपि प्राक्तनाः ऋषयः दर्शनकाराः भाष्यकाराः व्याख्यानकाराः कवयश्च संस्कृतभाषायामेव ऋगादिचतुर्वेदान्, संख्यादिदर्शनानि, भाष्याणि व्याख्यानानि असङ्ख्येयानि स्तोत्राण्यादीनि च रचितवन्तः । विशेषतः सर्वेषु वेदेषु प्राधान्येन विहिते यज्ञयागादिकर्मानुष्ठानावसरे तत्तद्देवताः हविर्भागस्वीकरणार्थं आह्वयितुं प्रयोज्यमानाः सर्वे मन्त्राः संस्कृतभाषायामेव वर्तन्ते । यतः ते देवाः संस्कृतभाषाभिज्ञाः सन्तः यजमानस्य इष्टार्थान् सम्यक् ज्ञात्वा प्रसादयेयुरिति । यस्यां भाषायां देवाः व्यवहरन्ति मनोभवान् प्रकटयन्ति तस्यामेव भाषायाम् प्रार्थिते सति देवाः प्रसन्ना भूत्वा अनुगृह्णन्ति इति कृत्वा सर्वोऽपि वेदवाङ्मयः संस्कृतभाषायामेव रचिताः। अतो देवानां भाषा संस्कृतं स्यादिति अनुमातुं शाक्यते । देवभाषा इत्यस्य पदस्य अन्यथापि निर्वचनं स्यात् । देवश्च असौ भाषा च देवभाषा । दीव्यते प्रकाशते इति देवः । अर्थगौरवेण, लालित्येन, व्यापकत्वेन माधुर्येन वाक्यार्थाभिव्यक्तिसामर्थ्येण च सर्वाः भाषाः अतिशेते इयं देवभाषा । एवं सम्स्कृतत्वात् इयं भाषा 'सम्स्कृतम' इत्यभिधीयते । परञ्च अस्माकं देशस्य इतिहासावलोकनेन इदमवगतं भवति यत् अस्मिन् आर्यावर्ते तदानीन्तनाः सर्वेऽपि निवासिनः अनयैव संस्कृतभाषया लौकिकं, वैदिकं दैनिकांश्च सर्वान् व्यवहारान् निर्वर्तयन्ति स्म इति ।

अथेदानीम् अस्मिन् संस्कृतवाङ्मये कानि कानि प्रकाराणि साहित्यानि अन्तर्भूतानि इति स्थूलतया एकवारं पश्यामः । तत्र तावत् अस्यां भाषायां कानि तानि यानि नान्तर्भूतानि इति सकृत् द्रष्टव्यं भवति । ऋग्यजुःसामाथर्वाः चत्वारो वेदाः श्रुतिः, आम्नायः ब्रह्म । शिक्षा कल्पः व्याकरणं निरुक्तं छन्दः ज्योतिषमिति वेदानाम् षडङ्गानि । वेदपुरुषस्य इमानि षट् अङ्गानि इत्यर्थः । शिक्षा घ्राणम्, कल्पः हस्तौ, व्याकरणं मुखम्, निरुक्तं श्रोत्रम्, छन्दः पादौ, ज्योतिषं चक्षुः इति । एवम् अङ्गसहितेन अधीतवेदः

हिरण्यगर्भब्रह्मणः सकाशात् सालोक्यसायुज्यरूपफलभाग्भूत्वा कल्पान्तं तत्र महिमानमनुभवति । पाणिनीये शिक्षाग्रन्थे इदमुक्तं भवति ।

छन्दः पादौ तु वेदस्य हस्तौ कल्पोऽथ पठ्यते
ज्योतिषामयनं चक्षुः निरुक्तं श्रोत्रमेव च ।
शिक्षा घ्राणं तु वेदस्य मुखं व्याकरणं स्मृतं
तस्मात् साङ्गमधीत्यैव ब्रह्मलोके महीयते ॥

अप्रतिहतविद्वद्विभूषणः वेदवेदान्तपारगः सकलशास्त्रकोविदः श्रीसायणाचार्यः साङ्गानां चतुर्णामपिवेदानां भाष्यं रचितवान् । एतद्भाष्यं नेत्साभिष्यत् वेदमन्त्राणाम् अर्थज्ञानं पण्डितानामपि नाभविष्यत् । यद्यपि भट्टभास्करप्रभृतीनाम् भाष्याण्यपि लभ्यानि तथापि तेषु न किमपि कार्त्स्न्येन रचितं दृश्यते । सर्वाणां वेदानां तत्तद्वेदानुसारि "प्रातिशाख्याम्'' इति विवरणरूपाः ग्रन्थाः अपि लभ्यन्ते । सर्वाण्यपि एतानि वेदानाम् बृहत्त्वं महत्त्वं च स्पष्टीकुर्वन्ति । "अनन्ता वै वेदाः" इति हि अभियुक्तोक्तिः । परञ्च अष्टादशपुराणानि, अष्टादश-उपपुराणानि, रामायण-महाभारतादयः इतिहासाः, सूत्रप्रस्थानानि च संस्कृतभाषायामेव रचितानि दृश्यन्ते । खगोलविज्ञाने, गणितविज्ञाने लभ्यमानान् प्रौढग्रन्थान् अधीत्य अधुनातन विज्ञानिनोऽपि मूकविस्मिताः सन्तः अस्माकं प्राक्तन ऋषीणाम् विचारसामर्थ्यं मेधाशक्तिं च मुक्तकण्ठेन प्रशंसन्ति ।

अथ काव्यसाहित्ये पद्य-गद्य-चम्पूप्रकाराः अपरिमिताः ग्रन्थाः अस्माकं कविभिः कवयित्रीभिश्च रचिता दृश्यन्ते । एतेषां ग्रन्थानां रचयितारः वाल्मीकि-व्यास-कालिदास-भास-बाणभट्टप्रभृतयः महाकवयः रामायण-महाभारतादीन् आ चन्द्रार्कं शोभायमानान् अन्यादृशान् ग्रन्थान् रचयित्वा अस्माकं भारतवर्षं भूदेव्याः शिरःस्थानीयं कृत्वा विराजन्तो दृश्यन्ते । वागाम्भृणी, गार्गी, मैत्रेयी, सुलभा इत्याद्याः ब्रह्मवादिन्यः अपि सम्स्कृतभाषायामेव विवदमानाः स्वकीयान् अनुभवान् निर्णयांश्च विद्वत्सभासु मण्डयन्ति स्म ।

अस्यां गीर्वाणभाषायां चाटूक्तिः, प्रहेलिका, श्लेषपद्यानि, एकाक्षरी, चमत्कारश्लोकाः, सुभाषितानि, कोशग्रन्थाः इति अनेके प्रकाराः साहित्यवाङ्मयाः कविकवयित्रीभिः रचिताः सन्ति । द्वित्राणि उदाहरणानि पश्यामः ।

श्व-युव-मघोनामतद्धिते इति व्याकरणसूत्रमधिकृत्य एका चाटूक्तिः -

कान्तं मणिं काञ्चनमेकसूत्रे ग्रथ्नासि बाले किमिदं विचित्रम् ।
विचारवान् पाणिनिरेकसूत्रे श्वानं-युवानं-मघवानमाह ॥

प्रहेलिका- पाणिनीय-अष्टाध्यायी ग्रन्थमधिकृत्य इयं प्रहेलिका पठिता।

विद्वान् कीदृग्वचो ब्रूते को रोगी कश्च नास्तिकः ।
कीदृक् चन्द्रं न पश्यन्ति सूत्रं तत्पाणिनेर्वद ॥


अर्थवदधातुरप्रत्ययः प्रातिपदिकम् इति प्रातिपदिकलक्षणसूत्रम् अष्टाध्यायी ग्रन्थे अजन्तपुल्लिङ्गप्रकरणे सूत्रितमस्ति । विद्वान् कीदृग्वचो ब्रूते= अर्थवत्, को रोगी=अधातुः, कः नस्तिकः=अप्रत्ययः कीदृक् चन्द्रं न पश्यन्ति=प्रातिपदिकम् । शुक्लपक्षे प्रतिपदि दृश्यमानं चन्द्रम् । एवं प्रतिवचनरूपेण अर्थवदधातुरप्रत्ययः प्रातिपदिकम् इतीदं सूत्रम् उक्तं भवति ।

चमत्कारश्लोकः - हिडिम्बा भीमदयिता निदाघे घर्मपीडिता ।
स्तनवस्त्रं परित्यज्य वधूः श्वशुरमिच्छति ॥

अत्र भीमस्य पत्नी हिडिम्बा वायोः स्नुषा (भीमः वायुसम्भूतः) प्रखरमध्याह्ने गृहमागत्य स्वेदनिवारणार्थं श्वशुरं वायुम् अपेक्ष्य स्वस्याः दुकूलं परित्यज्य कंपयामास स्नुषा हिडिम्बा इत्यर्थः । अतो "वधूः हिडिम्बा श्वशुरमिच्छति" इत्यत्र न कोऽपि अपार्थः अत्र द्रष्टव्यः । एवं सम्स्कृतभाषायाः महत्त्वं सङ्क्षेपतया यथामति प्रपञ्चितम् ।

भाषासु मुख्या मधुरा दिव्या गीर्वाणभारती

ಶ್ರೀಶಾರದಾನಿಕೇತನ ಅಸೋಸಿಯೇಷನ್ (ರಿ)
ಬೆಂಗಳೂರು–560 019



## ಪುಣ್ಯಸ್ಮರಣೆ-

ಸ.ರ. ಸುದರ್ಶನ- ಇದು ಕನ್ನಡಭಾಷೆಗೆ, ಸಾಹಿತ್ಯಕ್ಕೆ ಸಂಬಂಧಿಸಿದ ವಿಷಯಕ್ಕೆ ಬಂದಾಗ ಮೊಟ್ಟಮೊದಲು ನಮ್ಮ ಸ್ಮೃತಿಪಟಲದಲ್ಲಿ ಮಿಂಚುವ ಒಂದು ಹೆಸರು. ಈಗ ಈ ಮಹನೀಯರು ಕೇವಲ ನೆನಪು ಮಾತ್ರ. ದಿನಾಂಕ 17-08-2025 ರಂದು ತಮ್ಮೆಲ್ಲ ಸಾಧನೆಗಳನ್ನೂ, ಕನ್ನಡಪರ ಹೋರಾಟದ ಕೆಚ್ಚನ್ನೂ ಕನ್ನಡಾಭಿಮಾನಿಗಳ ಹೃದಯಾಂತರಾಳದಲ್ಲಿ ಅಚ್ಚೊತ್ತಿ, ಮೈಸೂರಿನಲ್ಲಿ ವಿಜಯನಗರದ ತಮ್ಮ ಗೃಹದಲ್ಲಿ ನಮ್ಮನ್ನು ಅಗಲಿದ್ದಾರೆ. 73 ವರ್ಷದ ಈ ಶ್ರೀಯುತರು ಶ್ರೀಮತಿ ಅಂಬಾ ಹಾಗೂ ಮೈಸೂರಿನ ಡಿ. ಬನುಮಯ್ಯ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿದ್ದ ಶ್ರೀ ಎಸ್.ವಿ. ರಘೋತ್ತಮರಾವ್ ದಂಪತಿಗಳ ಜ್ಯೇಷ್ಠಪುತ್ರರು. ಮೈಸೂರು ವಿಶ್ವವಿದ್ಯಾನಿಲಯದಿಂದ ಭೂವಿಜ್ಞಾನಶಾಸ್ತ್ರದಲ್ಲಿ ಮೂರನೇ ರ್‍ಯಾಂಕ್ ಪಡೆದು ಸ್ನಾತಕೋತ್ತರ ಪದವಿ. ನಂತರ ಎಲ್.ಎಲ್.ಬಿ. ಕಾನೂನುಶಾಸ್ತ್ರದಲ್ಲಿ ಪದವಿಯನ್ನು ಪಡೆದರು. ತಮ್ಮ 23 ನೆಯ ವಯಸ್ಸಿನಲ್ಲಿಯೇ ಗೋಕಾಕ್ ಚಳುವಳಿಯಲ್ಲಿ ಭಾಗವಹಿಸಿ ಬಂಧನಕ್ಕೂ ಒಳಗಾದರು. ನಂತರ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಲ್ಲಿ ದೀರ್ಘಕಾಲ ಸಾರ್ಥಕಸೇವೆಯನ್ನು ಸಲ್ಲಿಸಿ 2014 ನೇ ಇಸವಿಯಲ್ಲಿ ಉಪನಿರ್ದೇಶಕರಾಗಿ ನಿವೃತ್ತಿಯನ್ನು ಹೊಂದಿದರು. ಹಲವು ಕನ್ನಡಪರ ಸಂಘಟನೆಗಳಲ್ಲಿ ರಚನಾತ್ಮಕವಾಗಿ ಭಾಗವಹಿಸಿ ಕನ್ನಡಭಾಷೆಯ ಅಭಿವರ್ಧನೆಗಾಗಿ ತಮ್ಮನ್ನು ತೊಡಗಿಸಿಕೊಂಡರು. ಕನ್ನಡಭಾಷೆಯ ಹಲವು ದಿಗ್ಗಜರ ಸಹಯೋಗದಲ್ಲಿ ಅನೇಕ ಸ್ವತನ್ತ್ರ ಹಾಗೂ ಅನುವಾದಿತಕೃತಿಗಳು ಇವರ ಲೇಖನಿಯಿಂದ ಬೆಳಕನ್ನು ಕಂಡಿವೆ. ಇವುಗಳಲ್ಲಿ ಕೆಲವು ಮುಖ್ಯವಾದುವು 'ಭೂಸ್ವರೂಪವಿಜ್ಞಾನ', 'ಬದಲಾಗುತ್ತಿರುವ ಭೂಮಿ' ಮುಂತಾದ ಕೃತಿಗಳು. ಭೂವಿಜ್ಞಾನ ವಿಶ್ವಕೋಶದ ಗೌರವಸಂಪಾದಕರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಕರ್ಣಾಟಕ ವಿಜ್ಞಾನ ಅಕೆಡಮಿಯ ಸದಸ್ಯರೂ ಆಗಿದ್ದು, ಇವರು ಸಂಕಲಿಸಿದ 'ಕಾನೂನು ಪದಕೋಶ'ವು ಮೈಸೂರು ಪ್ರಸಾರಾಂಗದಿಂದ ಪ್ರಕಾಶಿತವಾಗಿದೆ. ಇವರ ಮತ್ತೊಂದು ಮಹತ್ಕಾರ್ಯ, ಮೈಸೂರು ಪ್ರಸಾರಾಂಗದಿಂದ ಪ್ರಕಟವಾಗಿರುವ ಇಂಗ್ಲಿಷ್-ಕನ್ನಡ ಬೃಹತ್ ನಿಘಂಟನ್ನು ಸಂಕ್ಷಿಪ್ತಗೊಳಿಸಿ ಸಿದ್ಧಪಡಿಸಿರುವ 'ಸಂಕ್ಷಿಪ್ತ ಇಂಗ್ಲಿಷ್-ಕನ್ನಡ ನಿಘಂಟು' ಇನ್ನು ಮುದ್ರಣಾಲಯದಿಂದ ಹೊರಬರಬೇಕಾಗಿದೆ. ಇದಲ್ಲದೆ ಈ ಮಹನೀಯರು ಸ್ವತನ್ತ್ರವಾಗಿ ಸಿದ್ಧಪಡಿಸಿರುವ 'ಶಾಲಾವಿದ್ಯಾರ್ಥಿಗಳಿಗಾಗಿ ಇಂಗ್ಲಿಷ್-ಕನ್ನಡ ನಿಘಂಟು' 15 ನೇ ಮುದ್ರಣವನ್ನು ಕಂಡಿದೆ ಎಂದರೆ

ಈ ಕೃತಿಯ ಪ್ರಾಮುಖ್ಯತೆ, ಜನಪ್ರಿಯತೆ ಮತ್ತು ಇವರ ವಿದ್ವತ್ತುಗಳನ್ನು ಊಹಿಸಿಕೊಳ್ಳಬಹುದು. ಕರ್ಣಾಟಕದಲ್ಲಿ ಪ್ರಾಥಮಿಕ ಶಾಲಾಹಂತದಲ್ಲಿ ಮಾತೃಭಾಷೆ ಕನ್ನಡದ ಮಾಧ್ಯಮದಲ್ಲೇ ಶಿಕ್ಷಣಪದ್ಧತಿಯನ್ನು ಜಾರಿಗೆ ತರಲು ಇವರು ನಡೆಸಿದ ಹೋರಾಟ ಸ್ಮರಣೀಯ. ಹೀಗೆ ಹತ್ತುಹಲವು ರಚನಾತ್ಮಕ ಕ್ರಿಯೆಗಳಲ್ಲಿ ಭಾಗಿಗಳಾಗಿ, ಸಮಾಜಕ್ಕೆ ಚಿರಸ್ಮರಣೀಯಸೇವೆಯನ್ನು ಸಲ್ಲಿಸಿರುವ ಸ.ರ.ಸುದರ್ಶನ ಅವರಿಗೆ ಅಂತಿಮವಾಗಿ ಅಶ್ರುಪೂರ್ಣನಮನವನ್ನು ಸಲ್ಲಿಸುತ್ತಾ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

**ಎಸ್.ಆರ್. ಅನಂತಮೂರ್ತಿ**

ಶ್ರೀಶಾರದಾನಿಕೇತನ ಅಸೋಸಿಯೇಷನ್ (ರಿ)
ಬೆಂಗಳೂರು–560 019

## ಶ್ರೀಶಾರದಾನಿಕೇತನ ಅಸೋಸಿಯೇಷನ್ (ರಿ)

# ನಡೆದುಬಂದ ದಾರಿ

–ದೃಷ್ಟಶ್ರುತ

1. ಸುಮಾರು 1958–60 ನೇ ಇಸವಿಯ ಕಾಲಾವಧಿ. ಸುಮಾರು 65 ವರ್ಷಗಳಗಿಂತಲೂ ಹಿಂದಿನ ಆ ಸಮಯದಲ್ಲಿ ಬೆಂಗಳೂರಿಗೆ ವಿದ್ಯಾರ್ಜನೆಗಾಗಿ ಬರುತ್ತಿದ್ದ ನಮ್ಮ ಸಮಾಜದ ಕೆಲವು ಉತ್ಸಾಹಿ ಯುವಕರು ವ್ಯವಸ್ಥಿತವಾಗಿ ಸೇರಿ ಬಸವನಗುಡಿಯ ಉತ್ತರ ಆಂಜನೇಯ ದೇವಸ್ಥಾನದ ರಸ್ತೆಯಲ್ಲಿ ಒಂದು ಬಾಡಿಗೆ ಕಟ್ಟಡದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಿದ್ದರು. ಅವರೆಲ್ಲರೂ ಮೈಸೂರಿನ ನಮ್ಮ ಸಮಾಜದ ಶಾರದಾನಿಕೇತನ ವಿದ್ಯಾರ್ಥಿನಿಲಯದಿಂದ ಬಂದವರಾಗಿದ್ದುದರಿಂದ ತಮ್ಮ ವಿದ್ಯಾಭ್ಯಾಸದ ಈ ವಸತಿವ್ಯವಸ್ಥೆಗೆ **‘ಶಾರದಾನಿಕೇತನ’** ಎಂದೇ ನಾಮಕರಣವನ್ನು ತಾವೇ ಮಾಡಿಕೊಂಡರು. ನಂತರ ಸುಮಾರು 1966 ನೇ ಇಸವಿಯಲ್ಲಿ ತಮ್ಮ ‘ಶಾರದಾನಿಕೇತನ’ವನ್ನು ಬಸವನಗುಡಿಯ ಬಾಂದಿನವರ ರಸ್ತೆಗೆ (Surveyors’ Street) ಬದಲಾಯಿಸಬೇಕಾಗಿ ಬಂತು. ಸುಮಾರು 5 ವರ್ಷಗಳು ಅಲ್ಲಿ ಇದ್ದು, ಆ ಕಟ್ಟಡದ ಮಾಲೀಕರು ತಮ್ಮ ಕಟ್ಟಡವನ್ನು ಬೇರೆಯವರಿಗೆ ಮಾರಾಟಮಾಡಿದಾಗ ಅನಿವಾರ್ಯವಾಗಿ ಕಟ್ಟಡವನ್ನು ಬಿಟ್ಟುಕೊಡಬೇಕಾಗಿ ಬಂದಿತು. ಆ ಸಮಯದಲ್ಲಿ **ಕೀರ್ತಿಶೇಷ ಶ್ರೀಮಾನ್ ಡಿ. ಕೃಷ್ಣಮೂರ್ತಿಗಳು, ಕೀರ್ತಿಶೇಷ ಶ್ರೀಮಾನ್ ಎಮ್.ಎನ್. ವೆಂಕಟಸುಬ್ಬಯ್ಯನವರು, ಕೀರ್ತಿಶೇಷ ಶ್ರೀಮಾನ್ ಎಲ್. ನಾರಾಯಣರಾಯರು, ಕೀರ್ತಿಶೇಷ ಶ್ರೀಮಾನ್ ವಿ.ಕೆ. ರಾಮಣ್ಣನವರು** ಹಾಗೂ ಕೆಲವು ಆಸಕ್ತಮಹನೀಯರು ಸೇರಿ, ಪರಊರಿನಿಂದ ಬಂದು ಬೆಂಗಳೂರಿನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸುವ ಆಸಕ್ತಿಯುಳ್ಳವರಿಗೆ ಏನಾದರೂ ಒಂದು ಶಾಶ್ವತವಾದ ವ್ಯವಸ್ಥೆಯನ್ನು ಮಾಡಬೇಕೆಂದು ಬಯಸಿ ‘ಶಾರದಾನಿಕೇತನ’ ವನ್ನು **‘ಶ್ರೀಶಾರದಾನಿಕೇತನ ಅಸೋಸಿಯೇಷನ್’** ಎಂಬ ಸಂಸ್ಥೆಯನ್ನಾಗಿ ಮಾಡಿ ಪುನರ್ನಾಮಕರಣವನ್ನು ಮಾಡಿದರು. ಹೀಗೆ ಸ್ಥಾಪಿತವಾದ ಸಂಸ್ಥೆಯೇ ‘ಶ್ರೀಶಾರದಾನಿಕೇತನ ಅಸೋಸಿಯೇಷನ್’, ಪರ ಊರಿನಿಂದ ಬಂದು ಬೆಂಗಳೂರಿನಲ್ಲಿ ವಿದ್ಯಾರ್ಜನೆಮಾಡುವುದು ಅತ್ಯಂತ ಕಷ್ಟಕರವಾಗಿದ್ದ ಆ ಕಾಲದಲ್ಲಿ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಉಚಿತವಾಗಿ ವಸತಿಸೌಕರ್ಯವನ್ನು ಕಲ್ಪಿಸಿಕೊಟ್ಟು ಅವರ ವಿದ್ಯಾರ್ಜನೆಗೆ ಸಹಾಯಮಾಡಬೇಕೆಂಬ ಉದಾತ್ತ ಧ್ಯೇಯದಿಂದಲೂ ಮತ್ತು ದೃಢವಾದ ಸಂಕಲ್ಪದಿಂದಲೂ ಪ್ರಾರಂಭವಾದ ಒಂದು ವಿಶಿಷ್ಟಸಂಸ್ಥೆ. ವಿದ್ಯಾವಂತನು ಮಾತ್ರ ಎಲ್ಲಕಡೆಯಲ್ಲಿಯೂ ಆದರಿಸಲ್ಪಡುತ್ತಾನಲ್ಲವೇ ! **ವಿದ್ವಾನ್ ಸರ್ವತ್ರ ಪೂಜ್ಯತೇ** !!

2. ಹೀಗೆ ಪ್ರಾರಂಭವಾದ ಸಂಸ್ಥೆಯು ಕೆಲವು ಕಾಲ ಯಾವ ಅಡಚಣೆಯೂ ಇಲ್ಲದಂತೆ ಸರ್ವೇಯರ್ಸ್ ರಸ್ತೆಯ ಕಟ್ಟಡದಲ್ಲಿನಡೆಯಿತು. ನಂತರದ ದಿನಗಳಲ್ಲಿ ಕಟ್ಟಡದ ಮಾಲೀಕರು ಕಟ್ಟಡವನ್ನು ತೆರವು ಮಾಡಿಕೊಡುವಂತೆ ಒತ್ತಾಯಿಸಿದಾಗ, ಬೇರೆ ಕಟ್ಟಡಕ್ಕೆ ಸ್ಥಳಾಂತರಿಸುವುದಕ್ಕೋಸ್ಕರ ಕೊಡಬೇಕಾದ ಮುಂಗಡ ಹಾಗೂ ಹೆಚ್ಚುವರಿ ಬಾಡಿಗೆ ಮುಂತಾದುವನ್ನು ಕೊಡುವುದಕ್ಕೆ ಅಗತ್ಯವಾದ ಹಣದ ಕೊರತೆಯಿಂದ ಅಸಹಾಯಕ ಪರಿಸ್ಥಿತಿ ಉಂಟಾಯಿತು. ಆ ಸಂದಿಗ್ಧಸಮಯದಲ್ಲಿ ನೆರವಿಗೆ ಬಂದವರೇ **ಶ್ರೀಮಾನ್ ಡಿ. ಕೃಷ್ಣಮೂರ್ತಿಯವರು**. ಈ ಮಹನೀಯರು ಆಗ ತಾವು ವಾಸವಿದ್ದ ನಂ. 228, 9 ನೇ ಕ್ರಾಸ್ ನರಸಿಂಹರಾಜ ಕಾಲೋನಿ, ಬೆಂಗಳೂರು–560019. ಈ ಬಾಡಿಗೆಮನೆಯಲ್ಲಿಯೇ ಸಂಸ್ಥೆಯು ಕಾರ್ಯಪ್ರವೃತ್ತವಾಗುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರು. ನಂತರ ಶ್ರೀಶಾರದಾನಿಕೇತನ ಅಸೋಸಿಯೇಷನ್ ಸಂಸ್ಥೆಯು ಈ ವಿಳಾಸದಲ್ಲಿಯೇ Mysore Society Registration Act 1960 (Mysore Act No. 17 of 1960). ಪ್ರಕಾರ ನೋಂದಾಯಿಸಲ್ಪಟ್ಟಿತು (R.C. No.

112/72-73). ಈಗಲೂ ಸಹ ಸಂಸ್ಥೆಯ ನೋಂದಣಿ ಪತ್ರದಲ್ಲಿ ಈ ವಿಳಾಸವೇ ನಮೂದಾಗಿರುತ್ತದೆ.

3. ಹೀಗೆ ನೋಂದಣಿಯಾದ ನಂತರ ಸಂಘಕ್ಕೆ ಒಂದು ಸ್ವಂತ ನಿವೇಶನವನ್ನು ಪಡೆದುಕೊಳ್ಳಲು ಪ್ರಯತ್ನವು ಮೊದಲಾಯಿತು. ಅದೇ ಸಮಯಕ್ಕೆ ಸರಿಯಾಗಿ, ಆಗ ಶ್ರೀ ಬಿ.ಎಸ್. ನಾರಾಯಣ್ ರವರು ತಮ್ಮ ಒಡೆತನದಲ್ಲಿದ್ದ ಬಿ.ಎಮ್.ಎಸ್. ಕಾಲೇಜಿನ ಹಿಂದಿನ ಜಮೀನನ್ನು ನಿವೇಶನಗಳನ್ನಾಗಿ ಪರಿವರ್ತಿಸಿ ಮಾರಾಟಮಾಡಲು ನಿರ್ಧರಿಸಿ, ಆಗಿನ ನಗರಾಭಿವೃದ್ಧಿ ನಿಗಮದಿಂದ ಪರಿವರ್ತನಾಕಾರ್ಯಕ್ಕೆ ಅಗತ್ಯವಾದ ಕ್ರಮಗಳನ್ನು ತೆಗೆದುಕೊಂಡು ನಿವೇಶನಯೋಗ್ಯವನ್ನಾಗಿ ಮಾಡಲು ಬಯಸಿ ಆ ಕಾರ್ಯವನ್ನು ಅವರ ಸ್ನೇಹಿತರಾಗಿದ್ದ ಶ್ರೀ ವಿ.ಕೆ. ರಾಮಣ್ಣನವರಿಗೆ ವಹಿಸಿಕೊಟ್ಟರು. ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಕ್ಕಾಗಿ ಶ್ರೀ ನಾರಾಯಣ್ ರವರು ಶ್ರೀ ವಿ.ಕೆ. ರಾಮಣ್ಣನವರಿಗೆ ಈಗ ಸಂಘದ ಕಟ್ಟಡವಿರುವ 40 ಥ (88+110) /2= 3960 ಚ. ಅ. ನಿವೇಶನವನ್ನು ಆದ್ಯತೆಯ ಮೇರೆ ವಿಶೇಷ ರಿಯಾಯ್ತಿದರದ ಮೊಬಲಗನ್ನು ಪಾವತಿಸಿ ನೋಂದಣಿಮಾಡಿಸಿಕೊಳ್ಳಲು ಹೇಳಿದರು. ಅದೇ ಸಮಯದಲ್ಲಿ ಸಂಘಕ್ಕೆ ಒಂದು ಸ್ವಂತನಿವೇಶನದ ಅನ್ವೇಷಣೆಯಲ್ಲಿದ್ದ ಸಂಘದ ಕಾರ್ಯಕಾರಿಸಮಿತಿಗೆ, ಆಗ ಶಾರದಾನಿಕೇತನದಲ್ಲಿ ವಿದ್ಯಾರ್ಥಿಯೂ ಆಗಿದ್ದ ಶ್ರೀ ರಾಮಣ್ಣನವರು ತಮಗೆ ಶ್ರೀ ಬಿ.ಎಸ್. ನಾರಾಯಣ್ ರವರು ತೆಗೆದುಕೊಳ್ಳಲು ಹೇಳಿದ್ದ ನಿವೇಶನವನ್ನು ಅದೇ ರಿಯಾಯ್ತಿದರವನ್ನು ಪಾವತಿಸಿ ನೋಂದಾಯಿಸಿಕೊಳ್ಳಲು ಉದಾರಮನೋಭಾವದಿಂದ ಅವಕಾಶವನ್ನು ಕಲ್ಪಿಸಿಕೊಟ್ಟರು. ಆ ಮೊಬಲಗನ್ನು ಪೂರ್ತಿಯಾಗಿ ಪಾವತಿಸಲೂ ಆಗದೆ ಅಸಹಾಯಕವಾಗಿದ್ದ ಸಂಸ್ಥೆಯಿಂದ ಆಗ ಸಂಸ್ಥೆಯಲ್ಲಿ ಲಭ್ಯವಿದ್ದ ಭಾಗಶಃ ಹಣವನ್ನು ತೆಗೆದುಕೊಂಡು ಸಂಸ್ಥೆಯ ಹೆಸರಿಗೆ ಪೂರ್ಣವಾಗಿ ನೋಂದಾಯಿಸಿಕೊಡಲು ಮಾಲೀಕರ ಮನವೊಪ್ಪಿಸಿದವರು ಸುಪ್ರಸಿದ್ಧ ನ್ಯಾಯವಾದಿಗಳಾಗಿದ್ದ ಶ್ರೀಮಾನ್ **ಎಮ್.ಎನ್**. **ವೆಂಕಟಾಚಲಯ್ಯನವರು**. ಉಳಿದ ಹಣವನ್ನು ಮೂರು ಕಂತುಗಳಲ್ಲಿ ಶ್ರೀಮಾನ್ ಡಿ. ಕೃಷ್ಣಮೂರ್ತಿ, ಶ್ರೀಮಾನ್ ಎಮ್.ಎನ್. ವೆಂಕಟಸುಬ್ಬಯ್ಯ ಹಾಗೂ ಸಮಾಜದ ಇತರ ಕೆಲವು ಉದಾರಮನಸ್ಕರ ನೆರವಿನಿಂದ ನಿವೇಶನದ ಮಾಲೀಕರಿಗೆ ಸಂದಾಯಮಾಡಿದ್ದು ಬೇರೆಯ ವಿಷಯ. ಹೀಗೆ ಹಣವೇ ಮುಂತಾದ ಯಾವ ಅಗತ್ಯವಾದ ಅನುಕೂಲತೆಯು ಇಲ್ಲದಿದ್ದರೂ ಕೆಲವು ಮಹನೀಯರ ಕೇವಲ ಸಂಕಲ್ಪಮಾತ್ರದ ಬಲದಿಂದ ಅತ್ಯಮೂಲ್ಯವಾದ ನಿವೇಶನವೊಂದು ಸಂಸ್ಥೆಗೆ ಲಭ್ಯವಾಯಿತು. ಸಾವಿರಾರು ವರ್ಷಗಳ ಮೊದಲೇ ಭರ್ತೃಹರಿಯು ಹೇಳಿದ ಸುಭಾಷಿತವು ಸಾರ್ಥಕಗೊಂಡಿತು. **'ಕ್ರಿಯಾಸಿದ್ಧಿಃ ಸತ್ತ್ವೇ ಭವತಿ ಮಹತಾಂ ನೋಪಕರಣೇ'**. ಸಂಕಲ್ಪಸಿದ್ಧರಾದ ಈ ಎಲ್ಲ ಮಹನೀಯರನ್ನೂ ಸಂಸ್ಥೆಯು ಈ ಶುಭಸಂದರ್ಭದಲ್ಲಿ ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಳ್ಳುತ್ತದೆ.

4. ನಿವೇಶನವನ್ನು ಪಡೆದುಕೊಂಡಿದ್ದಾಯಿತು. ನಂತರವೇ ಎದುರಾದದ್ದು ಕಟ್ಟಡನಿರ್ಮಾಣವೆಂಬ ಸವಾಲಿನ ಸಮಸ್ಯೆ. ಸಂಘಕ್ಕೆ ಮೂಲಧನವೆಂದು ಕಿಂಚಿತ್ತೂ ಇಲ್ಲದಿದ್ದ ಸಮಯ. ಆ ಸಮಯದಲ್ಲಿ ನೆರವಿಗೆ ಬಂದದ್ದು ಅದೇ ದೃಢಸಂಕಲ್ಪ. ಆಗ ಬೆಂಗಳೂರು ಮಹಾನಗರದಲ್ಲಿ ವಾಸವಾಗಿದ್ದ ನಮ್ಮ ಎಲ್ಲ ಸಮಾಜಬಾಂಧವರನ್ನು ಮುಖತಃ ಸಂದರ್ಶಿಸಿ, ಅವರಿಗೆ ಸಂಸ್ಥೆಯ ಧ್ಯೇಯೋದ್ದೇಶಗಳನ್ನೂ ಅದಕ್ಕೆ ಬೇಕಾದ ಸ್ವಂತಕಟ್ಟಡದ ಅವಶ್ಯಕತೆಯನ್ನೂ ತಿಳಿಸಿ ಅವರಿಂದ ಸಹಾಯವನ್ನು ಪಡೆಯುವುದೆಂದು ತೀರ್ಮಾನಿಸಲಾಯಿತು. ಅದಕ್ಕಾಗಿ ಮುಂದೆ ಬಂದವರು ಹತ್ತು ಹಲವು ಉತ್ಸಾಹೀ ಯುವಕರು. ಈ ಯುವಕರ ಉತ್ಸಾಹ, ಹಿರಿಯರ ಸಂಕಲ್ಪ ಹಾಗೂ ಈ ಸಂಸ್ಥೆಯ ಅಧಿಷ್ಠಾತ್ರೀದೇವತೆಯೂ ವಿದ್ಯಾಧಿದೇವತೆಯೂ ಆದ ಶ್ರೀಶಾರದೆಯ ಅನುಗ್ರಹ ಇವುಗಳ ಬಲವನ್ನೇ ನಂಬಿ **09-05-1980** ಈ ಶುಭದಿನದಂದು ಕಟ್ಟಡನಿರ್ಮಾಣಕ್ಕೆ ಶಂಕುಸ್ಥಾಪನೆಯನ್ನು ನೆರವೇರಿಸಲಾಯಿತು. ನಮ್ಮ ಸಮಾಜದ ಹಿರಿಯರೂ, ಸ್ವಾತಂತ್ರ್ಯಹೋರಾಟಗಾರರೂ, ಪ್ರತಿಷ್ಠಿತ ಜಮುನಾಲಾಲ್ ಬಜಾಜ್ ಪ್ರಶಸ್ತಿ ವಿಜೇತರೂ, ಮಹಾತ್ಮಗಾಂಧಿಯವರ ನೇರ ಅನುಯಾಯಿಗಳೂ ಆಗಿದ್ದ **ಶ್ರೀಮಾನ್ ತಗಡೂರು**

**ರಾಮಚಂದ್ರರಾಯರು** ಶಂಕುಸ್ಥಾಪನೆಯನ್ನು ನೆರವೇರಿಸಿ, ಕಟ್ಟಡವು ನಿಗದಿತ ಅವಧಿಯಲ್ಲಿ ಪೂರ್ಣಗೊಂಡು ಕಾರ್ಯಪ್ರವೃತ್ತವಾಗುವಂತೆ ಹಾರೈಸಿದರು. ಸಂಸ್ಥೆಯ ಆಗಿನ ಅಧ್ಯಕ್ಷರಾಗಿದ್ದ ಶ್ರೀ ಡಿ. ಕೃಷ್ಣಮೂರ್ತಿಯವರೂ, ಖಜಾಂಚಿಗಳಾಗಿದ್ದ ಶ್ರೀಮಾನ್ ಎಂ.ಎನ್. ವೆಂಕಟಸುಬ್ಬಯ್ಯನವರೂ ಸೇರಿ ಅನೇಕ ಉತ್ಸಾಹೀ ಯುವಕಾರ್ಯಕರ್ತರು ಉಪಸ್ಥಿತರಿದ್ದರು. ತತ್ಕ್ಷಣದಿಂದಲೇ ನಮ್ಮ ಸಮಾಜದ ಉತ್ಸಾಹೀ ಕಾರ್ಯಕರ್ತರು ಕಾರ್ಯಪ್ರವೃತ್ತರಾದರು. ಪ್ರಪ್ರಥಮವಾಗಿ ಆಗ ಬೆಂಗಳೂರಿನಲ್ಲಿ ವಾಸವಿದ್ದ ನಮ್ಮ ಸಮಾಜಬಾಂಧವರೆಲ್ಲರನ್ನೂ ಸಂಸ್ಥೆಯಸದಸ್ಯರನ್ನಾಗಿ ನೋಂದಾಯಿಸುವ ಕಾರ್ಯ ಪ್ರಾರಂಭವಾಯಿತು. ಆಗ ಬಹಳಜನ ಕಾರ್ಯಕರ್ತರಿಗಿದ್ದ ವಾಹನಸೌಲಭ್ಯವೆಂದರೆ ಬೈಸಿಕಲ್ ಒಂದೇ. ಕೆಲವರಿಗೆ ಮಾತ್ರ ಸ್ಕೂಟರ್. ಬಹಳ ಜನಕ್ಕೆ ಸರ್ಕಾರಿಬಸ್, ಮತ್ತೆಕೆಲವರಿಗೆ ಇದಾವುದೂ ಇಲ್ಲ, ಕೇವಲ ಪಾದಸೌಲಭ್ಯ. ಬೆಳಗ್ಗೆ ಕೆಲಸದ ಒತ್ತಡ. ಹೀಗಾಗಿ ತಮಗಿದ್ದ ವಾಹನಸೌಲಭ್ಯದಿಂದಲೇ ಸಾಯಂಕಾಲ 7 ಘಂಟೆಯಿಂದ ಸಂಸ್ಥೆಯಕಾರ್ಯ ಪ್ರಾರಂಭ. ಅದಾಗಲೇ ಕಟ್ಟಡ ನಿರ್ಮಾಣಕಾರ್ಯ ಪ್ರಾರಂಭವಾಗಿತ್ತು. ಅದಕ್ಕಾಗಿ ಅವಶ್ಯಕವಾಗಿದ್ದ ಕಲ್ಲು, ಇಟ್ಟಿಗೆ, ಜೆಲ್ಲಿ, ಕಬ್ಬಿಣದ ಸಲಾಕೆಗಳು, ಸಿಮೆಂಟ್ ಮುಂತಾದ ಸಾಮಗ್ರಿಗಳನ್ನು ನಮ್ಮ ಸಮಾಜದ ಹಲವು ಮಹನೀಯರು ನೇರವಾಗಿ ಒದಗಿಸಿಕೊಟ್ಟರು. ಕೆಲವರ ಮನೆಗಂತೂ ಹಲವು ಹತ್ತು ಬಾರಿ ಹೋಗಿ, ಅವರ ಮನವೊಲಿಸಿ ಅವರಿಂದ ನಿರ್ಮಾಣಸಾಮಗ್ರಿಗಳನ್ನು ಪಡೆದುಕೊಂಡು ಕಟ್ಟಡನಿರ್ಮಾಣಕಾರ್ಯವು ಪೂರ್ಣಗೊಳ್ಳುವಂತೆ ಮಾಡಿದ ಕೀರ್ತಿ ನಮ್ಮ ಆಗಿನ ಕಾರ್ಯಕರ್ತರಿಗೆ ಸಲ್ಲುತ್ತದೆ. ಅವರೆಲ್ಲರ ಅವಿರತಪರಿಶ್ರಮ ಹಾಗೂ ಬದ್ಧತೆಯನ್ನು ಮಾತುಗಳಿಂದ ತಿಳಿಸುವುದಕ್ಕೆ ಈ ಕಾರ್ಯಕಾರಿಸಮಿತಿಗೆ ಸಾಧ್ಯವಾಗುತ್ತಿಲ್ಲ. ಇನ್ನು, ಆರ್.ಸಿ.ಸಿ. ಮೊದಲುಗೊಂಡು ಕಟ್ಟಡದ ಸಂಪೂರ್ಣ ವಿನ್ಯಾಸದ ಹೊಣೆಯನ್ನು ಹೊತ್ತು ಯಶಸ್ವಿಯಾಗಿ ನಿರ್ವಹಿಸಿದವರು ಆಗಿನ ಪ್ರತಿಷ್ಠಿತ ಟಾರ್ ಸ್ಟೀಲ್ ರಿಸರ್ಚ್ ಫೌಂಡೇಷನ್ ಸಂಸ್ಥೆಯ ಮುಖ್ಯಸ್ಥರಾಗಿದ್ದ **ಡಾ॥ ಸಿ.ಎಸ್. ವಿಶ್ವನಾಥ್** ರವರು. ಹೀಗೆ, ಶ್ರೀಯುತರುಗಳಾದ ಡಿ ಕೃಷ್ಣಮೂರ್ತಿ, ಎಮ್.ಎನ್ ವೆಂಕಟಸುಬ್ಬಯ್ಯ, ಪಿ.ವಿ. ವೆಂಕಟಸುಬ್ಬಯ್ಯ (ಇಂಜಿನಿಯರಿಂಗ್ ಪ್ರಾಧ್ಯಾಪಕರು), ನ್ಯಾಯವಾದಿಗಳಾದ ಎಮ್.ಎಸ್. ಪುರುಷೋತ್ತಮರಾವ್ ಮೊದಲಾದ ಅನೇಕಮಹನೀಯರ ತನುಮನಧನರೂಪದ ಉದಾರಸಮರ್ಪಣೆಯ ಫಲವೇ ಈಗ ಭವ್ಯವಾಗಿ ರಾರಾಜಿಸುತ್ತಿರುವ **'ಶ್ರೀಶಾರದಾನಿಕೇತನ ಅಸೋಸಿಯೇಷನ್'** ಭವನ. ಈಗ ಇವರಲ್ಲಿ ಹಲವರು ಸಾಕ್ಷಾತ್ತಾಗಿ ನಮ್ಮೆದುರಿಗಿಲ್ಲದಿದ್ದರೂ ಇವರು ನೀಡಿರುವ ತನು-ಮನ-ಧನಸೇವೆಯ ನೆನಪುಗಳು, ಆದರ್ಶಗಳು ನಮಗೂ ಹಾಗೂ ನಮ್ಮ ಮುಂದಿನ ಪೀಳಿಗೆಗೂ ಸದಾಕಾಲ ಸ್ಫೂರ್ತಿಯನ್ನು ತುಂಬುತ್ತಾ ಚಿರಸ್ಥಾಯಿಯಾಗಿ ನಿಲ್ಲುತ್ತದೆ. ಇವರೆಲ್ಲರನ್ನೂ ಸಂಸ್ಥೆಯು ಅತ್ಯಂತ ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತದೆ.

5. ಹೀಗೆ ನಿರ್ಮಾಣವಾದ **'ಶ್ರೀಶಾರದಾನಿಕೇತನ ಅಸೋಸಿಯೇಷನ್'** ಭವ್ಯಭವನದ ಪ್ರವೇಶೋತ್ಸವ ಸಮಾರಂಭವು ಷಷ್ಟಿಸಂವತ್ಸರಚಕ್ರದ ಮೊದಲನೆಯ 'ಪ್ರಭವ' ನಾಮ ಸಂವತ್ಸರ ಭಾದ್ರಪದ ಶುಕ್ಲ ದಶಮೀ ಗುರುವಾರ (03-09-1987) ಈ ಶುಭದಿನದಂದು ವಿಜೃಂಭಣೆಯಿಂದ ನೆರವೇರಿತು. ಆಗಿನ ದಕ್ಷಿಣಾಮ್ನಾಯ ಶ್ರೀಶೃಂಗೇರೀ ಶಾರದಾಪೀಠಾಧೀಶ್ವರರಾಗಿದ್ದ ಅನಂತಶ್ರೀವಿಭೂಷಿತ **ಪ॥ಪೂ॥ ಅಭಿನವ ವಿದ್ಯಾತೀರ್ಥಮಹಾಸ್ವಾಮಿಗಳವರು** ಮೊದಲು ಭವನದಲ್ಲಿ ಪದಾರ್ಪಣೆಯನ್ನು ಮಾಡಿ ತಮ್ಮ ಪವಿತ್ರಪಾದಸ್ಪರ್ಶದಿಂದ ನಮ್ಮ ಸೇವಾನಿಕೇತನವೆಂಬ ಅಭಿಧಾನದ **ಶ್ರೀಶಾರದಾನಿಕೇತನ ಅಸೋಸಿಯೇಷನ್** ಕಟ್ಟಡದ ಪ್ರವೇಶೋತ್ಸವವನ್ನು ನೆರವೇರಿಸಿ ಪವಿತ್ರೀಕೃತಗೊಳಿಸಿದರು. ನಂತರ **ಶ್ರೀ ಡಿ. ಕೃಷ್ಣಮೂರ್ತಿಗಳ** ಆಧ್ಯಕ್ಷ್ಯದಲ್ಲಿ ಸಂಸ್ಥೆಯು ಮುನ್ನಡೆಯುವುದಕ್ಕೆ ಹೆಗಲನ್ನು ಕೊಟ್ಟವರು ಉಪಾಧ್ಯಕ್ಷರಾಗಿದ್ದ **ಶ್ರೀ ಎಮ್. ಎನ್. ವೆಂಕಟಸುಬ್ಬಯ್ಯ, ಕಾರ್ಯದರ್ಶಿಗಳಾಗಿದ್ದ ಶ್ರೀ ವಿ.ಕೆ. ರಾಮಣ್ಣ, ನ್ಯಾಯವಾದಿಗಳಾಗಿದ್ದ ಶ್ರೀ ಎಮ್.ಎಸ್. ಪುರುಷೋತ್ತಮರಾವ್** ಮುಂತಾದವರು.

6. ಆ ಕಾಲದಲ್ಲಿ ವೇದವಿಹಿತವಾದ ಶ್ರೌತ-ಸ್ಮಾರ್ತಕರ್ಮಗಳನ್ನು ನೆರವೇರಿಸಲು ಅಗತ್ಯವಾಗಿದ್ದ ವೇದಾಧ್ಯಯನವನ್ನು ಮಾಡಿದ ಪುರೋಹಿತ ವರ್ಗದವರು ನಮ್ಮ ಜನಾಂಗದಲ್ಲಿ

ದೊರೆಯುವುದು ದುರ್ಲಭವಾಗಿತ್ತು. ಇದನ್ನು ಮನಗಂಡ ಶ್ರೀ ವಿ.ಕೆ. ರಾಮಣ್ಣನವರಿಗೆ ಒಂದು ಯೋಜನೆ ಹಾಗೂ ಯೋಚನೆಯು ಹೊಳೆಯಿತು. ಯಾವ ಕೆಲಸವನ್ನೇ ಆಗಲೀ ಛಲದಿಂದ ತ್ರಿವಿಕ್ರಮನಂತೆ ಕಾರ್ಯಗತ ಮಾಡುವ ಸಾಮರ್ಥ್ಯವನ್ನು ರೂಢಿಸಿಕೊಂಡಿದ್ದ ಶ್ರೀ ರಾಮಣ್ಣನವನವರು ಚಿಕ್ಕವಯಸ್ಸಿನ ಯೋಗ್ಯರಾದ ವಟುಗಳನ್ನು ಗುರುತಿಸಿ ಕರೆತಂದು ಅವರಿಗೆ ಉಚಿತವಾಗಿ ಅಶನವಸನಾದಿಗಳನ್ನು ಕೊಟ್ಟು ಆಧುನಿಕವಿದ್ಯಾಭ್ಯಾಸದ ಜೊತೆಯಲ್ಲೇ ವೇದಾಧ್ಯಯನವನ್ನೂ ಮಾಡಿಸಿ ಸಮರ್ಥರಾದ ಪುರೋಹಿತರನ್ನು ಸಮಾಜಕ್ಕೆ ನೀಡುವ ಕಾರ್ಯವನ್ನು ಪ್ರಾರಂಭಿಸಿಯೇಬಿಟ್ಟರು. ಅದರ ಮೊದಲನೆಯ ಭಾಗವಾಗಿ ಉಚಿತ ವಿದ್ಯಾರ್ಥಿನಿಲಯವು **25-07-1993** ರಲ್ಲಿ **ಶ್ರೀಶ್ರೀ ಪರಮಾನನ್ದಭಾರತೀ ಮಹಾಸ್ವಾಮಿಗಳವರ** ಉದ್ಘಾಟನೆಯೊಂದಿಗೆ ಕಾರ್ಯಾರಂಭವಾಯಿತು. **ನಂತರ 1994 ರಲ್ಲಿ ಉಚಿತ ವೇದಪಾಠಶಾಲೆಯೂ** ಪ್ರಾರಂಭವಾಯಿತು. ಆದರೆ ಒಂದುವರ್ಷ ಪೂರ್ಣವಾಗುವುದರೊಳಗೆ ಈ ಯೋಜನೆ **ಶ್ರೀಶಾರದಾನಿಕೇತನ ಅಸೋಸಿಯೇಷನ್** ಸಂಸ್ಥೆಗೆ ಹೊರೆಯಾಗಿಬಿಟ್ಟಿತು. ಆಗ ಕಾರ್ಯಕಾರಿಸಮಿತಿಯ ಸಭೆಯಲ್ಲಿ, ಈ ಯೋಜನೆಯ ಗುರಿಯಾದ ಉಚಿತ ವಿದ್ಯಾಭ್ಯಾಸ ಮತ್ತು ಉಚಿತ ವಿದ್ಯಾರ್ಥಿನಿಲಯದ ನಿರ್ವಹಣೆಯನ್ನು ಮಾತೃಸಂಸ್ಥೆಯಾದ **ಶ್ರೀಶಾರದಾನಿಕೇತನ ಅಸೋಸಿಯೇಷನ್** ಸಂಸ್ಥೆಗೆ ಹೊರೆಯಾಗದಂತೆ ಮುನ್ನಡೆಸಿಕೊಂಡು ಹೋಗುವ ಸಮಾನಮನಸ್ಕರಿಗೆ ವಹಿಸಿಕೊಡಬಹುದೆಂದು ತೀರ್ಮಾನಿಸಿ, ಅದರ ಜವಾಬ್ದಾರಿಯನ್ನು ಶ್ರೀ ರಾಮಣ್ಣನವರಿಗೆ ವಹಿಸಲಾಯಿತು. ಆದರೆ, ಸ್ವತಃ ಶ್ರೀ ರಾಮಣ್ಣನವರೇ ಆ ನಿಬಂಧನೆಗಳಿಗೆ ಒಪ್ಪಿ, ಮಾತೃಸಂಸ್ಥೆಯಾದ **ಶ್ರೀಶಾರದಾನಿಕೇತನ ಅಸೋಸಿಯೇಷನ್ನಿನ** ನಿರ್ವಹಣೆಯ ಜೊತೆಗೆ, ತಮ್ಮ ಉಚಿತವಿದ್ಯಾಭ್ಯಾಸದ ಯೋಜನೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನೂ ತೆಗೆದುಕೊಂಡರು. ಅದರಂತೆ, 1995 ರಿಂದ ಮುಂದಕ್ಕೆ ಎರಡೂ ಸಂಸ್ಥೆಗಳ (ಶ್ರೀಶಾರದಾನಿಕೇತನ ಅಸೋಸಿಯೇಷನ್ ಮತ್ತು ಪ್ರಜ್ಞಾಪ್ರತಿಷ್ಠಾನ) ಹಾಗೂ ಎರಡೂ ಯೋಜನೆಗಳ (ಉಚಿತ ಲೌಕಿಕ ವಿದ್ಯಾಭ್ಯಾಸ, ವೇದಾಧ್ಯಾಪನ ಮತ್ತು ಉಚಿತ ವಿದ್ಯಾರ್ಥಿನಿಲಯ) ನಿರ್ವಹಣೆಯ ಹೊಣೆ ಶ್ರೀ ರಾಮಣ್ಣನವರದಾಯಿತು. ಅದರ ಫಲವಾಗಿಯೇ **ಪ್ರಜ್ಞಾಪ್ರತಿಷ್ಠಾನ** ಎಂಬ ಸಂಸ್ಥೆಯು **24-02-1995** ರಂದು ಶೃಂಗೇರೀ ಶ್ರೀಶಾರದಾಪೀಠದ ಮಹಾಸಂನಿಧಾನಂಗಳು **ಅನಂತಶ್ರೀ ವಿಭೂಷಿತ ಭಾರತೀತೀರ್ಥಮಹಾಸ್ವಾಮಿಗಳ** ದಿವ್ಯಸಾಂನಿಧ್ಯದಲ್ಲಿ ಪ್ರಾರಂಭವಾಯಿತು.

7. ಶ್ರೀರಾಮಣ್ಣನವರು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು **ಪ್ರಜ್ಞಾಪ್ರತಿಷ್ಠಾನ**ದ ಏಳಿಗೆಗಾಗಿ ವಿನಿಯೋಗಿಸಿ, ಮಹಾಜನಗಳ ನಿಂದಾಸ್ತುತಿಗಳನ್ನು ಸಮವಾಗಿ ಸ್ವೀಕರಿಸಿ ಅಹರ್ನಿಶಂ ತಮ್ಮನ್ನು ಅದರಲ್ಲಿ ತೊಡಗಿಸಿಕೊಂಡರು. ಅದರ ಫಲವಾಗಿ ಅದುವರೆಗೆ ಉಪಯೋಗಿಸುತ್ತಿದ್ದ ಪಾಕಶಾಲೆಯು ಕಾಲಕಳೆದಂತೆ ಸಂಪೂರ್ಣವಾಗಿ ಮೂರು ಮಹಡಿಗಳಲ್ಲಿ ಪುನರ್ನಿರ್ಮಿತವಾಯಿತು. ಮೇಲೆ ಆಚಾರ್ಯಗೃಹವೂ ನಿರ್ಮಾಣವಾಯಿತು. ಮುಖ್ಯ ಸಭಾಂಗಣವೂ ಕಾಲಕಾಲಕ್ಕೆ ಅವಶ್ಯಕವಾಗಿದ್ದ ಸುಣ್ಣಬಣ್ಣಗಳಿಂದ ಲೇಪಿತವಾಗಿ ಸುಸ್ಥಿತಿಯಲ್ಲಿ ಇಡಲ್ಪಟ್ಟಿತು. ಅನೇಕ ವೈದಿಕಕಾರ್ಯಕ್ರಮಗಳೂ ಪ್ರಾರಂಭವಾದುವು. ಅವರ ಈ ಪರಿಶ್ರಮದಿಂದ ಹತ್ತಾರು ವಿದ್ಯಾರ್ಥಿಗಳು ಯಶಸ್ವಿಯಾಗಿ ವಿದ್ಯಾಭ್ಯಾಸವನ್ನು ಮುಗಿಸಿ, ಇಂದಿಗೂ ವೈದಿಕವೃತ್ತಿಯಿಂದಲೇ ತಮ್ಮ ಜೀವನವನ್ನು ಸಂತೃಪ್ತರಾಗಿ ನೆಮ್ಮದಿಯಿಂದ ಕಳೆಯುತ್ತಿದ್ದಾರೆ ಎಂಬುದು ಅತಿಶಯೋಕ್ತಿಯಲ್ಲ. ಆ ಎಲ್ಲ ವಿದ್ಯಾರ್ಥಿಗಳಿಗೂ ಶ್ರೀ ರಾಮಣ್ಣನವರು ಪ್ರಾತಃಸ್ಮರಣೀಯರಾಗಿದ್ದಾರೆ. ಈ ಎಲ್ಲ ಸಾಧನೆಗಳಿಗೂ ಸಾಕ್ಷಿಯಾಗಿ ಈ ಪ್ರತಿಷ್ಠಾನದ ಪ್ರಾಕ್ತನವಿದ್ಯಾರ್ಥಿಗಳಿಂದ ಒಂದು ಮಹಾನ್ ಕಾರ್ಯಕ್ರಮವು ಆಯೋಜಿತವಾಗಿ ವಿಜೃಂಭಣೆಯಿಂದ ಸಾಂಗಮಂಗಳಪ್ರದವಾಗಿ ಸಂಪನ್ನವಾಯಿತು. ಅದೇ **ಶಾಕಲ ಋಕ್‌ಸಂಹಿತಾ ಹೋಮ. ಋಗ್ವೇದದ ಸಂಪೂರ್ಣ 10,552 ಋಕ್ಕುಗಳನ್ನೂ ಪ್ರತ್ಯೇಕವಾಗಿ ಪಠಿಸಿ ಸ್ವಾಹಾಕಾರದಿಂದ ಹೋಮಮಾಡಲಾಯಿತು. 06-01-2025 ರಿಂದ 12-01-2025 ರ ವರೆಗೆ** ಒಂದು ಸಪ್ತಾಹಕಾಲ ನಡೆದ ಈ ಅದ್ಭುತಕಾರ್ಯಕ್ರಮದಲ್ಲಿ **ಪೇಜಾವರಮಠದ ಶ್ರೀಶ್ರೀವಿಶ್ವಪ್ರಸನ್ನತೀರ್ಥ** ಯತಿಗಳು ಆಗಮಿಸಿ ಆಶೀರ್ವಚನವನ್ನು ನೀಡಿದರು. ಕೆಲವು ವೇದವಿದ್ವಾಂಸರನ್ನು ಸನ್ಮಾನಿಸಲಾಯಿತು. ಕೊನೆಯ ದಿವಸ ಕೂಡಲೀ ಶೃಂಗೇರಿ ಮಠದ ಪೀಠಾಧ್ಯಕ್ಷರಾದ **ಶ್ರೀಶ್ರೀ ಅಭಿನವ**

**ಶಂಕರಭಾರತೀಸ್ವಾಮಿಗಳವರ** ಸಂಮುಖದಲ್ಲಿ ಪೂರ್ಣಾಹುತಿಕಾರ್ಯಕ್ರಮವು ಶ್ರದ್ಧಾಭಕ್ತಿಗಳಿಂದ ನಡೆಯಿತು. ವಿಧಿವತ್ತಾಗಿ ನಡೆದ ಈ ಕಾರ್ಯಕ್ರಮಕ್ಕೆ ಅನೇಕ ಗಣ್ಯರು ದೇಶದ ವಿವಿಧಭಾಗಗಳಿಂದ ಆಗಮಿಸಿ, ವೀಕ್ಷಿಸಿ ವೇದಪುರುಷನ ಅನುಗ್ರಹಕ್ಕೆ ಪಾತ್ರರಾದರು. ಅಷ್ಟೂ ದಿವಸಗಳಲ್ಲಿ ಎಲ್ಲರಿಗೂ ಉಪಾಹಾರದಿಂದ ಪ್ರಸಾದಭೋಜನದವರೆಗೂ ಎಲ್ಲವ್ಯವಸ್ಥೆಯನ್ನೂ ಅಚ್ಚುಕಟ್ಟಾಗಿ ನಿರ್ವಹಿಸಲಾಯಿತು. **ಪ್ರಜ್ಞಾಪ್ರತಿಷ್ಠಾನವು** ವೈದಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಗುರುತಿಸಲ್ಪಟ್ಟು ಒಂದು ಮುಖ್ಯಸ್ಥಾನವನ್ನು ಪಡೆದುಕೊಡಿತು. ಇಷ್ಟೂ ಈ ವ್ಯವಸ್ಥೆಯ ಒಂದು ಮುಖ.

8. ಈ ವ್ಯವಸ್ಥೆಯ ಇನ್ನೊಂದು ಮುಖವನ್ನು ಈಗ ತಿಳಿಯೋಣ. **ಶ್ರೀಶಾರದಾನಿಕೇತನ ಅಸೋಸಿಯೇಷನ್** ಸಂಸ್ಥೆಯು 1972 ರಲ್ಲಿ ನೋಂದಣಿಯಾಯಿತು. ಅದರ ಧ್ಯೇಯೋದ್ದೇಶಗಳನ್ನು ಒಳಗೊಂಡ ಬೈಲಾ ಕೂಡ ಕಾನೂನಿನ ಪ್ರಕಾರ ಅಂಗೀಕೃತವಾಯಿತು **(ಎಸ್.112/72-73/21-07-1972).** ನಂತರ ಕರ್ಣಾಟಕ ಸರ್ಕಾರದ ಸಹಕಾರ ಇಲಾಖೆಯ ನಿಬಂಧನೆಗಳ ಪ್ರಕಾರ ಮೊದಲ ಸರ್ವಸದಸ್ಯರ ಸಾಮಾನ್ಯಸಭೆಯು ನಡೆದು ಅಧ್ಯಕ್ಷರಾಗಿ ಚುನಾಯಿತರಾದವರು, ಸಂಸ್ಥೆಯ ಸಂಸ್ಥಾಪಕರುಗಳಲ್ಲೊಬ್ಬರಾಗಿದ್ದ ಶ್ರೀ ಡಿ. ಕೃಷ್ಣಮೂರ್ತಿಯವರು. ಮತ್ತಿಬ್ಬರು ಸಂಸ್ಥಾಪಕರುಗಳಾದ ಶ್ರೀ ಎಮ್.ಎನ್. ವೆಂಕಟಸುಬ್ಬಯ್ಯನವರು, ಶ್ರೀ ವಿ.ಕೆ. ರಾಮಣ್ಣನವರು ಕಾರ್ಯದರ್ಶಿಗಳಾಗಿಯೂ, ಎಮ್.ಎಸ್. ಪುರುಷೋತ್ತಮರಾವ್ ಮೊದಲಾಗಿ 15 ಜನ ಸದಸ್ಯರುಗಳಾಗಿಯೂ ಚುನಾಯಿತರಾದರು. ಸರ್ಕಾರದ ನಿಯಮಗಳ ಅನುಸಾರ ಸಹಕಾರ ಇಲಾಖೆಯಲ್ಲಿ ನೋಂದಾವಣೆಯಾಗಿರುವ ಯಾವುದೇ ಸಂಸ್ಥೆಯು ಪ್ರತಿವರ್ಷವೂ ಸರ್ವಸದಸ್ಯರ ವಾರ್ಷಿಕಸಭೆಯನ್ನು ನಡೆಸಿ ಅದಕ್ಕೆ ಸಂಬಂಧಪಟ್ಟ ಎಲ್ಲ ವಿವರಗಳನ್ನು ಖರ್ಚುವೆಚ್ಚಗಳ ಪಟ್ಟಿ ಮುಂತಾದುವುಗಳನ್ನು ಲೆಕ್ಕಪತ್ರಗಳ ಪರಿಶೋಧಿತ ಆಡಿಟ್ ವರದಿ ಸಹಿತ ಸರ್ಕಾರಕ್ಕೆ ಸಲ್ಲಿಸಿ ಸ್ವೀಕೃತಿಪತ್ರವನ್ನು ಪಡೆದುಕೊಳ್ಳಬೇಕು. ಬೈಲಾ ನಿಯಮದಂತೆ ಚುನಾವಣೆಗಳನ್ನು ನಡೆಸಿ ಪದಾಧಿಕಾರಿಗಳನ್ನು ಚುನಾಯಿಸಬೇಕು. ಒಂದುವೇಳೆ ಬೈಲಾವನ್ನು ತಿದ್ದುಪಡಿಮಾಡುವುದು ಅವಶ್ಯಕವೆಂದು ಕಂಡುಬಂದರೆ, ಸರ್ವಸದಸ್ಯರ ವಿಶೇಷಸಭೆಯನ್ನು ಕರೆದು ತಿದ್ದುಪಡಿಗಳಿಗೆ ಸದಸ್ಯರಿಂದ ಅನುಮೋದನೆಯನ್ನು ಪಡೆದು ಅದನ್ನು ಸರಕಾರಕ್ಕೆ ಸಲ್ಲಿಸಿ ಸ್ವೀಕೃತಿಪತ್ರವನ್ನು ಪಡೆಯಬೇಕು. ಆದರೆ, **ಶ್ರೀಶಾರದಾನಿಕೇತನ ಅಸೋಸಿಯೇಷನ್** ಸಂಸ್ಥೆಯ ಜವಾಬ್ದಾರಿಯನ್ನೂ ವಹಿಸಿಕೊಂಡಿದ್ದ ಶ್ರೀ ರಾಮಣ್ಣನವರು ಈ ಯಾವ ನಿಯಮಗಳನ್ನೂ ಪಾಲಿಸಲಿಲ್ಲ. 1972 ರಿಂದ 2005 ರ ವರೆಗೆ ಕೇವಲ ಏಳು ಬಾರಿ ಸರ್ವಸದಸ್ಯರ ಸಭೆಯನ್ನು ನಡೆಸಿರುತ್ತಾರಾದರೂ, ಅವುಗಳನ್ನಾದರೂ ಸರ್ಕಾರಕ್ಕೆ ಸಲ್ಲಿಸಿ ಸ್ವೀಕೃತಿಪತ್ರವನ್ನು ಪಡೆದುಕೊಳ್ಳಲಿಲ್ಲ. 2005 ನೇ ಇಸವಿಯಿಂದ ಮುಂದಕ್ಕಂತೂ ಯಾವ ಸರ್ವಸದಸ್ಯರ ಸಭೆಯನ್ನೂ ನಡೆಸಲಿಲ್ಲ. ಚುನಾವಣೆಯನ್ನು ನಡೆಸಿ, ನಿರ್ವಹಣೆಗೋಸ್ಕರ ಪದಾಧಿಕಾರಿಗಳನ್ನೂ ನೇಮಿಸಲಿಲ್ಲ. ಹೀಗೆ, ಸರ್ಕಾರದ ಯಾವ ನಿಯಮವನ್ನೂ ಪಾಲಿಸಿರುವುದಿಲ್ಲ. ಇದನ್ನು ಆಗ ಅಸ್ತಿತ್ವದಲ್ಲಿದ್ದ ಸಂಸ್ಥೆಯ ಇತರ ಪದಾಧಿಕಾರಿಗಳು ಅನೇಕ ಬಾರಿ ಮನವರಿಕೆ ಮಾಡಿಕೊಟ್ಟರೂ ಸಹ ಸಂಸ್ಥೆಯ ನಿರ್ವಹಣೆಯ ಹೊಣೆಯನ್ನು ಹೊತ್ತಿದ್ದ ನಿರ್ವಾಹಕರು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಹೀಗೆ ಒಂದು ಸಂಸ್ಥೆಯು ಐದು ವರ್ಷಗಳು ಈ ಯಾವ ನಿಯಮಗಳನ್ನೂ ಪಾಲಿಸದೆ ಇದ್ದರೆ, ಆಗ ಆ ಸಂಸ್ಥೆಯನ್ನು ಅಸ್ತಿತ್ವದಲ್ಲಿಲ್ಲದ ಸಂಸ್ಥೆ ಎಂಬುದಾಗಿ ಪರಿಗಣಿಸಿ ಅದರ ಎಲ್ಲ ಸ್ಥಿರ ಚರ ಆಸ್ತಿಗಳನ್ನೂ ಮುಟ್ಟುಗೋಲು ಹಾಕಿಕೊಂಡು ಸೂಕ್ತಕ್ರಮವನ್ನು ಜರುಗಿಸುವ ಅಧಿಕಾರವು ಸರ್ಕಾರಕ್ಕಿರುತ್ತದೆ. ಹೀಗಿದ್ದೂ ಇದು ಆದದ್ದು ನಿರ್ವಾಹಕರ ಅಜ್ಞಾನದಿಂದಲೋ ಅಥವಾ ಅವಜ್ಞೆಯಿಂದಲೋ ಅಥವಾ ಉದ್ದೇಶಪೂರ್ವಕವಾಗಿಯೋ ಎನ್ನುವುದನ್ನು ಹೇಳಲಾಗುವುದಿಲ್ಲ. ಹೀಗೆ ಮಾತೃಸಂಸ್ಥೆಯಾದ **ಶ್ರೀಶಾರದಾನಿಕೇತನ ಅಸೋಸಿಯೇಷನ್** ಕ್ರಮೇಣ ಜನಮಾನಸದಿಂದ ಮರೆಯಾಗುತ್ತಾ ಬಂದಿತು. ಅಷ್ಟೇ ಅಲ್ಲ, ಸರ್ಕಾರವೂ ಕೂಡ ಸಂಸ್ಥೆಯನ್ನು ಅಸ್ತಿತ್ವದಲ್ಲಿಲ್ಲದ ಸಂಸ್ಥೆಯೆಂದು ಪರಿಗಣಿಸಿ ಸಂಬಂಧಪಟ್ಟ ಆಸ್ತಿಗಳನ್ನು ಮುಟ್ಟುಗೋಲುಹಾಕಿಕೊಂಡು ಬೇರೆಯ ಸೂಕ್ತಸಂಸ್ಥೆಗೆ ವಹಿಸಿಕೊಡುವ ಸಮಯವೂ ಹತ್ತಿರವಾಗುತ್ತ ಬಂದಿತು.

ಇವೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಾ ತೀಕ್ಷ್ಣವಾಗಿ ಪ್ರತಿಭಟಿಸಿ ವಿರೋಧಿಸುತ್ತಾ ಬರುತ್ತಿದ್ದ ಕೆಲವು ಸಮಾಜಬಾಂಧವರಲ್ಲಿ ಮೊದಲಿಗರು, ಪುನರುತ್ಥಾನಗೊಂಡಿರುವ **ಶ್ರೀಶಾರದಾನಿಕೇತನ ಅಸೋಸಿಯೇಷನ್ನಿನ** ಈಗಿನ ಉಪಾಧ್ಯಕ್ಷರಾಗಿರುವ ಶ್ರೀ ಎಮ್.ವಿ. ರಮೇಶ್ ರವರ ಧರ್ಮಪತ್ನಿ **ಶ್ರೀಮತಿ ನಿರ್ಮಲಾ ರಮೇಶ್, ಶ್ರೀ ಎನ್. ಶ್ರೀಧರ್** ಮೊದಲಾದವರು. ಈ ಇಬ್ಬರೂ ಈಗ ನಮ್ಮೊಡನಿಲ್ಲ. ಈ ಉತ್ಸಾಹಿಗಳ ಮೇಲ್ಪಂಕ್ತಿಯನ್ನು ಮುಂದುವರೆಸಿಕೊಂಡು, **ಶ್ರೀಶಾರದಾನಿಕೇತನ ಅಸೋಸಿಯೇಷನ್ನಿನ** ಅಸ್ತಿತ್ವಕ್ಕಾಗಿ, ಅದುವರೆಗೆ ನಡೆದ ಅಸಮರ್ಪಕ ನಿರ್ವಹಣೆಯನ್ನು ವಿವರಿಸಿ, ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿ ನಾಲ್ಕು ವರ್ಷಗಳ ಸುದೀರ್ಘಕಾಲದವರೆಗೆ ತಮ್ಮ ಕಾರ್ಯಕ್ರಮಗಳೆಲ್ಲವನ್ನೂ ಬದಿಗೊತ್ತಿ ಸಂಸ್ಥೆಯ ಪುನರುತ್ಥಾನಕ್ಕೋಸ್ಕರ ಸತತ ಪ್ರಯತ್ನವನ್ನು ಮಾಡಿದರು. ಸರ್ಕಾರದವರು ಇವರ ಎಲ್ಲ ಅರೋಪಗಳನ್ನೂ ಪರಿಶೀಲಿಸಿ, ಇದರಲ್ಲಿ ತಥ್ಯವಿದೆಯೆಂದು ಕಂಡುಬಂದದ್ದರಿಂದ, ಇದನ್ನು ಸರಿಪಡಿಸುವುದಕ್ಕಾಗಿ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಿ ಆದೇಶವನ್ನು ಹೊರಡಿಸಿದರು. **(ಸ.ಇ. 75/ಸಿ.ಎಸ್.ಆರ್.2020/26-02-2021)**. ಈ ಉತ್ಸಾಹೀ ಯುವಕರ ಪರಿಶ್ರಮವು ಫಲವನ್ನು ಕೊಟ್ಟಿತು. ಹೀಗೆ ಸಂಸ್ಥೆಯ ಪುನರುತ್ಥಾನಕ್ಕೆ ಶ್ರಮಿಸಿದ ಈ ಮಹನೀಯರುಗಳೆಲ್ಲರನ್ನೂ ಸಂಸ್ಥೆಯು ಕೃತಜ್ಞತೆಯಿಂದ ಅಭಿನಂದಿಸುತ್ತದೆ.

ನಂತರ ಆಡಳಿತಾಧಿಕಾರಿಗಳ ಆದೇಶದಂತೆ ಆಗ ಸಂಸ್ಥೆಯನ್ನು ನಿರ್ವಹಿಸುತ್ತಿದ್ದ ದಿವಂಗತ ಶ್ರೀ ವಿ.ಕೆ. ರಾಮಣ್ಣನವರು ತಮ್ಮ ವಶದಲ್ಲಿದ್ದ ಸಂಬಂಧಪಟ್ಟ ಕೆಲವು ಕಡತಗಳನ್ನು ಆಡಳಿತಾಧಿಕಾರಿಗಳ ವಶಕ್ಕೆ ಕೊಟ್ಟರು. ಸುಮಾರು 52 ವರ್ಷದ ಆಡಳಿತದಲ್ಲಿ ಸರ್ವಸದಸ್ಯರ ಏಳು ಸಾಮಾನ್ಯ ಸಭೆಗಳ ಕೇವಲ ಸೂಚನಾಪತ್ರಗಳನ್ನೂ, ನಾಲ್ಕು ಸಭೆಗಳ ವರದಿಗಳನ್ನೂ, 115 ಜನ ಸದಸ್ಯರ ಪಟ್ಟಿಯನ್ನೂ , ಮತ್ತೆ ಕೆಲವು ಆಹ್ವಾನಪತ್ರಿಕೆಗಳನ್ನೂ ಕೊಟ್ಟಿರುತ್ತಾರೆ. ಇದಕ್ಕೆ ಹೊರತಾಗಿ, ಲೆಕ್ಕಪತ್ರಗಳ ಯಾವ ದಾಖಲೆಗಳಾಗಲೀ ಇರಲಿಲ್ಲ. ಇದೆಲ್ಲವನ್ನೂ ಪರಿಶೀಲಿಸಿ, ಮಾನ್ಯರಾದ ಆಡಳಿತಾಧಿಕಾರಿಗಳು, ಶ್ರೀ ರಾಮಣ್ಣನವರು ಕೊಟ್ಟಿದ್ದ ಕೇವಲ 115 ಸದಸ್ಯರುಗಳ ಪಟ್ಟಿಯನ್ನು ಆಧರಿಸಿ, ನಿಯಮಗಳಗನುಸಾರ **30-07-2024** ರಂದು ಚುನಾವಣೆಯನ್ನು ನಡೆಸಿದರು. ಅದರಂತೆ ಈಗಿರುವ ಕಾರ್ಯಕಾರಿಸಮಿತಿಯು ಅವಿರೋಧವಾಗಿ ಚುನಾಯಿಸಲ್ಪಟ್ಟಿತು. ನಂತರ ಆಡಳಿತಾಧಿಕಾರಿಗಳು **03-08-2024** ರಂದು ಪದಾಧಿಕಾರಿಗಳ ಚುನಾವಣೆಯನ್ನು ನಡೆಸಿ, ಅವಿರೋಧವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ **ಶ್ರೀಶಾರದಾನಿಕೇತನ ಅಸೋಸಿಯೇಷನ್** ಸಂಸ್ಥೆಯ ಅಧಿಕೃತಹಸ್ತಾಂತರ ಪತ್ರವನ್ನೂ, ಶ್ರೀ ರಾಮಣ್ಣನವರು ಸಲ್ಲಿಸಿದ್ದ ಕಡತಗಳನ್ನೂ ದಿನಾಂಕ **03-08-2024** ರಂದೇ ಕೊಟ್ಟು, 52 ವರ್ಷಗಳ ಸಾಮಾನ್ಯಸಭೆ, ಪರಿಶೋಧಿತ ಲೆಕ್ಕಪತ್ರ ಮುಂತಾದ ಅಗತ್ಯ ದಾಖಲೆಗಳನ್ನು ಸಲ್ಲಿಸಿ, ಸಂಸ್ಥೆಯನ್ನು ಚಾಲ್ತಿಯಸ್ಥಿತಿಗೆ ತಂದು, ಸರ್ವಸದಸ್ಯರ ಸಭೆಯನ್ನು ನಡೆಸಿ, 52 ವರ್ಷಗಳಷ್ಟು ಹಿಂದಿನ ಬೈಲಾವನ್ನು ಪರಿಷ್ಕರಿಸಿ ಸರ್ಕಾರಕ್ಕೆ ಸಲ್ಲಿಸಬೇಕೆಂಬ ಆದೇಶವನ್ನು ಕೊಟ್ಟರು.

ಲೆಕ್ಕ ಪತ್ರಗಳ ಯಾವೊಂದು ದಾಖಲೆಯಾಗಲೀ, ವರದಿಯಾಗಲೀ ಇಲ್ಲದೆ ಈ ಆದೇಶವನ್ನು ಪಾಲಿಸಿ, ಸಂಸ್ಥೆಯನ್ನು ಚಾಲ್ತಿಯ ಸ್ಥಿತಿಗೆ ತರುವುದು ನಿಜಕ್ಕೂ ಒಂದು ಸವಾಲಿನ ಕೆಲಸವೇ ಆಗಿತ್ತು. ಆದರೂ ಸಂಸ್ಥೆಯ ಅಧಿಷ್ಠಾತ್ರೀ ದೇವತೆಯಾದ ಶ್ರೀಶಾರದೆಯ ಅನುಗ್ರಹದಿಂದಲೂ, ಸಂಸ್ಥೆಯ ಅಧ್ಯಕ್ಷರ, ಉಪಾಧ್ಯಕ್ಷರ ಉತ್ತೇಜನ ಮತ್ತು ಮಾರ್ಗದರ್ಶನದಿಂದಲೂ ಹಾಗೂ ತಮ್ಮೆಲ್ಲರ ಆಶೀರ್ವಾದಗಳಿಂದಲೂ ಕಾರ್ಯಕಾರಿಸಮಿತಿಯು ಈ ಸವಾಲಿನ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಿರುತ್ತದೆ. ದಿನಾಂಕ 07-09-2025 ರಂದು ಸರ್ವಸದಸ್ಯರ ಸಾಮಾನ್ಯ ಸಭೆಯಲ್ಲಿ ಪರಿಷ್ಕೃತ ಬೈಲಾಗೆ ಅನುಮತಿಯನ್ನು ಪಡೆದುಕೊಂಡು, ಸರ್ಕಾರಕ್ಕೆ ಸಲ್ಲಿಸಿ, ಸ್ವೀಕೃತಿಪತ್ರವನ್ನು ಪಡೆದ ನಂತರ ಸದಸ್ಯತ್ವದ ಅಭಿಯಾನವು ಪ್ರಾರಂಭವಾಗುತ್ತದೆ.

ಇನ್ನು ಮುಂದಿರುವುದೇ, ಸಂಸ್ಥೆಯ ಧ್ಯೇಯೋದ್ದೇಶಗಳು ಪೂರ್ಣವಾಗಿ ನೆರವೇರುವುದಕ್ಕೆ ಅಗತ್ಯವಾದ ಕ್ರಮಗಳನ್ನು ತೆಗೆದುಕೊಂಡು ಕಾರ್ಯಗತಗೊಳಿಸುವುದು. ಇದಕ್ಕೆ, ತಮ್ಮೆಲ್ಲರ ಸಹಕಾರ, ತನು–ಮನ–ಧನಸಹಾಯ, ಮಾರ್ಗದರ್ಶನ ಇವುಗಳನ್ನು ಕಾರ್ಯಕಾರಿಸಮಿತಿಯು ಅಪೇಕ್ಷಿಸುತ್ತದೆ. ಇವೆಲ್ಲಕ್ಕಿಂತ ಹೆಚ್ಚಾಗಿ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪೂರ್ಣಪಾರದರ್ಶಕತೆಯಿಂದ ಮುನ್ನಡೆಯುವುದು ಅತ್ಯಗತ್ಯ. ಇವೆಲ್ಲವನ್ನೂ ಮನಗಂಡಿರುವ ಈ ಕಾರ್ಯಕಾರಿಸಮಿತಿಯು ಇದರಂತೆ ಮುನ್ನಡೆಯುವುದೆಂಬ ಅಶ್ವಾಸನೆಯನ್ನು ನೀಡುತ್ತಾ, ನಮಸ್ಕಾರಗಳೊಂದಿಗೆ ವಿರಮಿಸುತ್ತೇನೆ.

**ಮೇಲಿನ ಈ ಎಲ್ಲ ವಿವರಣೆಗಳಿಗೂ ಆಡಳಿತಾಧಿಕಾರಿಗಳು ನಮಗೆ ನೀಡಿರುವ ಶ್ರೀಶಾರದಾನಿಕೇತನ ಅಸೋಸಿಯೇಷನ್ನಿನ ಕಡತಗಳು, ಈ ಸಂಬಂಧದಲ್ಲಿ ಸರ್ಕಾರದ ಕೆಲವು ನಿರ್ಣಯಗಳು ಮತ್ತು ಶ್ರೀ ವಿ.ಕೆ. ರಾಮಣ್ಣನವರು ನೇರವಾಗಿ ಮುಖತಃ ನೀಡಿರುವ ಕೆಲವು ವಿಷಯಗಳು ಆಧಾರವಾಗಿವೆ.**

ಶ್ರೀಶಾರದಾನಿಕೇತನ ಅಸೋಸಿಯೇಷನ್ (ರಿ)
ಬೆಂಗಳೂರು–560 019

# ಶ್ರೀಶಾರದಾನಿಕೇತನ ಅಸೋಸಿಯೇಷನ್ (ರಿ)

## ಸಂಸ್ಥಾವಾರ್ತೆಗಳು

**ಪದಾಧಿಕಾರಿಗಳ ಆಯ್ಕೆ-** ದಿನಾಂಕ 03-08-2024 ರಂದು ಸಾಯಂಕಾಲ 5 ಘಂಟೆಗೆ ಆಡಳಿತಾಧಿಕಾರಿಗಳಾದ ಶ್ರೀ ಸೋಮಶೇಖರಯ್ಯನವರು ಸಂಸ್ಥೆಯ ಸಭಾಂಗಣದಲ್ಲಿ, ಕಾರ್ಯಕಾರಿ ಸಮಿತಿಗೆ ಅವಿರೋಧವಾಗಿ ಆಯ್ಕೆಯಾಗಿದ್ದ 15 ಸದಸ್ಯರ ಸಂಮುಖದಲ್ಲಿ 5 ಮಂದಿ ಪದಾಧಿಕಾರಿಗಳಿಗಾಗಿ ಚುನಾವಣೆಯನ್ನು ನಡೆಸಿದರು. ಅದರಲ್ಲಿ ಶ್ರೀ ಕೆ. ಸಚ್ಚಿದಾನಂದಮೂರ್ತಿಯವರು ಅಧ್ಯಕ್ಷರಾಗಿಯೂ, ಶ್ರೀ ಎಮ್.ವಿ. ರಮೇಶ್ ರವರು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್.ಆರ್. ಅನಂತಮೂರ್ತಿಯವರು ಕಾರ್ಯದರ್ಶಿಗಳಾಗಿಯೂ, ಶ್ರೀ ಎಮ್.ಎನ್. ಶ್ರೀನಿವಾಸಬಾಬು ರವರು ಸಹಕಾರ್ಯದರ್ಶಿಗಳಾಗಿಯೂ ಮತ್ತು ಶ್ರೀ ಟಿ.ಎನ್. ಅನಂತರಾಮನ್ ರವರು ಖಜಾಂಚಿಯಾಗಿಯೂ ಅವಿರೋಧವಾಗಿ ಆಯ್ಕೆಯಾದರು. ನಂತರ ಆಡಳಿತಾಧಿಕಾರಿಗಳಿಗೆ ಕೃತಜ್ಞತೆಯನ್ನು ಸಲ್ಲಿಸಿ, ಸಂಸ್ಥೆಯ ಅಧಿಷ್ಠಾತ್ರೀದೇವತೆಯಾದ ಶ್ರೀಶಾರದೆಗೆ ಮಂಗಳಾರತಿಯನ್ನು ಮಾಡಿ ಸಿಹಿಯನ್ನು ಹಂಚಲಾಯಿತು.

ಶ್ರೀಶಂಕರಜಯನ್ತೀ ಮಹೋತ್ಸವ- ದಿನಾಂಕ  ರಂದು ಸಾಯಂಕಾಲ ಶ್ರೀಶಂಕರಜಯನ್ತೀ ಮಹೋತ್ಸವವನ್ನು ಸಂಸ್ಥೆಯ ಸಭಾಂಗಣದಲ್ಲಿ ವೈಭವದಿಂದ ಆಚರಿಸಲಾಯಿತು. ಶ್ರೀಶಂಕರಭಗವತ್ಪೂಜ್ಯಪಾದರಿಗೆ ರುದ್ರ-ಪುರುಷಸೂಕ್ತಗಳ ಸಹಿತ ಅಭಿಷೇಕವನ್ನು ಮಾಡಿ ಷೋಡಶೋಪಚಾರ ಪೂಜೆಯನ್ನು ನೆರವೇರಿಸಲಾಯಿತು. ಶ್ರೀಶಂಕರಭಗವತ್ಪಾದರ ಅವತಾರದ ವೈಶಿಷ್ಟ್ಯವನ್ನು ಸಂಕ್ಷೇಪವಾಗಿ ತಿಳಿಸಿಕೊಡಲಾಯಿತು. ನೆರೆದಿದ್ದ ಭಕ್ತರೆಲ್ಲರಿಗೂ ಪ್ರಸಾದದ ವಿತರಣೆಯಾದ ನಂತರ ಸಮಾರಂಭವು ಸಾಂಗಮಂಗಳಪ್ರದವಾಗಿ ಸಂಪನ್ನವಾಯಿತು.

ಶ್ರದ್ಧಾಞ್ಜಲಿ- ಸಂಸ್ಥೆಯ ಆವರಣದಲ್ಲಿ ಸುಮಾರು 35 ವರ್ಷಗಳಿಂದಲೂ ನಿರನ್ತರವಾಗಿ ಗುರುಕುಲಪದ್ಧತಿಯಂತೆ ವಿದ್ಯಾರ್ಥಿಗಳಿಗೆ ವಿದ್ಯಾದಾನಮಾಡುತ್ತಾ ಚಿರಪರಿಚಿತರಾಗಿ, ಸಂಸ್ಥೆಯ ಕಾರ್ಯಕಾರಿಸಮಿತಿ ಸದಸ್ಯರೂ ಆಗಿದ್ದ ಶ್ರೀ ವಿ.ಕೆ. ರಾಮಣ್ಣನವರು ದಿನಾಂಕ 01-07-2025 ರಂದು ನಿಧನರಾದರು. ತತ್ಸಂಬಂಧವಾಗಿ ಈ ಮಹನೀಯರ ಸ್ಮರಣಾರ್ಥ ಶ್ರದ್ಧಾಞ್ಜಲಿ ಸಭೆಯನ್ನು 15-07-2025 ಮಂಗಳವಾರ ಅಪರಾಹ್ಣ 5 ಘಂಟೆಗೆ ಶ್ರೀ ಕೆ. ಸಚ್ಚಿದಾನಂದಮೂರ್ತಿಯವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಶ್ರೀರಾಮಣ್ಣನವರ ಸಾಧನೆಯ ಬಗ್ಗೆ ಹಲವರು ತಮ್ಮ ಅನಿಸಿಕೆಗಳನ್ನು

ತಿಳಿಸಿದರು. ಒಂದು ನಿಮಿಷದ ಮೌನಾಚರಣೆಯೊಂದಿಗೆ ಸಭೆಯು ಮುಕ್ತಾಯವಾದ ನಂತರ ಸರ್ವರಿಗೂ ಭೋಜನದ ವ್ಯವಸ್ಥೆಯನ್ನು ಮಾಡಲಾಗಿತ್ತು.

ಸರ್ವಸದಸ್ಯರ ವಿಶೇಷ ಸಭೆ- 1972 ನೇ ಇಸವಿಯಲ್ಲಿ ಸಿದ್ಧಪಡಿಸಿದ್ದ ಸಂಸ್ಥೆಯ ಬೈಲಾವನ್ನು ಪರಿಷ್ಕರಿಸಿ, ಹೊಸದಾಗಿ ಸದಸ್ಯತ್ವದ ಅಭಿಯಾನವನ್ನು ಪ್ರಾರಂಭಿಸಲು ಅವಶ್ಯಕವಾಗಿದ್ದ ಸರ್ವಸದಸ್ಯರ ವಿಶೇಷ ಸಭೆಯನ್ನು ದಿನಾಂಕ 17-07-2025 ಗುರುವಾರ ಕರೆಯಲಾಗಿತ್ತು. ಶ್ರೀ ಕೆ. ಸಚ್ಚಿದಾನಂದಮೂರ್ತಿಯವರು ಹಾಗೂ ಶ್ರೀ ಎಮ್.ವಿ. ರಮೇಶ್ ರವರು ಕ್ರಮವಾಗಿ ಸಭೆಯ ಅಧ್ಯಕ್ಷತೆಯನ್ನೂ, ಸಚೇತಕತ್ವವನ್ನೂ ವಹಿಸಿದ್ದರು. ಪರಿಷ್ಕೃತವಾಗಿರುವ ಬೈಲಾದ ಪ್ರತಿಯೊಂದು ಅಂಶವನ್ನೂ ಶ್ರೀ ಎಮ್.ಎನ್. ಶ್ರೀನಿವಾಸಬಾಬುರವರು ಸಭೆಗೆ ಓದಿ ತಿಳಿಸಿ ಅದರ ಅವಶ್ಯಕತೆಯನ್ನೂ ವಿವರಿಸಿದರು. ನಂತರ ಸದಸ್ಯರ ಅಭಿಪ್ರಾಯವನ್ನು ಪಡೆದು ಅವರ ಸಲಹೆಯ ಮೇರೆ ಕೆಲವು ತಿದ್ದುಪಡಿಗಳನ್ನು ಮಾಡಿ ಬೈಲಾವನ್ನು ಅಂತಿಮಗೊಳಿಸಲಾಯಿತು. ಅದನ್ನು ಮುಂದೆ 07-09-2025 ರಂದು ನಡೆಯಬೇಕಾಗಿರುವ ಸರ್ವಸದಸ್ಯರ ಸಾಮಾನ್ಯಸಭೆಯಲ್ಲಿ ಮಂಡಿಸಿ ಒಪ್ಪಿಗೆಯನ್ನು ಪಡೆದು ಸಹಕಾರ ಇಲಾಖೆಗೆ ಸಲ್ಲಿಸಬೇಕಾಗಿದೆ.

ಉಪಾಕರ್ಮ- ದಿನಾಂಕ 09-08-2025 ರಂದು ಋಕ್ ಶಾಖೆಯ ಉತ್ಸರ್ಜನೋಪಾಕರ್ಮವು ಯಥಾವಿಧಿ ಸಾಂಗವಾಗಿ ನೆರವೇರಿತು. ಸುಮಾರು 130 ವಿಪ್ರರು ಭಾಗಿಗಳಾಗಿ ಯಜ್ಞೋಪವೀತ ಧಾರಣೆಯನ್ನು ಮಾಡಿಕೊಂಡರು. ವಿದ್ವಾಂಸರಾದ ಶ್ರೀ ಫಣೀಶಶರ್ಮಾ, ಶ್ರೀ ಪ್ರಶಾನ್ತಶರ್ಮಾ, ಶ್ರೀ ಪ್ರೀತಮ್ ಶರ್ಮಾ ರವರು ಉಪಾಕರ್ಮದ ಎಲ್ಲ ವಿಧಿಗಳನ್ನೂ ನೆರವೇರಿಸಿಕೊಟ್ಟರು. ಎಲ್ಲರಿಗೂ ಉಪಾಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು.

ಗಣೇಶೋತ್ಸವ- ದಿನಾಂಕ 26-08-2025 ರಂದು ಶ್ರೀಸ್ವರ್ಣಗೌರೀ ಪ್ರತಿಷ್ಠಾಪನೆ ಹಾಗೂ 27-08-2025 ರಂದು ಶ್ರೀವರಸಿದ್ಧಿವಿನಾಯಕ ಪ್ರತಿಷ್ಠಾಪನೆ ಯಥಾವಿಧಿ ನೆರವೇರಿತು. ನಂತರ 31-08-2025 ರಂದು ಮಹಾಮಂಗಳಾರತಿಯನ್ನು ಏರ್ಪಡಿಸಲಾಗಿತ್ತು. ಐದೂ ದಿನಗಳಲ್ಲಿ ಗೌರೀಸಮೇತನಾದ ವಿನಾಯಕನಿಗೆ ವಿಶೇಷಪೂಜೆಯನ್ನೂ, ಪ್ರಸಾದದ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಅದೇ ದಿನ ವಿಗ್ರಹಗಳನ್ನು ವಿಸರ್ಜಿಸಲಾಯಿತು. ಎಲ್ಲ ಕಾರ್ಯಕ್ರಮಗಳೂ ವಿಜೃಂಭಣೆಯಿಂದ ನಡೆಯಿತು.

ಶ್ರೀಶಾರದಾನಿಕೇತನ ಅಸೋಸಿಯೇಷನ್ (ರಿ)
ಬೆಂಗಳೂರು-560 019

**ಸರ್ವಸದಸ್ಯರ ಪ್ರಥಮ ಸಾಮಾನ್ಯ ಸಭೆ**- ದಿನಾಂಕ 07-09-2025 ಭಾನುವಾರದಂದು ಸಂಸ್ಥೆಯ ಸಭಾಂಗಣದಲ್ಲಿ ಸರ್ಕಾರದ ನಿಯಮಾವಳಿಗಳಂತೆ ಸರ್ವಸದಸ್ಯರ ಸಾಮಾನ್ಯಸಭೆಯು ನಿಗದಿಪಡಿಸಿದ ಕಾರ್ಯಕ್ರಮಕ್ಕನುಗುಣವಾಗಿ ಪ್ರಾತಃಕಾಲ 11-00 ಘಂಟೆಗೆ ವೇದಘೋಷದೊಂದಿಗೆ ಪ್ರಾರಂಭವಾಯಿತು. ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎಂ.ವಿ. ರಮೇಶ್ ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

